ಶುಕ್ರವಾರ, ಏಪ್ರಿಲ್ 9, 2021 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೆ–ರೇರಾ ಆದೇಶ ಪಾಲಿಸದ ಡೆವಲಪರ್‌ಗಳು ● ಗ್ರಾಹಕರಿಗೆ ನ್ಯಾಯ ಮರೀಚಿಕೆ

₹ 183 ಕೋಟಿ ವಸೂಲಾತಿ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಅವ್ಯವಹಾರಗಳಿಗೆ ಕಡಿವಾಣ ಹಾಕಲು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ-ರೇರಾ) ರಚನೆ ಆದ ಬಳಿಕವೂ ಗ್ರಾಹಕರಿಗೆ ನ್ಯಾಯ ಮರೀಚಿಕೆಯೇ ಆಗಿದೆ. ಸುಮಾರು 447 ಪ್ರಕರಣಗಳಿಗೆ ಸಂಬಂಧಿಸಿ ಬಿಲ್ಡರ್‌ಗಳಿಂದ ವಸೂಲಾತಿ ಮಾಡುವ ಸಂಬಂಧ ಪ್ರಾಧಿಕಾರವು ಕಂದಾಯ ವಸೂಲಾತಿ ಪ್ರಮಾಣಪತ್ರಗಳನ್ನು (ಆರ್‌ಆರ್‌ಸಿ) ಜಾರಿಗೊಳಿಸಿದೆ. ಆದರೆ, ವಸೂಲಾತಿ ಪ್ರಕ್ರಿಯೆ ಆಮೆಗತಿಯಲ್ಲಿ ಸಾಗುತ್ತಿದೆ.

ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಗ್ರಾಹಕರಿಗೆ ವಂಚನೆ ಆಗಿರುವ ಪ್ರಕರಣಗಳಲ್ಲಿ ಪ್ರಾಧಿಕಾರವು ನಷ್ಟದ ಮೊತ್ತವನ್ನು ರಿಯಲ್ ಎಸ್ಟೇಟ್ ನಿಯಂತ್ರಣ ಕಾಯ್ದೆ ಪ್ರಕಾರ ಡೆವಲಪರ್‌ಗಳಿಂದ ವಸೂಲಿ ಮಾಡಿಕೊಡಬೇಕು. ಹಣವನ್ನು ಹಿಂತಿರುಗಿಸುವಂತೆ ಅಥವಾ ಆಸ್ತಿಯನ್ನು ಹಸ್ತಾಂತರಿಸುವಂತೆ ಪ್ರಾಧಿಕಾರವು ಆದೇಶ ಮಾಡಿದರೂ ಅದು ಜಾರಿ ಆಗುತ್ತಿಲ್ಲ. ಗ್ರಾಹಕರು ನ್ಯಾಯ ಪಡೆಯಲು ಕಚೇರಿ ಅಲೆಯಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಪ್ರಾಧಿಕಾರವು 2021ರ ಏ.3ರವರೆಗೆ ಒಟ್ಟು 2,870 ಆದೇಶಗಳನ್ನು ಮಾಡಿದೆ. 447 ಪ್ರಕರಣಗಳಲ್ಲಿ ಒಟ್ಟು ₹185.13 ಕೋಟಿ ಮೊತ್ತವನ್ನು ಬಿಲ್ಡರ್‌ಗಳಿಂದ ವಸೂಲಿ ಮಾಡಬೇಕಿದೆ. ಆದರೆ, ಇದುವರೆಗೆ ಐದು ಪ್ರಕರಣಗಳಲ್ಲಿ ಮಾತ್ರ ವಸೂಲಾತಿ ಆದೇಶಗಳ ಜಾರಿ ಪ್ರಕ್ರಿಯೆ ಪೂರ್ಣಗೊಂಡಿದೆ. ವಸೂಲಾದ ಮೊತ್ತ ₹ 1.67 ಕೋಟಿ ಮಾತ್ರ. ಒಟ್ಟು ₹ 183.46 ಕೋಟಿ ವಸೂಲಾತಿ ಬಾಕಿ ಇದೆ. ಇದಲ್ಲದೇ 222 ದೂರುಗಳನ್ನು ಪ್ರಾಧಿಕಾರವು ಇತ್ಯರ್ಥಪಡಿಸಿದ್ದು ಇದರ ಮೊತ್ತ ₹ 17.50 ಕೋಟಿಗಳಷ್ಟಿದೆ.

> **ಅವ್ಯವಹಾರಗಳಿಗೆ ಕಡಿವಾಣ ಹಾಕಲು ಕಾನೂನು ರೂಪಿಸಿದರೆ ಸಾಲದು. ನ್ಯಾಯ ಕೋರಿ ರೇರಾ ಮೊರೆಹೋಗುವ ಗ್ರಾಹಕರಿಗೆ ಪರಿಹಾರ ಸಿಗಬೇಕು.**
>
> **ಎಂ.ಎಸ್.ಶಂಕರ್,** ಪ್ರಧಾನ ಕಾರ್ಯದರ್ಶಿ, ಫೋರಮ್ ಫಾರ್ ಪೀಪಲ್ಸ್ ಕಲೆಕ್ಟಿವ್ ಎಫರ್ಟ್ಸ್

‘ಗ್ರಾಹಕರಿಗೆ ನ್ಯಾಯ ಕೊಡಿಸುವಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಕಾಯ್ದೆ ದುರ್ಬಲವಾಗಿದೆ ಎಂಬುದು ಇದರರ್ಥವಲ್ಲ. ಪ್ರಾಧಿಕಾರದ ಅಥವಾ ನ್ಯಾಯಿಕ ಅಧಿಕಾರಿಯ ಆದೇಶ 60 ದಿನಗಳ ಒಳಗೆ ಜಾರಿಯಾಗಬೇಕು ಎಂದು ಕಾಯ್ದೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದರೆ, ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಸರ್ಕಾರ, ಪ್ರಾಧಿಕಾರ ಹಾಗೂ ಜಿಲ್ಲಾಡಳಿತಗಳು ಗಂಭೀರ ಪ್ರಯತ್ನಗಳನ್ನು ನಡೆಸುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸುತ್ತಾರೆ ‘ಫೋರಮ್ ಫಾರ್ ಪೀಪಲ್ಸ್ ಕಲೆಕ್ಟಿವ್ ಎಫರ್ಟ್ಸ್’ನ ಪ್ರಧಾನ ಕಾರ್ಯದರ್ಶಿ ಎಂ.ಎಸ್.ಶಂಕರ್.

’ಪ್ರಾಧಿಕಾರದ ಆದೇಶವನ್ನು ಡೆವಲಪರ್‌ಗಳು ಪಾಲಿಸದೇ ಹೋದರೆ ಅವರಿಗೆ ಯೋಜನಾ ವೆಚ್ಚದ ಶೇ 5ರಷ್ಟು ಮೊತ್ತವನ್ನು ದಂಡವನ್ನಾಗಿ ವಿಧಿಸುವುದಕ್ಕೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಕಾಯ್ದೆ ಸೆಕ್ಷನ್ 63 ಮತ್ತು 64 ಅವಕಾಶ ಕಲ್ಪಿಸುತ್ತವೆ. ಈ ಅಧಿಕಾರವನ್ನು ಪ್ರಾಧಿಕಾರವು ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲ. ಈ ಬಗ್ಗೆ ಅನೇಕ ಬಾರಿ ಮನವಿ ಸಲ್ಲಿಸಿದ್ದೇವೆ. ಹಲವಾರು ಸಭೆಗಳಲ್ಲಿ ಈ ಬಗ್ಗೆ ಒತ್ತಾಯಿಸಿದ್ದೇವೆ. ಆದರೂ ಈ ಅಧಿಕಾರ ಬಳಸಲು ಪ್ರಾಧಿಕಾರವು ಹಿಂದೇಟು ಹಾಕುತ್ತಿದೆ’ ಎಂದು ದೂರಿದರು.

‘ರೇರಾ ಮೊರೆ ಹೋದರೆ ನಮಗೆ ನ್ಯಾಯ ದೊರಕುತ್ತದೆ ಎಂಬ ಪರಿಸ್ಥಿತಿಯನ್ನು ಸರ್ಕಾರ ನಿರ್ಮಿಸಬೇಕು. ವಸೂಲಿ ಆದೇಶಗಳು ಕಟ್ಟುನಿಟ್ಟಾಗಿ ಜಾರಿಯಾದರೆ ಮಾತ್ರ ಪ್ರಾಧಿಕಾರದ ಮೇಲೆ ಗ್ರಾಹಕರಲ್ಲಿ ಭರವಸೆ ಮೂಡಲು ಸಾಧ್ಯ. ಡೆವಲಪರ್‌ಗಳಿಗೂ ಪ್ರಾಧಿಕಾರದ ಬಗ್ಗೆ ಭಯ ಮೂಡಲು ಸಾಧ್ಯ’ ಎಂದರು.

‘ವಸೂಲಿ ಆದೇಶ ಜಾರಿ–ತಳಹಂತದಲ್ಲಿ ವಿಳಂಬ’

‘ಗ್ರಾಹಕರಿಗೆ ವಂಚನೆ ಆಗಿರುವ ಪ್ರಕರಣಗಳಲ್ಲಿ ಸಂಬಂಧ ಕಂದಾಯ ವಸೂಲಿ ಪ್ರಮಾಣಪತ್ರಗಳನ್ನು (ಆರ್‌ಆರ್‌ಸಿ) ನಾವು ಜಾರಿ ಮಾಡುತ್ತೇವೆ. ಇದರ ಜಾರಿಗೆ ಜಿಲ್ಲಾಡಳಿತಗಳೂ ಪ್ರಕ್ರಿಯೆ ಆರಂಭಿಸಿವೆ. ತಪ್ಪಿತಸ್ಥರಿಗೆ ಹಲವಾರು ನೋಟಿಸ್‌ಗಳನ್ನು ನೀಡಿ ಬಳಿಕ ಜಪ್ತಿಗೆ ಕ್ರಮ ಕೈಗೊಳ್ಳಬೇಕು. ಆದರೆ, ತಹಶೀಲ್ದಾರ್ ಹಾಗೂ ತಳ ಹಂತದ ಕಂದಾಯ ಅಧಿಕಾರಿಗಳ ಮಟ್ಟದಲ್ಲಿ ಈ ಆದೇಶ ಜಾರಿ ವಿಳಂಬವಾಗುತ್ತಿದೆ’ ಎನ್ನುತ್ತಾರೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಲತಾ ಕುಮಾರಿ.

‘ಕಾಯ್ದೆ ಪ್ರಕಾರ ಇಂತಹ ಆರ್‌ಆರ್‌ಸಿಗೆ ಸಂಬಂಧಿಸಿದ ವಸೂಲಿಗಳನ್ನು ಮಾಡಬೇಕಿರುವುದು ಜಿಲ್ಲಾಡಳಿತ. ಅವರು ನಮ್ಮಿಂದ ಇದು ಸಾಧ್ಯವಿಲ್ಲ ಎಂದು ಹೇಳಿದರೆ ಮಾತ್ರ ಪ್ರಾಧಿಕಾರವು ಪರ್ಯಾಯ ಕ್ರಮಗಳನ್ನು ಕೈಗೊಳ್ಳಬಹುದು’ ಎಂದು ಅವರು ತಿಳಿಸಿದರು.

‘ರೇರಾ ಆದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳುವಂತೆ ಕಂದಾಯ ಇಲಾಖೆ ಹಿರಿಯ ಅಧಿಕಾರಿಗಳ ಮೂಲಕವೂ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ಕೊಡಿಸಿದ್ದೇವೆ. ಪತ್ರಗಳನ್ನೂ ಬರೆದಿದ್ದೇವೆ. ಅನೇಕ ಸಭೆಗಳಲ್ಲೂ ಈ ಬಗ್ಗೆ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ. ಆದರೂ ರೇರಾದ ವಸೂಲಾತಿ ಆದೇಶಗಳ ಜಾರಿ ವಿಳಂಬವಾಗುತ್ತಿದೆ’ ಎಂದು ಅವರೂ ಬೇಸರ ವ್ಯಕ್ತಪಡಿಸಿದರು.

ಮುಷ್ಕರದ ಮೂರನೇ ದಿನ ಪ್ರಯಾಣಿಕರಿಗೆ ಹೆಚ್ಚಾಗಿ ಬಿಸಿ ಮುಟ್ಟುವ ಸಾಧ್ಯತೆ

ಯುಗಾದಿ ವೇಳೆ ಪರದಾಟ ಹೆಚ್ಚುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರದ ಮೂರನೇ ದಿನ ಪ್ರಯಾಣಿಕರಿಗೆ ಹೆಚ್ಚಾಗಿ ಬಿಸಿ ಮುಟ್ಟುವ ಸಾಧ್ಯತೆ ಇದೆ. ಯುಗಾದಿ ಹಿಂದಿನ ಮತ್ತು ಮುಂದಿನ ದಿನಗಳಲ್ಲಿ ಸಾಲು–ಸಾಲು ರಜೆಗಳಿದ್ದು, ಊರಿಗೆ ಹೋಗುವವರು ಶುಕ್ರವಾರ ಮತ್ತು ಶನಿವಾರ ಪರದಾಡುವ ಸಾಧ್ಯತೆ ಇದೆ.

ಏ.13 ರಂದು ಯುಗಾದಿ ಇದ್ದರೂ ಹಿಂದಿನ ಎರಡು ದಿನ ಮತ್ತು ಮುಂದಿನ ಒಂದು ದಿನ ಸರ್ಕಾರಿ ರಜೆಗಳಿವೆ. ಏ.10 ರಂದು ಎರಡನೇ ಶನಿವಾರ, ಭಾನುವಾರ ರಜೆಗಳಿವೆ. ಮಧ್ಯದಲ್ಲಿ ಸೋಮವಾರ ರಜೆ ಇಲ್ಲ. ಮಂಗಳವಾರ ಯುಗಾದಿ ಮತ್ತು ಬುಧವಾರ ಅಂಬೇಡ್ಕರ್ ಜಯಂತಿ ರಜೆ ಇದೆ. ಸೋಮವಾರ ಒಂದು ದಿನದ ರಜೆಯನ್ನು ನೌಕರರು ಪಡೆದುಕೊಂಡರೆ ಐದು ದಿನ ಒಟ್ಟಿಗೆ ರಜೆ ಸಿಗಲಿದೆ.

ವಾರಾಂತ್ಯ ಮತ್ತು ಯುಗಾದಿ ಆಚರಣೆಗೆ ಬೆಂಗಳೂರಿನ ಜನರು ತಮ್ಮ ಊರುಗಳಿಗೆ ಹೊರಡುವ ಸಾಧ್ಯತೆ ಇದೆ. ಕಳೆದ ವರ್ಷ ಯುಗಾದಿ ವೇಳೆಗೆ ಕೋವಿಡ್ ಕಾರಣ ಬಸ್ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಅದರ ಹಿಂದಿನ ವರ್ಷದ ಯುಗಾದಿ ಹಬ್ಬಕ್ಕೆ ಪ್ರತಿನಿತ್ಯದ ಬಸ್‌ಗಳ ಜೊತೆಗೆ ಕೆಎಸ್‌ಆರ್‌ಟಿಸಿ ಹೆಚ್ಚುವರಿಯಾಗಿ 600 ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಿತ್ತು. ಎಲ್ಲಾ ಹಬ್ಬಗಳ ಸಂದರ್ಭದಲ್ಲೂ 400, 500 ಹೆಚ್ಚುವರಿ ಬಸ್‌ಗಳ ವ್ಯವಸ್ಥೆಯನ್ನು ಕೆಎಸ್‌ಆರ್‌ಟಿಸಿ ಮಾಡುತ್ತದೆ. ಜನರ ನೂಕುನುಗ್ಗಲು ತಪ್ಪುವುದಿಲ್ಲ. ಈ ವರ್ಷ ದಿನನಿತ್ಯ ಓಡಾಡುವ ಬಸ್‌ಗಳು ಇಲ್ಲದ ಕಾರಣ ಸಾರ್ವಜನಿಕರು ಪರದಾಡಬೇಕಾದ ಸ್ಥಿತಿ ಎದುರಾಗುವ ಸಾಧ್ಯತೆ ಇದೆ.

‘ವಿಶೇಷ ರೈಲುಗಳ ಕಾರ್ಯಾಚರಣೆ, ಖಾಸಗಿ ಬಸ್‌ಗಳ ವ್ಯವಸ್ಥೆ ಇದೆ. ಆದರೂ, ಸ್ವಲ್ಪ ಸಮಸ್ಯೆ ಆಗಬಹುದು. ಕೋವಿಡ್ ಹೆಚ್ಚುತ್ತಿರುವ ಕಾರಣ ಜನರು ಪ್ರಯಾಣ ಕಡಿಮೆ ಮಾಡುವುದು ಸೂಕ್ತ. ಈ ಸಂಬಂಧ ಸರ್ಕಾರ ಕೂಡ ನಿಯಮಾವಳಿ ತರುವ ಸಾಧ್ಯತೆ ಇದೆ’ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ತಿಳಿಸಿದರು.

ಸಾರಿಗೆ ಮುಷ್ಕರ: ವಿಶೇಷ ರೈಲು ಸೇವೆ

ಹುಬ್ಬಳ್ಳಿ: ಸಾರಿಗೆ ಮುಷ್ಕರದಿಂದ ಪ್ರಯಾಣಿಕರಿಗೆ ಪರ್ಯಾಯ ಸಂಚಾರ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ವಿಶೇಷ ರೈಲು ಓಡಿಸಬೇಕು ಎಂಬ ರಾಜ್ಯ ಸರ್ಕಾರದ ಮನವಿಗೆ ನೈರುತ್ಯ ರೈಲ್ವೆ ವಲಯ ಸ್ಪಂದಿಸಿದೆ. ಶುಕ್ರವಾರದಿಂದ ಒಂಬತ್ತು ವಿಶೇಷ ರೈಲುಗಳು ಪ್ರಯಾಣಿಕರ ಸೇವೆಗೆ ಲಭ್ಯವಾಗಲಿವೆ.

ಯಶವಂತಪುರ ಬೆಳಗಾವಿ ರೈಲು ಏ.9 ರಂದು ರಾತ್ರಿ 10.15ಕ್ಕೆ ಯಶವಂತಪುರ ದಿಂದ ಹೊರಟು ಮರುದಿನ ಬೆಳಿಗ್ಗೆ 9.10ಕ್ಕೆ ಬೆಳಗಾವಿ ತಲುಪಲಿದೆ. ಅದೇ ದಿನ ರಾತ್ರಿ 10ಕ್ಕೆ ಬೆಳಗಾವಿ ಯಿಂದ ಯಶವಂತಪುರಕ್ಕೆ ಹೊರಡಲಿದೆ. ಏ.9ರಂದು ಸಂಜೆ 6.20ಕ್ಕೆ ಯಶವಂತಪುರ ದಿಂದ ವಿಜಯಪುರಕ್ಕೆ ರೈಲು ಹೊರಡಲಿದೆ.

ಏ.9 ರಂದು ಬೆಂಗಳೂರು ಮೈಸೂರು ನಡುವಿನ ರೈಲು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನಿಂದ, ಮಧ್ಯಾಹ್ನ 2.30ಕ್ಕೆ ಮೈಸೂರಿನಿಂದ ಹೊರಡಲಿದೆ. ಏ. 9, 10 ರಂದು ಮೈಸೂರು ಯಶವಂತಪುರ ನಡುವೆ ಸಂಚರಿಸುವ ರೈಲು ಮೈಸೂರಿನಿಂದ ಬೆಳಿಗ್ಗೆ 8.25ಕ್ಕೆ, ಯಶವಂತಪುರದಿಂದ ಮಧ್ಯಾಹ್ನ 1.15ಕ್ಕೆ ಹೊರಡಲಿದೆ. ಮೈಸೂರು ಬೀದರ್ ರೈಲು ಏ.9 ರಂದು ರಾತ್ರಿ 8ಕ್ಕೆ ಮೈಸೂರಿನಿಂದ, ಮರುದಿನ ಮಧ್ಯಾಹ್ನ 2ಕ್ಕೆ ಬೀದರ್ ನಿಂದ ಹೊರಡಲಿದೆ. ಯಶವಂತಪುರ ಬೀದರ್ ರೈಲು ಕಲಬುರ್ಗಿ ಮಾರ್ಗವಾಗಿ ಸಂಚರಿಸಲಿದ್ದು, ಏ.10 ರಂದು ರಾತ್ರಿ 10.15ಕ್ಕೆ ಯಶವಂತಪುರ ದಿಂದ, ಮರುದಿನ ಮಧ್ಯಾಹ್ನ 2ಕ್ಕೆ ಬೀದರ್ ನಿಂದ ಹೊರಡಲಿದೆ.

‘ಕರ್ತವ್ಯಕ್ಕೆ ಹಾಜರಾಗದಿದ್ದರೆ ಕಠಿಣ ಕ್ರಮ’

ಹೊಳಲ್ಕೆರೆ (ಚಿತ್ರದುರ್ಗ ಜಿಲ್ಲೆ): ಸಾರಿಗೆ ನೌಕರರು ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗದಿದ್ದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದು ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಂ. ಚಂದ್ರಪ್ಪ ಎಚ್ಚರಿಕೆ ನೀಡಿದರು.

ಇಲ್ಲಿ ಬುಧವಾರ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿ, ‘ಸಾರಿಗೆ ನೌಕರರಿಗೆ ಯಾವುದೇ ಕಾರಣಕ್ಕೂ 6ನೇ ವೇತನ ಆಯೋಗದ ಸೌಲಭ್ಯಗಳನ್ನು ನೀಡುವುದಿಲ್ಲ. ಸರ್ಕಾರಿ ನೌಕರರಿಗೆ ನೀಡುವಷ್ಟೇ ಸೌಲಭ್ಯಗಳನ್ನು ಸಾರಿಗೆ ನೌಕರರಿಗೂ ನೀಡಲಾಗುತ್ತಿದೆ. 9 ಬೇಡಿಕೆಗಳಲ್ಲಿ 8 ಅನ್ನು ಈಡೇರಿಸಿದ್ದರೂ ಕೋಡಿಹಳ್ಳಿ ಚಂದ್ರಶೇಖರ್ ಪ್ರಚೋದನೆಯಿಂದ ಮುಷ್ಕರ ನಡೆಸುತ್ತಿರುವುದು ಸರಿಯಲ್ಲ. ಅವರ ಮಾತು ನಂಬಿ ಮುಷ್ಕರ ಮುಂದುವರಿಸಿದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ಕೋಡಿಹಳ್ಳಿ ಚಂದ್ರಶೇಖರ್ ಅವರು ರೈತ ಸಂಘದಲ್ಲಿ ತಮ್ಮ ಮಾತು ನಡೆಯುವುದಿಲ್ಲ ಎಂದು ಇಲ್ಲಿಗೆ ಬಂದು ಸೇರಿಕೊಂಡಿದ್ದಾರೆ. ನೌಕರರು ಕೆಲಸ ಮಾಡುತ್ತಲೇ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸಬೇಕೇ ವಿನಾ ಮುಷ್ಕರ ನಡೆಸಬಾರದು’ ಎಂದು ಅವರು ಹೇಳಿದರು.

‘ಕೋವಿಡ್ ಸಂಕಷ್ಟದಲ್ಲೂ 1.30 ಲಕ್ಷ ಸಾರಿಗೆ ನೌಕರರಿಗೆ ವೇತನ ನೀಡಲಾಗಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತೆ ₹ 1,780 ಕೋಟಿ ಬಿಡುಗಡೆ ಮಾಡಿದ್ದಾರೆ. ಸಾರಿಗೆ ನೌಕರರ ಮುಷ್ಕರದ ಬಗ್ಗೆ ಸಾರ್ವಜನಿಕರೇ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ನೌಕರರ ಕ್ರಮವನ್ನು ಖಂಡಿಸುತ್ತಿದ್ದಾರೆ. ರಾಜ್ಯ ಸಾರಿಗೆ ನಿಗಮಕ್ಕೆ 107 ವರ್ಷಗಳ ಇತಿಹಾಸ ಇದೆ. ದೇಶದಲ್ಲೇ ಪ್ರತಿಷ್ಠಿತ ಸಂಸ್ಥೆ ಎಂಬ ಮನ್ನಣೆ ಇದೆ. ಇದಕ್ಕೆ ಮಸಿ ಬಳಿಯುವ ಕೆಲಸ ಮಾಡಬಾರದು’ ಎಂದು ಚಂದ್ರಪ್ಪ ಎಚ್ಚರಿಸಿದರು.

ಕೋವಿಡ್ ನಿಯಂತ್ರಣಕ್ಕೆ ಸಚಿವ ಡಾ.ಕೆ. ಸುಧಾಕರ್ ಸಭೆ

4,000 ಹೆಚ್ಚುವರಿ ಹಾಸಿಗೆಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಮುಂದಿನ ಹತ್ತು ದಿನಗಳವರೆಗೆ ನಗರದ ಆಸ್ಪತ್ರೆಗಳಲ್ಲಿ ಹೆಚ್ಚುವರಿಯಾಗಿ 4,000 ಹಾಸಿಗೆಗಳನ್ನು ಕಾಯ್ದಿರಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಆರೋಗ್ಯ ಇಲಾಖೆಗೆ ಬೇಡಿಕೆ ಸಲ್ಲಿಸಿದೆ.

ಬಿಬಿಎಂಪಿ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಬುಧವಾರ ವಿಕಾಸಸೌಧದಲ್ಲಿ ಹಿರಿಯ ಅಧಿಕಾರಿಗಳ ಸಭೆ ನಡೆಸಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ, ಹೆಚ್ಚುವರಿ ಹಾಸಿಗೆಗಳಿಗೆ ಬೇಡಿಕೆ ಸಲ್ಲಿಸಿದರು.

ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸುಧಾಕರ್, ‘ಈಗಾಗಲೇ 1,000 ಹಾಸಿಗೆಗಳನ್ನು ಬಿಬಿಎಂಪಿ ಮೂಲಕ ಬಳಕೆಗಾಗಿ ಕಾಯ್ದಿರಿಸಲಾಗಿದೆ. ಹೆಚ್ಚುವರಿಯಾಗಿ 4,000 ಹಾಸಿಗೆಗಳಿಗೆ ಬೇಡಿಕೆ ಬಂದಿದೆ. ಆಸ್ಪತ್ರೆಗಳ ಮುಖ್ಯಸ್ಥರ ಜತೆ ಸಭೆ ನಡೆಸಿ ಈ ಸಂಬಂಧ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

ಖಾಸಗಿ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳಲ್ಲಿ ಶೇಕಡ 50 ರಷ್ಟು ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಮೀಸಲಿಡುವಂತೆ ಸೂಚಿಸಲಾಗಿದೆ. ಮೀಸಲಿಟ್ಟ ಹಾಸಿಗೆಗಳಲ್ಲಿ ಅರ್ಧದಷ್ಟನ್ನು ಸರ್ಕಾರದ ಮೂಲಕ ಶಿಫಾರಸುಗೊಂಡ ರೋಗಿಗಳಿಗೆ ಒದಗಿಸುವುದನ್ನು ಕಡ್ಡಾಯ ಮಾಡಲಾಗುವುದು ಎಂದು ತಿಳಿಸಿದರು.

ನಿತ್ಯ 1 ಲಕ್ಷ ಪರೀಕ್ಷೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತಿದಿನ 5,000 ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿವೆ. ಆದ್ದರಿಂದ ಒಂದು ಪ್ರಕರಣಕ್ಕೆ 20 ಸಂಪರ್ಕಿತರಂತೆ ನಿತ್ಯ ಒಂದು ಲಕ್ಷ ಮಂದಿಗೆ ಕೋವಿಡ್ ಪರೀಕ್ಷೆ ನಡೆಸುವಂತೆ ಆದೇಶಿಸಲಾಗಿದೆ ಎಂದು ಹೇಳಿದರು.

8,500 ಮತಗಟ್ಟೆಗಳ ಹಂತದಲ್ಲಿ ಕೋವಿಡ್ ನಿಯಂತ್ರಣ ಸಮಿತಿಗಳನ್ನು ರಚಿಸಲಾಗಿದೆ. ಅವುಗಳ ಮೂಲಕ ಸೋಂಕಿತರ ಮೇಲೆ ನಿಗಾ ಇಡುವುದು, ಆಸ್ಪತ್ರೆಗೆ ದಾಖಲಿಸುವುದು, ಕೋವಿಡ್ ಪರೀಕ್ಷೆ ನಡೆಸುವ ಕೆಲಸವನ್ನು ಮಾಡಲಾಗುವುದು. 250 ಆಂಬುಲೆನ್ಸ್‌ಗಳನ್ನು ಒದಗಿಸಲಾಗಿದೆ. ಹೆಚ್ಚುವರಿಯಾಗಿ ವಾರ್ಡ್‌ಗೆ ತಲಾ ಒಂದು ಆಂಬುಲೆನ್ಸ್ ಒದಗಿಸಲು ಸಿದ್ಧತೆ ನಡೆದಿದೆ ಎಂದು ಸುಧಾಕರ್ ಮಾಹಿತಿ ನೀಡಿದರು.

ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಸೇರಿದಂತೆ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳ ಪಾಲನೆ ಮೇಲೆ ನಿಗಾ ವಹಿಸಲು 2,000 ಗೃಹ ರಕ್ಷಕರನ್ನು ನಿಯೋಜಿಸುವಂತೆ ಬಿಬಿಎಂಪಿ ಕೋರಿದೆ. ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರದೇಶಗಳಲ್ಲೂ ಕೋವಿಡ್ ನಿಯಂತ್ರಣಕ್ಕೆ ಬಿಗಿಯಾದ ಕ್ರಮಗಳನ್ನು ಕೈಗೊಳ್ಳುವಂತೆ ಆದೇಶಿಸಲಾಗಿದೆ ಎಂದು ಅವರು ತಿಳಿಸಿದರು.

1.74 ಲಕ್ಷ ಮಂದಿಗೆ ಲಸಿಕೆ ವಿತರಣೆ




ರಾಜ್ಯದಲ್ಲಿ ಗುರುವಾರ 45 ರಿಂದ 60 ವರ್ಷದೊಳಗಿನ 96,553 ಮಂದಿ ಸೇರಿದಂತೆ 1.74 ಲಕ್ಷ ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ.

ಆರೋಗ್ಯ ಉಪ ಕೇಂದ್ರಗಳು ಸೇರಿದಂತೆ 4,313 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ನಡೆದಿದೆ. 60 ವರ್ಷ ಮೇಲ್ಪಟ್ಟವರಲ್ಲಿ 66,996 ಮಂದಿ ಮೊದಲ ಡೋಸ್ ಹಾಗೂ 5,989 ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡರು. ರಾಜ್ಯದಲ್ಲಿ ಈವರೆಗೆ 51.74 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ.


5.69 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.52 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ ಲಸಿಕೆ ಹಾಕಿಸಿಕೊಂಡವರ ಸಂಖ್ಯೆ 24.81 ಲಕ್ಷ ದಾಟಿದೆ. ಅವರಲ್ಲಿ 47,285 ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. ಮುಂಚೂಣಿ ಕೋವಿಡ್ ಯೋಧರಲ್ಲಿ 2.48 ಲಕ್ಷ ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ.

ಈವರೆಗೆ ಲಸಿಕೆ ಪಡೆದವರಲ್ಲಿ ಇಬ್ಬರಿಗೆ ತೀವ್ರ ಸ್ವರೂಪದ ಹಾಗೂ 23 ಮಂದಿಗೆ ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿವೆ.

ನಗರದ ಕೋವಿಡ್ ಪ್ರಕರಣಗಳು



4,64,438 ಒಟ್ಟು ಸೋಂಕಿತರು



ಗುರುವಾರದ ಏರಿಕೆ

4,422 ದೃಢಪಟ್ಟ ಪ್ರಕರಣ

1,243 ಗುಣಮುಖ | **22** ಸಾವು

‘ಸೋಂಕು ನಿವಾರಕ ಸಿಂಪಡಣೆ’

ಬೆಂಗಳೂರು: ‘ಕೋವಿಡ್ ಎರಡನೇ ಅಲೆ ಎಲ್ಲೆಡೆ ವ್ಯಾಪಿಸುತ್ತಿದೆ. ಹೀಗಾಗಿ ಆಮ್ ಆದ್ಮಿ ಪಕ್ಷವು ‘ಸುರಕ್ಷಿತ ಯುಗಾದಿ- ಸಂತಸ ಯುಗಾದಿ’ ಎಂಬ ಘೋಷವಾಕ್ಯದೊಂದಿಗೆ ನಗರದ ಎಲ್ಲಾ ವಾರ್ಡ್‌ಗಳಲ್ಲಿನ ಮಾರುಕಟ್ಟೆ, ಧಾರ್ಮಿಕ ಕ್ಷೇತ್ರ, ಬಸ್ ನಿಲ್ದಾಣ ಸೇರಿದಂತೆ ಜನ ಸಂದಣಿಯ ಇತರ ಸ್ಥಳಗಳಲ್ಲಿ ಕೊರೊನಾ ಸೋಂಕು ನಿವಾರಕ ಸಿಂಪಡಣೆ ಕಾರ್ಯಕ್ರಮ ಹಮ್ಮಿಕೊಂಡಿದೆ’ ಎಂದು ಪಕ್ಷದ ರಾಜ್ಯ ಉಪ ಸಂಚಾಲಕಿ ಶಾಂತಲಾ ದಾಮ್ಲೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು ‘ನಗರದಲ್ಲಿ ಪ್ರತಿದಿನ 5 ಸಾವಿರಕ್ಕೂ ಹೆಚ್ಚು ಕೋವಿಡ್ ಪ್ರಕರಣಗಳು ದಾಖಲಾಗುತ್ತಿರುವುದು ಆತಂಕಕಾರಿ. ಇಂತಹ ಸಮಯದಲ್ಲಿ ಸಾರ್ವಜನಿಕರು ಮಾಸ್ಕ್ ಧರಿಸುವುದು, ದೈಹಿಕ ಅಂತರ ಕಾಪಾಡಿಕೊಳ್ಳುವುದನ್ನು ಕಡ್ಡಾಯವಾಗಿ ಪಾಲಿಸಬೇಕು. ಸಭೆ ಸಮಾರಂಭಗಳಿಂದ ದೂರ ಉಳಿಯುವುದು ಉತ್ತಮ’ ಎಂದರು.

‘ನಗರದ ಎಲ್ಲಾ ವಾರ್ಡ್‌ಗಳಲ್ಲಿ ಸೋಂಕು ನಿವಾರಕ ಸಿಂಪಡಣೆ ಕಾರ್ಯಕ್ರಮಕ್ಕೆ ಪಕ್ಷದ ಕಾರ್ಯಕರ್ತರು ಜೊತೆಯಾಗಲಿದ್ದಾರೆ. ಭಾನುವಾರ ಬೆಳಿಗ್ಗೆ 9 ಗಂಟೆಗೆ ಎನ್.ಆರ್.ರಸ್ತೆಯ ಬಿಬಿಎಂಪಿ ಕೇಂದ್ರ ಕಚೇರಿ ಮುಂಭಾಗದಲ್ಲಿರುವ ಬಸ್ ನಿಲ್ದಾಣದಲ್ಲಿ ಸೋಂಕು ನಿವಾರಕ ಸಿಂಪಡಣೆ ಮಾಡಲಾಗುವುದು. ಪಕ್ಷದ ರಾಷ್ಟ್ರೀಯ ವಕ್ತಾರ ಪೃಥ್ವಿ ರೆಡ್ಡಿ ಇದಕ್ಕೆ ಚಾಲನೆ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ಮಾಸ್ಕ್‌ಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ’ ಎಂದರು.

ವಕೀಲರಿಗೆ ಮುಖ್ಯ ನ್ಯಾಯಮೂರ್ತಿ ಮನವಿ

ಕರ್ನಾಟಕ ಹೈಕೋರ್ಟ್‌ನಲ್ಲಿ ಅಳವಡಿಸಿಕೊಂಡಿರುವ ಮಾದರಿಯನ್ನು ಬೇರೆ ಹೈಕೋರ್ಟ್‌ಗಳಲ್ಲೂ ಅನುಸರಿಸಲು ಸಲಹೆ ಪಡೆಯುತ್ತಿವೆ ಎಂದರು.

‘ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯ ಕಲಾಪಗಳಿಗೆ ಹಾಜರಾಗಿ’

ಬೆಂಗಳೂರು: ಕೋವಿಡ್ ಪ್ರಕರಣ ಹೆಚ್ಚುತ್ತಿರುವ ಕಾರಣ ನ್ಯಾಯಾಲಯದ ಕಲಾಪಗಳಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗುವಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರು ವೈಯಕ್ತಿಕವಾಗಿ ಮನವಿ ಮಾಡಿದರು. ನ್ಯಾಯಾಲಯಗಳಲ್ಲಿರುವ 45 ವರ್ಷಕ್ಕೂ ಮೇಲ್ಪಟ್ಟ ಎಲ್ಲ ಸಿಬ್ಬಂದಿಯೂ ಕೂಡಲೇ ಕೋವಿಡ್ ಲಸಿಕೆ ಪಡೆದುಕೊಳ್ಳುವಂತೆ ತಿಳಿಸಿದರು.



ಎ.ಎಸ್. ಓಕಾ

ವಕೀಲರು ಕೋವಿಡ್‌ಗೆ ತುತ್ತಾಗಿರುವ ಕಾರಣದಿಂದ ಕಳೆದ ಕೆಲ ದಿನಗಳಲ್ಲಿ ಹಲವು ವಿಚಾರಣೆಗಳನ್ನು ಮುಂದೂಡಿದ್ದನ್ನು ಗಮನದಲ್ಲಿಟ್ಟುಕೊಂಡು ನ್ಯಾಯಮೂರ್ತಿ ಅವರು ಮೌಖಿಕವಾಗಿ ಈ ಮನವಿ ಮಾಡಿದರು.

‘ಬೆಂಗಳೂರಿನ ಪ್ರಧಾನ ಪೀಠದ ಮೊದಲ 10 ನ್ಯಾಯಾಲಯಗಳಲ್ಲಿ ಈಗಾಗಲೇ ಗುಣಮಟ್ಟದ ಧ್ವನಿವರ್ಧಕಗಳನ್ನು ಅಳವಡಿಸಲಾಗಿದೆ. ಉಳಿದ ಎಲ್ಲ ನ್ಯಾಯಾಲಯದ ಸಭಾಂಗಣಗಳಲ್ಲೂ ಇದೇ ವ್ಯವಸ್ಥೆ ಕಲ್ಪಿಸಲಾಗುವುದು’ ಎಂದು ಹೇಳಿದರು.

‘ನ್ಯಾಯಾಲಯಕ್ಕೆ ಹಾಜರಾಗದೆ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಇನ್ನೂ ಪರಿಣಾಮಕಾರಿಯಾಗಿ ವಕೀಲರು ವಾದ ಮಾಡಲು ಸಾಧ್ಯವಿದೆ’ ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಅವರೂ ಅಭಿಪ್ರಾಯಪಟ್ಟರು.

‘ಸಾರ್ವಜನಿಕರು, ದಾವೆ ಹೂಡುವವರು, ವಕೀಲರು ನಿಯಮಿತವಾಗಿ ನ್ಯಾಯಾಲಯ ಮತ್ತು ಕಚೇರಿಗಳಿಗೆ ಭೇಟಿ ನೀಡುತ್ತಿದ್ದಾರೆ. ಹೀಗಾಗಿ, ಎಲ್ಲ ಅರ್ಹ ಸಿಬ್ಬಂದಿ ಲಸಿಕೆ ಪಡೆದುಕೊಳ್ಳುವುದು ಅಗತ್ಯ’ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು.

ಸಕ್ರಿಯ ಪ್ರಕರಣಗಳ ಏರಿಕೆಯಿಂದ ವೈದ್ಯಕೀಯ ವ್ಯವಸ್ಥೆಯಲ್ಲಿ ಏರುಪೇರು

ಸರ್ಕಾರಿ ಆಸ್ಪತ್ರೆಗಳಲ್ಲಿ ಐಸಿಯು ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಏರಿಕೆ ಕಂಡ ಬೆನ್ನಲ್ಲಿಯೇ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಕೂಡ ಹೆಚ್ಚಳವಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳು ಹಾಗೂ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಮೀಸಲಿರಿಸಿದ ಐಸಿಯು ಮತ್ತು ವೆಂಟಿಲೇಟರ್ ಸಹಿತ ಹಾಸಿಗೆಗಳು ಬಹುತೇಕ ಭರ್ತಿಯಾಗಿದ್ದು, ಸದ್ಯ 19 ಹಾಸಿಗೆಗಳು ಮಾತ್ರ ಖಾಲಿಯಿವೆ.

ಕಳೆದ ವರ್ಷಾಂತ್ಯಕ್ಕೆ ಇಳಿಕೆ ಕಂಡಿದ್ದ ಕೋವಿಡ್ ಪ್ರಕರಣಗಳ ಸಂಖ್ಯೆ ಒಂದು ತಿಂಗಳಿನಿಂದ ಹೆಚ್ಚಳ ಕಂಡಿದೆ. ಪ್ರತಿನಿತ್ಯ ನಾಲ್ಕು ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ. ಕಳೆದ ಜನವರಿ ತಿಂಗಳಲ್ಲಿ ಸೋಂಕು ದೃಢ ಪ್ರಮಾಣ ಶೇ 0.91ಕ್ಕೆ ಇಳಿಕೆಯಾಗಿತ್ತು. ಏಪ್ರಿಲ್ ತಿಂಗಳಲ್ಲಿ ಆ ಪ್ರಮಾಣ ಶೇ 6.02ಕ್ಕೆ ಏರಿಕೆಯಾಗಿದೆ. ಇದೇ ವೇಳೆ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರು ಹಾಗೂ ಕೋವಿಡ್ ಕಾಯಿಲೆಗೆ ಮೃತಪಡುವವರ ಸಂಖ್ಯೆ ಸಹ ಏರುಗತಿ ಪಡೆದಿದೆ. ಈವರೆಗೆ ನಗರದಲ್ಲಿ ಕೋವಿಡ್‌ಗೆ ಸಾವಿಗೀಡಾದವರಲ್ಲಿ ಶೇ 34ರಷ್ಟು ಮಂದಿ 70 ವರ್ಷ ಮೇಲ್ಪಟ್ಟವರು. ಶೇ 27ರಷ್ಟು ಮಂದಿ 60ರಿಂದ 69 ವರ್ಷದೊಳಗಿನವರು. ಹೀಗಾಗಿ, 60 ವರ್ಷ ಮೇಲ್ಪಟ್ಟವರಿಗೆ ಆಸ್ಪತ್ರೆಗೆ ದಾಖಲಾಗಲು ವೈದ್ಯರು ಶಿಫಾರಸು ಮಾಡುತ್ತಿದ್ದಾರೆ.

ನಗರದಲ್ಲಿ 169 ರೋಗಿಗಳು ಐಸಿಯು ಹಾಸಿಗೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದರಿಂದ ಸರ್ಕಾರಿ ವ್ಯವಸ್ಥೆಯಡಿ ಐಸಿಯು ಹಾಸಿಗೆಗಳ ಕೊರತೆ ಎದುರಾಗಿದೆ. ಬಿಬಿಎಂಪಿ ಮಾಹಿತಿ ಪ್ರಕಾರ, ಸರ್ಕಾರಿ ವೈದ್ಯಕೀಯ ಕಾಲೇಜುಗಳ ವ್ಯಾಪ್ತಿಯಲ್ಲಿ ಗುರುತಿಸಲಾದ 70 ಐಸಿಯು ಹಾಸಿಗೆಗಳಲ್ಲಿ ಎಲ್ಲವೂ ಭರ್ತಿಯಾಗಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿನ 57 ಐಸಿಯು ಹಾಸಿಗೆಗಳಲ್ಲಿ 7 ಹಾಸಿಗೆಗಳು ಮಾತ್ರ ಖಾಲಿಯಿವೆ. ವೆಂಟಿಲೇಟರ್ ಸಹಿತ ಹಾಸಿಗೆ ಸಹ ಸರ್ಕಾರಿ ವ್ಯವಸ್ಥೆಯಡಿ ಬಹುತೇಕ ಭರ್ತಿಯಾಗಿವೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿನ 45 ವೆಂಟಿಲೇಟರ್ ಸಹಿತ ಹಾಸಿಗೆಗಳಲ್ಲಿ ಯಾವುದೂ ಖಾಲಿಯಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ 65 ಹಾಸಿಗೆಗಳಲ್ಲಿ 53 ಹಾಸಿಗೆಗಳು ಭರ್ತಿಯಾಗಿವೆ. ಖಾಸಗಿ ಆಸ್ಪತ್ರೆಗಳಲ್ಲಿ ಶೇ 50ರಷ್ಟು ಹಾಸಿಗೆಗಳನ್ನು ಶಿಫಾರಸು ಮಾಡುವ ರೋಗಿಗಳಿಗೆ ಮೀಸಲಿಡುವ ಸಂಬಂಧ ಸರ್ಕಾರ ಆದೇಶ ಹೊರಡಿಸಿದೆ. ಆದರೆ, ಶಿಫಾರಸು ಪ್ರಕ್ರಿಯೆ ಪ್ರಾರಂಭವಾಗಿಲ್ಲ.

ಸಾಮಾನ್ಯ ಹಾಸಿಗೆಯೂ ಸಮಸ್ಯೆ: ವಿಕ್ಟೋರಿಯಾ ಹಾಗೂ ಬೌರಿಂಗ್ ಆಸ್ಪತ್ರೆಯಿಂದ 325 ಹಾಸಿಗೆಗಳನ್ನು ಕೋವಿಡ್ ಪೀಡಿತರಿಗೆ ಮೀಸಲಿರಿಸಲಾಗಿದೆ. ಅವುಗಳಲ್ಲಿ ಒಂದು ಹಾಸಿಗೆ ಮಾತ್ರ ಖಾಲಿಯಿದೆ. ಕೆ.ಸಿ. ಜನರಲ್, ಸಿ.ವಿ. ರಾಮನ್, ಇಎಸ್‌ಐ ಸೇರಿದಂತೆ 14 ಸರ್ಕಾರಿ ಆಸ್ಪತ್ರೆಗಳಿಂದ ಗುರುತಿಸಲಾಗಿದ್ದ 750 ಹಾಸಿಗೆಗಳಲ್ಲಿ 112 ಹಾಸಿಗೆಗಳು ಖಾಲಿಯಿವೆ. ಸದ್ಯ ಹಜ್ ಭವನ ಮತ್ತು ಎಚ್‌ಎಎಲ್ ಕೋವಿಡ್ ಆರೈಕೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇಲ್ಲಿ 578 ಹಾಸಿಗೆಗಳನ್ನು ಸಿದ್ಧಪಡಿಸಲಾಗಿತ್ತು. ಅವುಗಳಲ್ಲಿ 347 ಹಾಸಿಗೆಗಳು ಭರ್ತಿಯಾಗಿವೆ.

‘ಸದ್ಯ ಸರ್ಕಾರಿ ವ್ಯವಸ್ಥೆಯಡಿ ಕೆಲ ಹಾಸಿಗೆಗಳು ಖಾಲಿಯಿವೆ. ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ಮೀಸಲಿಡುವ ಸಂಬಂಧ ಈಗಾಗಲೇ ಆದೇಶ ಹೊರಡಿಸಲಾಗಿದೆ. ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳೊಂದಿಗೆ ಉನ್ನತ ಮಟ್ಟದ ಸಭೆ ಶುಕ್ರವಾರ ನಡೆಯಲಿದೆ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

‘4 ಸಾವಿರ ಹಾಸಿಗೆಗಳ ವ್ಯವಸ್ಥೆ’

‘ಸರ್ಕಾರ ಶಿಫಾರಸು ಮಾಡಿದ ರೋಗಿಗಳಿಗೆ ಚಿಕಿತ್ಸೆ ಒದಗಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ. ಮೊದಲು ವೈದ್ಯಕೀಯ ಕಾಲೇಜುಗಳಲ್ಲಿನ ಹಾಸಿಗೆಗಳನ್ನು ಮಾತ್ರ ನೀಡಲಾಗುತ್ತದೆ. ಸುಮಾರು 8 ಸಾವಿರ ಹಾಸಿಗೆಗಳು ಲಭ್ಯವಿದ್ದು, ಅದರಲ್ಲಿ 4 ಸಾವಿರ ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ನೀಡಲಾಗುತ್ತದೆ. ಬಳಿಕ 200ಕ್ಕೂ ಅಧಿಕ ಹಾಸಿಗೆ ಇರುವ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಮಾಡಲಾಗುತ್ತದೆ. ‘ರೆಮ್‌ಡಿಸಿವಿರ್’ ಇಂಜೆಕ್ಷನ್ ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ’ ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

‘ಈ ಹಿಂದೆ ಶಿಫಾರಸು ಆಧಾರದಲ್ಲಿ ಚಿಕಿತ್ಸೆ ನೀಡಿದ ಕೆಲ ಪ್ರಕರಣಗಳಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ಹಣವನ್ನು ಮರುಪಾವತಿಸಿಲ್ಲ. ರಾಜ್ಯದಲ್ಲಿನ ವಿವಿಧ ಖಾಸಗಿ ಆಸ್ಪತ್ರೆಗಳಿಗೆ ₹ 260 ಕೋಟಿ ಬಾಕಿ ಉಳಿಸಿಕೊಂಡಿದೆ. ಈ ಹಣವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಆಗ್ರಹ ಮಾಡಲಾಗುತ್ತದೆ’ ಎಂದು ಹೇಳಿದರು.

ಪಿಎಸ್‌ಐ ಸೇರಿ ಇಬ್ಬರಿಗೆ ಸೋಂಕು

ನಗರದ ಪಶ್ಚಿಮ ವಿಭಾಗದ ಠಾಣೆಯೊಂದರ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಸೇರಿ ಇಬ್ಬರು ಪೊಲೀಸರಿಗೆ ಕೊರೊನಾ ಸೋಂಕು ತಗುಲಿದ್ದು, ಮನೆಯಲ್ಲೇ ಕ್ವಾರಂಟೈನ್ ಆಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇತ್ತೀಚೆಗೆ ಭದ್ರತೆ ಕೆಲಸಕ್ಕೆ ನಿಯೋಜಿಸಲಾಗಿದ್ದ 60 ಸಿಬ್ಬಂದಿಯನ್ನು ಕೊರೊನಾ ಸೋಂಕಿನ ಪರೀಕ್ಷೆಗೆ ಒಳಪಡಿಸಲಾಗಿತ್ತು. ಅದರಲ್ಲಿ ಇಬ್ಬರದ್ದು ಪಾಸಿಟಿವ್ ವರದಿ ಬಂದಿದೆ.

ಇದೇ 20ರವರೆಗೂ ಪ್ರಾರ್ಥನಾ ವಿಧಿಗಳು ಇರುವುದಿಲ್ಲ

ಚರ್ಚ್‌ಗಳಲ್ಲಿ ಸಾರ್ವಜನಿಕ ಬಲಿಪೂಜೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣದಿಂದಾಗಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿನ ಚರ್ಚ್, ಪ್ರಾರ್ಥನಾಲಯ ಹಾಗೂ ಸಂಸ್ಥೆಗಳಲ್ಲಿ ಇದೇ 20ರವರೆಗೂ ಸಾರ್ವಜನಿಕ ಬಲಿಪೂಜೆ ಹಾಗೂ ಪ್ರಾರ್ಥನಾ ವಿಧಿಗಳನ್ನು ರದ್ದು ಮಾಡಲಾಗಿದೆ.

‘ಕೋವಿಡ್ ಎರಡನೇ ಅಲೆ ತೀವ್ರಗೊಳ್ಳುತ್ತಿದೆ. ಇದರ ನಿಯಂತ್ರಣಕ್ಕಾಗಿ ಸರ್ಕಾರವು ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದೆ. ಅದನ್ನು ಪಾಲಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಹೀಗಾಗಿ ಇದೇ 20ರವರೆಗೂ ಸಾರ್ವಜನಿಕ ಬಲಿಪೂಜೆ ಹಾಗೂ ಪ್ರಾರ್ಥನಾ ವಿಧಿಗಳನ್ನು ರದ್ದು ಮಾಡಲಾಗಿದೆ. ಭಕ್ತರ ವೈಯಕ್ತಿಕ ಭೇಟಿ ಹಾಗೂ ಪ್ರಾರ್ಥನೆಗೆ ಚರ್ಚ್ ಮತ್ತು ಪ್ರಾರ್ಥನಾಲಯಗಳನ್ನು ತೆರೆಯಬಹುದು. ಗುರುಗಳು ಆಯ್ದ ಕೆಲ ಭಕ್ತರ ಜೊತೆ ಅಥವಾ ಒಬ್ಬರೇ ಪ್ರಾರ್ಥನೆ ಸಲ್ಲಿಸಬಹುದು. ಈ ವೇಳೆ ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು’ ಎಂದು ಬೆಂಗಳೂರಿನ ಮಹಾಧರ್ಮಾಧ್ಯಕ್ಷ ಪೀಟರ್ ಮಚಾದೊ ಅವರು ತಿಳಿಸಿದ್ದಾರೆ.

‘ಈಗಾಗಲೇ ನಿಗದಿಯಾಗಿರುವ ಮದುವೆ, ದೀಕ್ಷಾಸ್ನಾನ ಹಾಗೂ ಪ್ರಥಮ ಪರಮಪ್ರಸಾದ ಸೇರಿದಂತೆ ಇನ್ನಿತರ ಆಚರಣೆಗೆ ಯಾವುದೇ ಅಡ್ಡಿಯಿಲ್ಲ. ಈ ಕಾರ್ಯಕ್ರಮಗಳಲ್ಲಿ 50ಕ್ಕಿಂತ ಹೆಚ್ಚು ಜನ ಸೇರದಂತೆ ಎಚ್ಚರ ವಹಿಸಬೇಕು. ಸಾಧ್ಯವಾದರೆ ಒಳಾಂಗಣಗಳಲ್ಲಿ ಇವುಗಳನ್ನು ಆಚರಿಸಲು ಆದ್ಯತೆ ನೀಡಬೇಕು. ದೇವಸ್ಥಾನಗಳಲ್ಲಿ ಬಲಿಪೂಜೆ ನಿಷೇಧಿಸಿರುವುದರಿಂದ ಮೃತರ ಸಮಾಧಿ ಸ್ಥಳದಲ್ಲಿ ಇದನ್ನು ನಡೆಸಬಹುದು’ ಎಂದು ಹೇಳಿದ್ದಾರೆ.

‘ಹೋದ ವರ್ಷ ಲಾಕ್‌ಡೌನ್ ಸಮಯದಲ್ಲಿ ಪ್ರತಿದಿನದ ಹಾಗೂ ಭಾನುವಾರದ ಬಲಿಪೂಜೆ, ದೈವಾರಾಧನೆಯ ವಿಧಿ ಮತ್ತು ಪ್ರಾರ್ಥನೆಗಳನ್ನು ವಿವಿಧ ಭಾಷೆಗಳಲ್ಲಿ ಮಹಾಧರ್ಮಕ್ಷೇತ್ರದ ಅಧಿಕೃತ ಯೂಟ್ಯೂಬ್, ಫೇಸ್‌ಬುಕ್ ಹಾಗೂ ಇತರ ಸಾಮಾಜಿಕ ಜಾಲತಾಣಗಳ ಮೂಲಕ ನೇರ ಪ್ರಸಾರ ಮಾಡಲಾಗಿತ್ತು. ಈ ವ್ಯವಸ್ಥೆ ಈಗಲೂ ಮುಂದುವರಿಯಲಿದೆ’ ಎಂದಿದ್ದಾರೆ.

ಶುಕ್ರವಾರ, ಏಪ್ರಿಲ್ 9, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 99 | ಪುಟ 12 + 6
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
ದೊಡ್ಮನೆ ಕುಟುಂಬದ ಹೆಣ್ಮಕ್ಕಳಿಗೆ ಮಾದರಿಯಾದೆ ಎನ್ನುತ್ತಿದ್ದಾರೆ ಡಾ.ರಾಜ್‌ಕುಮಾರ್ ಮೊಮ್ಮಗಳಾದ ಧನ್ಯಾ ರಾಮ್‌ಕುಮಾರ್

‘ಪರೀಕ್ಷೆ ರದ್ದು ಮಾಡಿ, ಇಲ್ಲವೇ ಆನ್‌ಲೈನ್ ಮೂಲಕ ನಡೆಸಿ’ 6

ಆಳ–ಅಗಲ
ಕೋವಿಡ್‌ಗೆ ಕ್ರಿಕೆಟ್ ಸೆಡ್ಡು...

ಬಿಡಿಎ: 270 ನಿವೇಶನ ಮಾರಾಟ 3

ಸೆನ್ಸೆಕ್ಸ್	ನಿಫ್ಟಿ	₹/$
49,746 ▲	14,874 ▲	74.58 ▼

ಪ್ರಧಾನಿ ಜೊತೆ ವಿಡಿಯೊ ಸಂವಾದದ ಬಳಿಕ ಸಿ.ಎಂ ಘೋಷಣೆ: ನಾಳೆ ರಾತ್ರಿಯಿಂದ ಜಾರಿ

7 ನಗರಗಳಲ್ಲಿ ‘ಕೊರೊನಾ ಕರ್ಫ್ಯೂ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಏರಿಕೆಯಾಗುತ್ತಿರುವ ಕಾರಣ ರಾಜಧಾನಿ ಬೆಂಗಳೂರು ನಗರ ಸೇರಿ ರಾಜ್ಯದ ಏಳು ಜಿಲ್ಲಾ ಕೇಂದ್ರ ಮತ್ತು ಮಣಿಪಾಲದಲ್ಲಿ ಏ. 10ರಿಂದ 20ರವರೆಗೆ ‘ಕೊರೊನಾ ಕರ್ಫ್ಯೂ’ (ರಾತ್ರಿ ಕರ್ಫ್ಯೂ) ವಿಧಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಪ್ರಧಾನಿ ನರೇಂದ್ರ ಮೋದಿ ಜೊತೆ ಗುರುವಾರ ಸಂಜೆ ವಿಡಿಯೊ ಸಂವಾದದ ಬಳಿಕ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ‘ಬೆಂಗಳೂರು ನಗರ, ಮೈಸೂರು, ಮಂಗಳೂರು, ಕಲಬುರ್ಗಿ, ಬೀದರ್, ತುಮಕೂರು, ಉಡುಪಿ ನಗರದ ಜೊತೆಗೆ ಮಣಿಪಾಲದಲ್ಲಿ ರಾತ್ರಿ ಕರ್ಫ್ಯೂ ವಿಧಿಸಲಾಗುವುದು’ ಎಂದು ಹೇಳಿದರು.

ಈ ಜಿಲ್ಲೆಗಳ ಕೇಂದ್ರ ಭಾಗದಲ್ಲಿ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 5 ಗಂಟೆವರೆಗೆ ಕರ್ಫ್ಯೂ ಜಾರಿಯಲ್ಲಿ ಇರಲಿದೆ. ಈ ಅವಧಿಯಲ್ಲಿ ಅಗತ್ಯ ಸೇವೆಗಳು ಅಬಾಧಿತವಾಗಿರುತ್ತವೆ. ಆದರೆ, ಜನರ ಅನಗತ್ಯ ಓಡಾಟ ನಿಯಂತ್ರಿಸಲು ವಾಣಿಜ್ಯ ಚಟುವಟಿಕೆಯೂ ಸೇರಿದಂತೆ ಉಳಿದೆಲ್ಲ ಚಟುವಟಿಕೆಗೆ ನಿರ್ಬಂಧ ಹೇರಲಾಗುವುದು. ಪಬ್, ಹೋಟೆಲ್, ರೆಸ್ಟೋರೆಂಟ್‌ಗಳು ಬಂದ್ ಆಗಲಿವೆ.

‘ಪ್ರಧಾನಿ ಸುದೀರ್ಘವಾಗಿ ಚರ್ಚೆ ಮಾಡಿದರು. ಬೆಂಗಳೂರು ಮತ್ತು ಇತರ 6 ಜಿಲ್ಲೆಗಳಲ್ಲಿ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ. ಕೋವಿಡ್ ಪಾಸಿಟಿವ್ ಪ್ರಕರಣಗಳು ಹೆಚ್ಚುತ್ತಿದ್ದರೂ, ಮರಣ ಪ್ರಮಾಣ ರಾಜ್ಯದಲ್ಲಿ ಶೇ 0.50 ರಷ್ಟು ಇರುವುದು ಸಮಾಧಾನಕರ ಸಂಗತಿ. ಈ ಕುರಿತು ಕೇಂದ್ರ ಸರ್ಕಾರವೂ ತೃಪ್ತಿ ವ್ಯಕ್ತಪಡಿಸಿದೆ. ಈ ಸಂದರ್ಭದಲ್ಲಿ ಅವರು ಕೆಲವು ಸಲಹೆಗಳನ್ನು ನೀಡಿದ್ದಾರೆ. ಅದರಂತೆ, ಕೊರೊನಾ ಕರ್ಫ್ಯೂ ಜಾರಿಗೊಳಿಸಲು ತೀರ್ಮಾನಿಸಿದ್ದೇವೆ’ ಎಂದು ಯಡಿಯೂರಪ್ಪ ಹೇಳಿದರು.

‘ಜ್ಯೋತಿಬಾ ಫುಲೆ ಜನ್ಮ ದಿನವಾದ ಏ.11ರಂದು ಆರಂಭಗೊಂಡು ಅಂಬೇಡ್ಕರ್ ಜಯಂತಿ ದಿನವಾದ ಏ. 14ರ ವರೆಗೆ ಲಸಿಕಾ ಆಂದೋಲನ ಹಮ್ಮಿಕೊಳ್ಳುವಂತೆ ಪ್ರಧಾನಿ ಕರೆ ನೀಡಿದ್ದಾರೆ. ರಾಜ್ಯದಲ್ಲಿಯೂ ಕ್ರಮ ಕೈಗೊಳ್ಳಲಾಗುವುದು. ಮುಂಜಾಗ್ರತೆ ಕ್ರಮವಾಗಿ ಪಿಎಂ-ಕೇರ್ಸ್ ನಿಧಿಯಿಂದ ಆಕ್ಸಿಜನ್ ಜನರೇಟರ್‌ಗಳನ್ನು ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ’ ಎಂದು ಯಡಿಯೂರಪ್ಪ ಹೇಳಿದರು.

‘ಮೈಕ್ರೋ ಕಂಟೈನ್‌ಮೆಂಟ್ ವಲಯಗಳಿಗೆ ಆದ್ಯತೆ ನೀಡಬೇಕು. ಆಂಬ್ಯುಲೆನ್ಸ್, ಆಕ್ಸಿಜನ್ ಪೂರೈಕೆ ಹಾಗೂ ವೆಂಟಿಲೇಟರ್ ಸೌಲಭ್ಯಗಳಿಗೆ ಆದ್ಯತೆ ನೀಡುವಂತೆ ಪ್ರಧಾನಿ ಸೂಚಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವ ಜಾತ್ರೆ, ಹಬ್ಬಗಳು ಮತ್ತಿತರ ಧಾರ್ಮಿಕ ಮತ್ತು ಸಾಮಾಜಿಕ ಸಮಾವೇಶಗಳನ್ನು ನಿಷೇಧಿಸಲಾಗಿದೆ. ಈ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಿನ ಅನುಷ್ಠಾನ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧಾರಣೆ ಮಾಡದವರಿಗೆ, ಅಂತರ ಕಾಯ್ದುಕೊಳ್ಳದವರಿಗೆ ದಂಡ ವಿಧಿಸಲಾಗುತ್ತಿದೆ’ ಎಂದೂ ಅವರು ವಿವರಿಸಿದರು.

‘ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರತಿ ದಿನ ನಡೆಸುವ ಪರೀಕ್ಷೆಗಳ ಪ್ರಮಾಣ ದುಪ್ಪಟ್ಟಾಗಿದ್ದು, 1.20 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಆಸ್ಪತ್ರೆಗಳಲ್ಲಿ ಸಾಮಾನ್ಯ ಹಾಸಿಗೆಗಳು, ಆಕ್ಸಿಜನ್ ಸಂಪರ್ಕವಿರುವ ಹಾಸಿಗೆಗಳು ಮತ್ತು ಐಸಿಯುಗಳು ಸಾಕಷ್ಟು ಲಭ್ಯ ಇವೆ. 42 ಸಾವಿರ ಸಾಮಾನ್ಯ ಹಾಸಿಗೆಗಳು, 30 ಸಾವಿರ ಆಕ್ಸಿಜನ್ ಸಂಪರ್ಕವಿರುವ ಹಾಸಿಗೆಗಳು ಹಾಗೂ 3 ಸಾವಿರ ಐಸಿಯುಗಳು ಮತ್ತು 2,900 ವೆಂಟಿಲೇಟರ್ ಗಳಿರುವ ಹಾಸಿಗೆಗಳು ಲಭ್ಯ ಇವೆ’ ಎಂದೂ ಅವರು ತಿಳಿಸಿದರು.

‘ರಾತ್ರಿ ಹೊತ್ತು ಅನಗತ್ಯವಾಗಿ ಜನರ ಓಡಾಟ ನಿರ್ಬಂಧಿಸಲು ರಾತ್ರಿ ಕರ್ಫ್ಯೂ ವಿಧಿಸಲಾಗುತ್ತಿದೆ. ಆದರೆ, ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗಳಿಗೆ ಹೋಗುವವರಿಗೆ ಯಾವುದೇ ನಿರ್ಬಂಧ ಇರುವುದಿಲ್ಲ’ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಹೇಳಿದರು.

ಕೋವಿಡ್ ತಡೆ: ಅಲಕ್ಷ್ಯಕ್ಕೆ ಮೋದಿ ಅತೃಪ್ತಿ

ನವದೆಹಲಿ (ಪಿಟಿಐ): ಕೆಲವು ರಾಜ್ಯಗಳ ಆಡಳಿತ ವ್ಯವಸ್ಥೆಯು ಕೋವಿಡ್-19 ನಿಯಂತ್ರಣದ ವಿಚಾರದಲ್ಲಿ ಅಸಡ್ಡೆ ತೋರಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಕೋವಿಡ್ ಹರಡುವಿಕೆ ತಡೆ ಪ್ರಯತ್ನಗಳನ್ನು ಮುಂದಿನ ಎರಡು–ಮೂರು ವಾರ ಸಮರೋಪಾದಿಯಲ್ಲಿ ನಡೆಸಬೇಕು ಎಂದು ಅವರು ಮುಖ್ಯಮಂತ್ರಿಗಳ ಜತೆಗೆ ಗುರುವಾರ ಸಂಜೆ ನಡೆಸಿದ ಸಭೆಯಲ್ಲಿ ಸೂಚಿಸಿದ್ದಾರೆ.

‘ಈ ಹಿಂದಿನ ದಿನಗಳಿಗೆ ಹೋಲಿಸಿದರೆ ಈಗ ಕೋವಿಡ್ ನಿರ್ವಹಿಸುವ ವಿಚಾರದಲ್ಲಿ ನಮ್ಮಲ್ಲಿ ಹೆಚ್ಚಿನ ಸಂಪನ್ಮೂಲಗಳು ಇವೆ. ಕಂಟೈನ್‌ಮೆಂಟ್ ವಲಯಗಳ ನಿರ್ವಹಣೆಗೆ ಹೆಚ್ಚಿನ ಗಮನ ಹರಿಸಬೇಕು’ ಎಂದು ಅವರು ಹೇಳಿದ್ದಾರೆ. ಪರೀಕ್ಷೆ, ಪತ್ತೆ, ಚಿಕಿತ್ಸೆ, ಕೋವಿಡ್ ತಡೆಗೆ ಪೂರಕ ವರ್ತನೆ ಮತ್ತು ಲಸಿಕೆ ನೀಡಿಕೆಯ ಐದು ಹಂತಗಳ ಕಾರ್ಯತಂತ್ರದ ಮೂಲಕ ಕೋವಿಡ್ ಹರಡುವಿಕೆಗೆ ತಡೆ ಒಡ್ಡಬಹುದು ಎಂದು ಅವರು ಮುಖ್ಯಮಂತ್ರಿಗಳಿಗೆ ತಿಳಿಸಿದರು.

ಲಸಿಕೆ ಕೊರತೆ?

ಮುಂಬೈ: ಲಸಿಕೆ ಕೊರತೆಯಿಂದಾಗಿ ಕೋವಿಡ್ ತಡೆ ಲಸಿಕೆ ಅಭಿಯಾನಕ್ಕೆ ಹಿನ್ನಡೆ ಆಗಿದೆ ಎಂದು ವರದಿಯಾಗಿದೆ. 6

ರಾಜ್ಯ ಕೋವಿಡ್ ಅಂಕಿ–ಅಂಶ

10,40,130 ▲	ಒಟ್ಟು ಸೋಂಕಿತರು (10,26,584 ನಿನ್ನೆಯ ವಿವರ)
53,395 ▲	ಸಕ್ರಿಯ ಪ್ರಕರಣಗಳು
9,73,949 ▲	ಗುಣಮುಖರಾದವರು
12,767 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	6,570	▼
ಗುಣಮುಖ	2,393	▼
ಸಾವು	36	▲

357 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಶಾಲೆ ಮುಂದುವರಿಸಲು ರೂಪಿಸಿರುವ ಯೋಜನೆಗಳೇನು: ಹೈಕೋರ್ಟ್ ಪ್ರಶ್ನೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಶಾಲಾ–ಕಾಲೇಜುಗಳ ತರಗತಿಗಳನ್ನು ಮುಂದುವರಿಸಲು ರೂಪಿಸಿರುವ ಕ್ರಿಯಾ ಯೋಜನೆ ಸಲ್ಲಿಸುವಂತೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. 11

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಕಥೆ ಕೇಳು ಮಗುವೆ
ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ
ಸಂಪಾದಕೀಯ, ಪ್ರಚಲಿತ
Prajavani.net/podcast

ನೂರಾರು ಮಂದಿ ಟ್ರೈನಿ ನೌಕರರ ವಜಾ • ನಿವೃತ್ತರ ಮರು ನೇಮಕಾತಿಗೆ ನಿರ್ಧಾರ

ಕಠಿಣ ನಿಲುವು ತಳೆದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳ ನೌಕರರು ವೇತನ ಪರಿಷ್ಕರಣೆಗೆ ಆಗ್ರಹಿಸಿ ನಡೆಸುತ್ತಿರುವ ಮುಷ್ಕರ ಎರಡನೇ ದಿನ ಪೂರೈಸಿರುವ ಬೆನ್ನಲ್ಲೇ ರಾಜ್ಯ ಸರ್ಕಾರ ಕಠಿಣ ನಿಲುವು ತಾಳಿದೆ. ನೂರಾರು ಮಂದಿ ಟ್ರೈನಿ ಸಿಬ್ಬಂದಿ ವಜಾ, ಕಾಯಂ ನೌಕರರಿಗೆ ನೋಟಿಸ್ ಜಾರಿ ಮಾಡಿದೆ. ನಿವೃತ್ತ ನೌಕರರ ಸೇವೆ ಬಳಕೆಗೂ ಹೆಜ್ಜೆ ಇರಿಸಿದೆ.

ರಾಜ್ಯದಾದ್ಯಂತ ಸಾರಿಗೆ ನಿಗಮಗಳ ಬಹುತೇಕ ನೌಕರರು ಗುರುವಾರವೂ ಮುಷ್ಕರದಲ್ಲಿ ಭಾಗಿಯಾದರು. ಅತ್ಯಲ್ಪ ಪ್ರಮಾಣದ ನೌಕರರು ಕರ್ತವ್ಯಕ್ಕೆ ಹಾಜರಾಗಿದ್ದು, ಕೆಲವೇ ಬಸ್‌ಗಳ ಸಂಚಾರ ಸಾಧ್ಯವಾಗಿದೆ. ಇದರಿಂದಾಗಿ ರಾಜ್ಯದ ಬಹುತೇಕ ಪ್ರದೇಶಗಳಲ್ಲಿ ಸರ್ಕಾರಿ ಬಸ್‌ಗಳ ಸಂಚಾರ ಸ್ಥಗಿತಗೊಂಡಿದೆ. ಮುಷ್ಕರನಿರತ ನೌಕರರನ್ನು ಮಣಿಸಲು ದಂಡನೆಯ ಅಸ್ತ್ರ ಬಳಸಲು ಸಾರಿಗೆ ಇಲಾಖೆ ಮುಂದಾಗಿದೆ.



ಸಾರಿಗೆ ಸಂಸ್ಥೆ ಬಸ್‌ಗಳ ಸಂಚಾರವಿರದ ಕಾರಣ ಕಲಬುರ್ಗಿಯ ಕೇಂದ್ರ ಬಸ್ ನಿಲ್ದಾಣದಲ್ಲಿ ಗುರುವಾರ ಪ್ರಯಾಣಿಕರಿಗಾಗಿ ಖಾಸಗಿ ವಾಹನಗಳ ವ್ಯವಸ್ಥೆ ಮಾಡಲಾಗಿತ್ತು –ಪ್ರಜಾವಾಣಿ ಚಿತ್ರ

130 ಮಂದಿ ವಜಾ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ(ಬಿಎಂಟಿಸಿ), ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ಸಾವಿರಾರು ಮಂದಿ ಟ್ರೈನಿ ನೌಕರರಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ಬುಧವಾರ ರಾತ್ರಿ ನೋಟಿಸ್ ಜಾರಿ ಮಾಡಲಾಗಿತ್ತು.

4ನೇ ಪುಟ ನೋಡಿ

ಸರ್ಕಾರ ನಡೆಸುವುದು ಗೊತ್ತಿದೆ: ಬಿಎಸ್‌ವೈ

ಹುಬ್ಬಳ್ಳಿ: ‘ಸರ್ಕಾರ ಹೇಗೆ ನಡೆಸಬೇಕೆನ್ನುವುದು ನಮಗೆ ಗೊತ್ತಿದೆ, ನೀವು ತಲೆಕೆಡಿಸಿಕೊಳ್ಳಬೇಡಿ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಗುರುವಾರ ಮಾಧ್ಯಮದವರಿಗೆ ಹರಿಹಾಯ್ದರು.

4ನೇ ಪುಟ ನೋಡಿ


ಇನ್ನಷ್ಟು ಸುದ್ದಿಗಳು 3D

ಒಳ ಪುಟ
ಕೋವಿಡ್: ಪ್ರತ್ಯೇಕ ಆದೇಶ ಹಿಂಪಡೆಯಲು ಸೂಚನೆ 5

ಐಪಿಎಲ್ ಇಂದಿನಿಂದ

ವಿರಾಟ್–ರೋಹಿತ್ ಹಣಾಹಣಿ

ಚೆನ್ನೈ (ಪಿಟಿಐ): ವಿರಾಟ್ ಕೊಹ್ಲಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ರೋಹಿತ್ ಶರ್ಮಾ ನಾಯಕತ್ವದ, ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡಗಳು ಶುಕ್ರವಾರ ಆರಂಭವಾಗಲಿರುವ ಐಪಿಎಲ್ ಉದ್ಘಾಟನೆ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.



ಮುಖಾಮುಖಿ	
ಪಂದ್ಯಗಳು	27
ಬೆಂಗಳೂರು ಜಯ	10
ಮುಂಬೈ ಜಯ	17



ಇಂದಿನ ಪಂದ್ಯ	ಲೈವ್	ಸ್ಥಳ	ಪಂದ್ಯ ಆರಂಭ
	ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್	ಎಂ.ಎ. ಚಿದಂಬರಂ ಕ್ರೀಡಾಂಗಣ, ಚೆನ್ನೈ	ರಾತ್ರಿ 7.30ರಿಂದ

ಚಿನಕುರಳಿ

ಪ್ರಕಾಶ್ ಶೆಟ್ಟಿ



29 ಮಳಿಗೆಗಳ ಮುಚ್ಚಿಸಿದ ಬಿಬಿಎಂಪಿ

ಬೆಂಗಳೂರು: ನಗರದಲ್ಲಿ ಕೋವಿಡ್ ಹರಡುವಿಕೆ ನಿಯಂತ್ರಿಸಲು ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳನ್ನು ಕಡೆಗಣಿಸಿರುವ 29 ಮಳಿಗೆಗಳನ್ನು ಬಿಬಿಎಂಪಿ ಅಧಿಕಾರಿಗಳು ಗುರುವಾರ ಮುಚ್ಚಿಸಿದ್ದಾರೆ. ಇವುಗಳಲ್ಲಿ ಬೇಕರಿಗಳು, ಸೂಪರ್ ಮಾರ್ಕೆಟ್‌ಗಳು, ಸಲೂನ್, ಜಿಮ್ ಹಾಗೂ ಮಾಲ್‌ಗಳಲ್ಲಿನ ಮಳಿಗೆಗಳು ಸೇರಿವೆ. 3C

ಸರ್ಕಾರಿ ಕಾಲೇಜು ದತ್ತು ಪಡೆಯಲು ಜ್ಯೋತಿ ನಿವಾಸ ಕಾಲೇಜು ಒಲವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜೊಂದನ್ನು ದತ್ತು ಸ್ವೀಕರಿಸಿ, ಗುಣಮಟ್ಟದ ಶಿಕ್ಷಣ ನೀಡುವ ಸರ್ಕಾರ ಪ್ರಯತ್ನಕ್ಕೆ ಬೆಂಬಲ ನೀಡಬೇಕೆಂಬ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಮನವಿಗೆ ನಗರದ ಜ್ಯೋತಿ ನಿವಾಸ್ ಕಾಲೇಜು ಸಕಾರಾತ್ಮಕವಾಗಿ ಸ್ಪಂದಿಸಿದೆ.

ಕಾಲೇಜಿನ ಪ್ರಾಂಶುಪಾಲೆ ಡಾ. ಎಲಿಜಬೆತ್ ಅವರು ಬರೆದಿರುವ 'ಎಕೋಸ್ ಅವರ್ ಟೈಮ್ಸ್, ಅವರ್ ರೆಸ್ಪಾನ್ಸಿಬಿಲಿಟಿ' ಎಂಬ ಆಂಗ್ಲ ಕೃತಿಯನ್ನು ಗುರುವಾರ ಬಿಡುಗಡೆಗೊಳಿಸಿದ ವೇಳೆ ಈ ಇಂಗಿತ ವ್ಯಕ್ತವಾಯಿತು.



ಜ್ಯೋತಿ ನಿವಾಸ್ ಕಾಲೇಜಿನ ಪ್ರಾಂಶುಪಾಲೆ ಡಾ. ಎಲಿಜಬೆತ್ ಅವರ 'ಎಕೋಸ್ ಅವರ್ ಟೈಮ್ಸ್, ಅವರ್ ರೆಸ್ಪಾನ್ಸಿಬಿಲಿಟಿ' ಕೃತಿಯನ್ನು ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಬಿಡುಗಡೆ ಮಾಡಿದರು

'ಜ್ಯೋತಿ ನಿವಾಸ್ ಕಾಲೇಜು ಸ್ವಾಯತ್ತ ಶಿಕ್ಷಣಸಂಸ್ಥೆಯಾಗಿದ್ದು, ವಿಶ್ವವಿದ್ಯಾಲಯ ಆಗುವ ಎಲ್ಲ ಅರ್ಹತೆ ಹೊಂದಿದೆ. ಸಂಸ್ಥೆ ಪ್ರಯತ್ನಿಸಿದರೆ ಸರ್ಕಾರ ಎಲ್ಲ ರೀತಿಯ ಸಹಕಾರ ನೀಡಲಿದೆ. ಜತೆಗೆ, ಯಾವುದಾದರೊಂದು ಸರ್ಕಾರಿ ಕಾಲೇಜನ್ನು ದತ್ತು ಪಡೆಯಬೇಕು ಎಂಬುದು ನನ್ನ ಬಯಕೆ' ಎಂದು ಉಪ ಮುಖ್ಯಮಂತ್ರಿ ಹೇಳಿದರು.

ಅದಕ್ಕೆ ಸ್ಪಂದಿಸಿದ ಪ್ರಾಂಶುಪಾಲರು, ಯಾವ ಕಾಲೇಜು ಎಂದು ಸೂಚಿಸಿದರೆ ಕಾರ್ಯಪ್ರವೃತ್ತರಾಗುವುದಾಗಿ ಭರವಸೆ ನೀಡಿದರು.

'ಕಾಲೇಜುಗಳನ್ನು ದತ್ತು ಪಡೆಯುವ ಮೂಲಕ ಸರ್ಕಾರಿ ಕಾಲೇಜುಗಳಿಗೆ ಮೂಲಸೌಕರ್ಯ ಒದಗಿಸುವುದು, ವಿದ್ಯಾರ್ಥಿಗಳಿಗೆ ಬೋಧನೆ -ಕಲಿಕೆಗೆ ನೆರವಾಗುವುದು, ತಾಂತ್ರಿಕ ಸಹಕಾರ ಕೊಡುವುದು ಹಾಗೂ ಅಧ್ಯಾಪಕರಿಗೆ ತರಬೇತಿ ನೀಡುವುದು ಇತ್ಯಾದಿಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಮಾಡಬಹುದು. ಈ ಉದ್ದೇಶದಿಂದ ಉನ್ನತ ಶಿಕ್ಷಣ ಇಲಾಖೆ ಈಗಾಗಲೇ 'ಹೆಲ್ಪ್ ಎಜ್ಯುಕೇಟ್' ಎಂಬ ಕಾರ್ಯಕ್ರಮ ಆರಂಭಿಸಿದೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಕಾಲೇಜಿನ ಅಧ್ಯಾಪಕರು, ಸಿಬ್ಬಂದಿ, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿದ್ದರು.

'ದಲಿತ ವಿಮೋಚನೆ ರಾಜಕೀಯ ಪಕ್ಷಗಳ ಗುರಿಯಾಗಲಿ'

ಬೆಂಗಳೂರು: 'ದಲಿತ ವಿಮೋಚನೆಯು ರಾಜಕೀಯ ಪಕ್ಷಗಳ ಗುರಿ ಮತ್ತು ಸಿದ್ಧಾಂತವಾಗಬೇಕು. ದಲಿತರಿಗೆ ಆರ್ಥಿಕ ಶಕ್ತಿ ತುಂಬುವುದು ಹಾಗೂ ಸಾಮಾಜಿಕ ಸಮಾನತೆ ಕಲ್ಪಿಸುವುದು ಎಲ್ಲ ಪಕ್ಷಗಳ ಆದ್ಯತೆಯಾಗಬೇಕು' ಎಂದು ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ಅಭಿಪ್ರಾಯಪಟ್ಟರು.

ಸ್ಫೂರ್ತಿಧಾಮ ಸಂಸ್ಥೆ ಗುರುವಾರ ಆಯೋಜಿಸಿದ್ದ 'ಅಧಿಕಾರ ರಾಜಕಾರಣದಲ್ಲಿ ಚಳವಳಿಗಾರರ ಪಾಲ್ಗೊಳ್ಳುವಿಕೆ ಮತ್ತು ಯಶಸ್ಸಿನ ಸಾಧ್ಯತೆಗಳು' ಕುರಿತ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

'ದಲಿತ ರಾಜಕಾರಣವು ಬಲಪಂಥೀಯ ರಾಜಕಾರಣದಲ್ಲಿ ಹಂಚಿ ಹೋಗಿದೆ. ದಲಿತರೇ ಒಂದು ಶಕ್ತಿಯಾಗಿ ರಾಜಕಾರಣ ಮಾಡಬೇಕು. ಆಗ ಇತರ ರಾಜಕೀಯ ಪಕ್ಷಗಳಲ್ಲಿರುವ ದಲಿತ ನಾಯಕರ ಶಕ್ತಿ ಕುಗ್ಗುತ್ತದೆ' ಎಂದರು.

'ತುರ್ತು ಪರಿಸ್ಥಿತಿಯ ನಂತರ ದೇಶದಲ್ಲಿ ಹಲವು ಪ್ರಾದೇಶಿಕ ಪಕ್ಷಗಳು ಉದಯವಾದವು. ಬಳಿಕ ಸಮ್ಮಿಶ್ರ ಸರ್ಕಾರ ರಾಜಕಾರಣ ಶುರುವಾಯಿತು. ದೇಶದಲ್ಲಿ ಬಿಜೆಪಿ ಆಡಳಿತ ಬಂದ ಮೇಲೆ ಅಧಿಕಾರ ರಾಜಕಾರಣದಲ್ಲಿ ದಲಿತರ ಸ್ಪರ್ಧೆ ಕಷ್ಟ ಎಂಬುದು ಮನದಟ್ಟಾಗಿದೆ' ಎಂದು ತಿಳಿಸಿದರು.

'ಅಸ್ಪೃಶ್ಯ ಸಮುದಾಯಗಳು ಒಂದಾಗಬೇಕು. ಜಾತಿಗಳನ್ನು ಸಮೀಕರಿಸುವ ಕೆಲಸ ಮಾಡಬೇಕು. ಆಗ ಮಾತ್ರ ದಲಿತ ಸಮುದಾಯದವರೂ ರಾಜ್ಯ ರಾಜಕಾರಣವನ್ನು ನಿಯಂತ್ರಿಸಲು ಸಾಧ್ಯ. ದಲಿತ ಚಳವಳಿಗಳು ಹಣ ಮತ್ತು ಜಾತಿ ರಾಜಕಾರಣವನ್ನು ಧಿಕ್ಕರಿಸಬೇಕು. ಆಗ ನಮ್ಮವರು ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಭಾವಿ ನಾಯಕರಾಗಿ ಬೆಳೆಯಬಹುದು' ಎಂದು ಹೇಳಿದರು.

ಜೆಡಿಎಸ್ ಮುಖಂಡ ವೈ.ಎಸ್.ವಿ.ದತ್ತ 'ಸೈದ್ಧಾಂತಿಕ ಚೌಕಟ್ಟು ಕಟ್ಟಿಕೊಂಡು ರಾಜಕೀಯ ಶಕ್ತಿಯಾಗಿ ಹೊರಹೊಮ್ಮಬಹುದಾಗಿದ್ದ ಶಕ್ತಿ ದಲಿತ ಚಳವಳಿಗಿತ್ತು. ತುರ್ತು ಪರಿಸ್ಥಿತಿಯ ನಂತರ ಕಾಂಗ್ರೆಸ್ ವಿರೋಧಿ ರಾಜಕಾರಣ ಮಾಡಲು ಎಲ್ಲರು ಒಲವು ತೋರಿದರು. ಹೀಗಾಗಿ ದಲಿತ ಸಂಘಟನೆಗಳು ದಾರಿ ತಪ್ಪಿದವು' ಎಂದರು.

ಸ್ಫೂರ್ತಿಧಾಮ ಸಂಸ್ಥೆಯ ಮರಿಸ್ವಾಮಿ ಇದ್ದರು.

ಬಿಗ್ ಬಜಾರ್‌ನಲ್ಲಿ ಉಚಿತ ಕೊಡುಗೆ

ಬೆಂಗಳೂರು: ಬಿಗ್ ಬಜಾರ್‌ನಲ್ಲಿ ₹ 2,500 ಮೌಲ್ಯದ ವಸ್ತುಗಳನ್ನು ಖರೀದಿಸಿದರೆ ₹ 500 ಮೌಲ್ಯದ ಹಣ್ಣು ಮತ್ತು ತರಕಾರಿ ಉಚಿತವಾಗಿ ಸಿಗಲಿದೆ. ಈ ಕೊಡುಗೆಯು ಬಿಗ್ ಬಜಾರ್ ಮಳಿಗೆಗಳಲ್ಲಿ ಹಾಗೂ shop.bigbazaar.com ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಬಿಗ್ ಬಜಾರ್ ಸಮೂಹವು ಈ ಕೊಡುಗೆಗೆ 'ಸಬ್ಸೆ ಬಡಾ ಆಫರ್' ಎಂಬ ಹೆಸರು ಇರಿಸಿದೆ. ಇದು ಏಪ್ರಿಲ್ 14ರವರೆಗೆ ಲಭ್ಯವಿರಲಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಏಳನೇ ಹಂತದ ಇ ಹರಾಜು: ನಿರೀಕ್ಷೆಗಿಂತ ₹ 113 ಕೋಟಿ ಹೆಚ್ಚುವರಿ ಗಳಿಕೆ

ಬಿಡಿಎ: 270 ನಿವೇಶನ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬಡಾವಣೆಗಳ ನಿವೇಶನಗಳ ಮಾರಾಟದ ಸಲುವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಹಮ್ಮಿಕೊಂಡಿದ್ದ ಏಳನೇ ಹಂತದ ಇ-ಹರಾಜು ಪ್ರಕ್ರಿಯೆ ಮುಕ್ತಾಯವಾಗಿದ್ದು, ಒಟ್ಟು 270 ನಿವೇಶನಗಳು ಮಾರಾಟವಾಗಿವೆ.

ಈ ಬಾರಿ ಒಟ್ಟು 421 ನಿವೇಶನಗಳನ್ನು ಬಿಡಿಎ ಹರಾಜಿಗಿಟ್ಟಿತ್ತು. ಅವುಗಳಲ್ಲಿ 122 ನಿವೇಶನಗಳ ಖರೀದಿಗೆ ಯಾರೂ ಮುಂದೆ ಬಂದಿಲ್ಲ. ಒಂದು ನಿವೇಶನವನ್ನು ಹರಾಜು ಪ್ರಕ್ರಿಯೆಯಿಂದ ಬಿಡಿಎ ಹಿಂಪಡೆದಿತ್ತು. ನಿರೀಕ್ಷಿಸಿದಷ್ಟು ಮೊತ್ತಕ್ಕೆ (ಮೂಲ ದರಕ್ಕಿಂತ ಶೇ 5ರಷ್ಟು ಹೆಚ್ಚು ಮೊತ್ತಕ್ಕೆ) ಹರಾಜಾಗಿಲ್ಲ ಎಂಬ ಕಾರಣಕ್ಕೆ ಬಿಡಿಎ ಒಟ್ಟು 28 ನಿವೇಶನಗಳ ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸಿದೆ.

'ನಿವೇಶನಗಳ ಇ-ಹರಾಜು ಪ್ರಕ್ರಿಯೆಯಿಂದ ನಾವು ನಿರೀಕ್ಷೆ ಮಾಡಿದ್ದಕ್ಕಿಂತ ₹ 113.58 ಕೋಟಿ ಹೆಚ್ಚುವರಿ ವರಮಾನ ಪ್ರಾಧಿಕಾರಕ್ಕೆ ಬಂದಿದೆ. ನಾವು ನಿಗದಿಪಡಿಸಿದ ಮೂಲದರಕ್ಕಿಂತ ಶೇ 67.94ರಷ್ಟು ಹೆಚ್ಚು ವರಮಾನ ಬಂದಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ

ಏಳನೇ ಹಂತದ ಇ-ಹರಾಜಿನಲ್ಲಿ ಒಟ್ಟು 1,771 ಬಿಡ್ದುದಾರರು ಭಾಗವಹಿಸಿದ್ದರು. ಇ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಕನಿಷ್ಠ ₹ 4 ಲಕ್ಷ ಮೊತ್ತದ ಪ್ರಾರಂಭಿಕ ಠೇವಣಿ (ಇಎಂಡಿ) ಪಾವತಿಸಬೇಕಾಗುತ್ತದೆ. ಹರಾಜಿನಲ್ಲಿ ಯಾವುದೇ ನಿವೇಶನ ಪಡೆಯಲು ಸಾಧ್ಯವಾಗದ ಬಿಡ್ದುದಾರರಿಗೆ ಪ್ರಾರಂಭಿಕ ಠೇವಣಿಯನ್ನು ಹಿಂದಿರುಗಿಸುತ್ತದೆ.

ಆರನೇ ಹಂತದ ಇ ಹರಾಜಿನಲ್ಲಿ ಬಿಡಿಎ 429 ನಿವೇಶನಗಳನ್ನು ಮಾರಾಟಕ್ಕಿಟ್ಟಿತ್ತು. ಅವುಗಳಲ್ಲಿ 271 ನಿವೇಶನಗಳು ಮಾರಾಟವಾಗಿದ್ದವು. ನಿವೇಶನಗಳ ಮೂಲ ದರದ ಪ್ರಕಾರ ₹ 166.32 ಕೋಟಿ ಗಳಿಸಬೇಕಿದ್ದ ಬಿಡಿಎ ಒಟ್ಟು ₹ 255 ಕೋಟಿ ವರಮಾನ ಗಳಿಸಿತ್ತು. ಐದನೇ ಹಂತದಲ್ಲಿ ಹರಾಜಿಗಿಟ್ಟಿದ್ದ 451 ನಿವೇಶನಗಳಲ್ಲಿ 317 ಮಾರಾಟವಾಗಿದ್ದವು. ಬೇಡಿಕೆ ಇಲ್ಲದ ಕಡೆಯ 128 ನಿವೇಶನಗಳು ಮಾರಾಟವಾಗಿರಲಿಲ್ಲ. ನಿರೀಕ್ಷಿಸಿದಷ್ಟು ಬೇಡಿಕೆ ಬಾರದ ಕಾರಣಕ್ಕೆ 29 ನಿವೇಶನಗಳ ಹರಾಜು ಪ್ರಕ್ರಿಯೆಯನ್ನು ಪ್ರಾಧಿಕಾರ ರದ್ದುಡಿಸಿತ್ತು.

ಐದನೇ ಹಂತದಲ್ಲಿ ನಿವೇಶನ ಮಾರಾಟದಿಂದ ₹ 184.57 ಕೋಟಿ ವರಮಾನ ನಿರೀಕ್ಷಿಸಲಾಗಿತ್ತು. ಒಟ್ಟು ₹ 278.58 ಕೋಟಿ ವರಮಾನವನ್ನು ಬಿಡಿಎ ಗಳಿಸಿತ್ತು. 25 ನಿವೇಶನಗಳ ಹರಾಜು ಪ್ರಕ್ರಿಯೆಯನ್ನು ಹಿಂಪಡೆಯಲಾಗಿತ್ತು. 109 ನಿವೇಶನಗಳಿಗೆ ಯಾವುದೇ ಬೇಡಿಕೆ ಬಂದಿಲ್ಲ.

ನಾಲ್ಕನೇ ಹಂತದ ಪ್ರಕ್ರಿಯೆಯಲ್ಲಿ 448 ನಿವೇಶನಗಳಲ್ಲಿ 332 ಬಿಕರಿಯಾಗಿದ್ದವು. 99 ನಿವೇಶನಗಳಿಗೆ ಬೇಡಿಕೆ ಬಂದಿರಲಿಲ್ಲ. ಈ ಹಂತದಲ್ಲಿ ನಿವೇಶನಗಳ ಒಟ್ಟು ಮೂಲ ದರ ₹ 171.95 ಕೋಟಿಯಷ್ಟಿತ್ತು. ಹರಾಜಿನಿಂದ ₹ 281.32 ಕೋಟಿ ವರಮಾನ ಬಂದಿತ್ತು.

ಮೂರನೇ ಹಂತದಲ್ಲಿ 402 ನಿವೇಶನಗಳಲ್ಲಿ 286 ನಿವೇಶನಗಳು ಮಾರಾಟವಾಗಿದ್ದವು. 40 ನಿವೇಶನಗಳನ್ನು ಇ- ಹರಾಜಿನಿಂದ ಹಿಂಪಡೆಯಲಾಗಿತ್ತು. ಹರಾಜಿಗಿದ್ದ 362 ನಿವೇಶನಗಳಲ್ಲಿ 55 ನಿವೇಶನಗಳಿಗೆ ಬೇಡಿಕೆ ಬಂದಿರಲಿಲ್ಲ. ನಿವೇಶನಗಳ ಒಟ್ಟು ಮೂಲ ದರ ₹ 180.46 ಕೋಟಿಗಳಷ್ಟಿತ್ತು. ಇ-ಹರಾಜಿನಿಂದ ₹ 266.33 ಕೋಟಿ ವರಮಾನವನ್ನು ಪ್ರಾಧಿಕಾರ ಗಳಿಸಿತ್ತು.

ಸದ್ಯದಲ್ಲಿಯೇ ಎಂಟನೇ ಹಂತದ ಇ-ಹರಾಜು ಪ್ರಕ್ರಿಯೆಗೆ ಅಧಿಸೂಚನೆ ಪ್ರಕಟಿಸಲಾಗುವುದು ಎಂದು ಬಿಡಿಎ ಸಾರ್ವಜನಿಕ ಸಂಪರ್ಕಾಧಿಕಾರಿ ಎಲ್.ಪಿ.ಗಿರೀಶ್ ತಿಳಿಸಿದ್ದಾರೆ.

ದಾಖಲೆ ಮೊತ್ತಕ್ಕೆ ನಿವೇಶನ ಮಾರಾಟ

ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಯ ಎಂಟನೇ ಬ್ಲಾಕ್‌ನ 108 ಚ.ಮೀಟರ್ ವಿಸ್ತೀರ್ಣದ ನಿವೇಶನವೊಂದು ದಾಖಲೆ (ಶೇ 595.24 ರಷ್ಟು ಹೆಚ್ಚು) ಮೊತ್ತಕ್ಕೆ ಮಾರಾಟವಾಯಿತು. ನಿವೇಶನ ಸಂಖ್ಯೆ 666ಕ್ಕೆ ಬಿಡಿಎ ₹ 45.36 ಲಕ್ಷ ಮೂಲ ದರವನ್ನು ನಿಗದಿ ಪಡಿಸಿತ್ತು. ಈ ನಿವೇಶನವು ₹ 2.70 ಕೋಟಿಗೆ ಮಾರಾಟವಾಯಿತು. ಇ- ಹರಾಜಿನಲ್ಲಿ ಮೂಲದರಕ್ಕಿಂತ ಇಷ್ಟೊಂದು ಹೆಚ್ಚು ಪಟ್ಟು ಮೊತ್ತಕ್ಕೆ ನಿವೇಶನ ಹರಾಜಾಗಿದ್ದು ಇದೇ ಮೊದಲು ಎನ್ನುತ್ತಾರೆ ಬಿಡಿಎ ಅಧಿಕಾರಿಗಳು.

ಎಂದಿನಂತೆ ಈ ಬಾರಿಯೂ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಯ ನಿವೇಶನಗಳಿಗೆ ಬೇಡಿಕೆ ಹೆಚ್ಚು ಇತ್ತು. ಈ ಬಡಾವಣೆಯಲ್ಲಿ ಒಟ್ಟು 13 ನಿವೇಶನಗಳು ಮೂಲ ದರಕ್ಕೆ ಹೋಲಿಸಿದರೆ ಶೇ 100ಕ್ಕೂ ಅಧಿಕ ಮೊತ್ತಕ್ಕೆ ಹರಾಜಾಗಿವೆ. ಈ ಬಡಾವಣೆಯ ಎಂಟನೇ ಬ್ಲಾಕ್‌ನ 1355 ಸಂಖ್ಯೆಯ 642 ಚ.ಮೀ ವಿಸ್ತೀರ್ಣದ ನಿವೇಶನ ₹ 5.33 ಕೋಟಿಗೆ ಹರಾಜಾಗಿದೆ. ಏಳನೇ ಹಂತದ ಹರಾಜು ಪ್ರಕ್ರಿಯೆಯಲ್ಲಿ ನಿವೇಶನವೊಂದಕ್ಕೆ ಬಿಡಿಎ ಗಳಿಸಿದ ಗರಿಷ್ಠ ಮೊತ್ತವಿದು.1344 ಸಂಖ್ಯೆಯ (360 ಚ.ಮೀ ವಿಸ್ತೀರ್ಣ) ನಿವೇಶನ ₹ 3.02 ಕೋಟಿಗೆ, 1356 ಸಂಖ್ಯೆಯ (525 ಚ.ಮೀ) ನಿವೇಶನ ₹ 3.41 ಕೋಟಿಗೆ ಹರಾಜಾಗಿದೆ.

ಅಂಕಿ-ಅಂಶಗಳು

270
ಇ-ಹರಾಜಿನಲ್ಲಿ ಮಾರಾಟವಾದ ಒಟ್ಟು ನಿವೇಶನಗಳು

₹169.08 ಕೋಟಿ
ಮೂಲ ದರದ ಪ್ರಕಾರ ಬಿಡಿಎಗೆ ಬರಬೇಕಾದ ಮೊತ್ತ

₹282.66 ಕೋಟಿ
ಇ-ಹರಾಜಿನಿಂದ ಬಿಡಿಎ ಗಳಿಕೆ

ಇಂದಿನಿಂದ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 9ರಿಂದ 23ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು (ಏ.9): ಐಡಿಯಲ್ ಹೋಮ್ಸ್ ಹಾಗೂ ಕಾರ್ಪೊರೇಷನ್ ಬ್ಯಾಂಕ್ ಸುತ್ತಮುತ್ತ.

ಏ.15: ಐಡಿಯಲ್ ಹೋಮ್ಸ್, 15 ಮತ್ತು 16ನೇ ಅಡ್ಡರಸ್ತೆ, ಆರ್.ಸಿ.ಆಸ್ಪತ್ರೆ ಸುತ್ತಮುತ್ತ.

ಏ.16: ಸುಭಾಷ್ ಭವನ ಸುತ್ತಮುತ್ತ ಮತ್ತು ಐಡಿಯಲ್ ಹೋಮ್ಸ್.

ಏ.17: ನೇತಾಜಿ ಪಾರ್ಕ್, ಸುಭಾಷ್ ಭವನ ಸುತ್ತಮುತ್ತ ಹಾಗೂ ಐಡಿಯಲ್ ಹೋಮ್ಸ್.

ಏ.19: ಮಾರಪ್ಪ ಬಡಾವಣೆ ಆಟೋ ನಿಲ್ದಾಣ ಸುತ್ತಮುತ್ತ.

ಏ.20: ಮೋನಿಷಾ ಕಾರ್ನರ್ ಹೋಟೆಲ್ ಹಾಗೂ ಐಡಿಯಲ್ ಹೋಮ್ಸ್ ಸುತ್ತಮುತ್ತ.

ಏ.21: ಕಾರ್ಪೊರೇಷನ್ ಬ್ಯಾಂಕ್ ರಸ್ತೆ, 15ನೇ ಅಡ್ಡರಸ್ತೆ ಹಾಗೂ ಐಡಿಯಲ್ ಹೋಮ್ಸ್ ಸುತ್ತಮುತ್ತ.

ಏ.22: ಗ್ಲೋಬಲ್ ತಾಂತ್ರಿಕ ಕಾಲೇಜು ರಸ್ತೆ, ವಾಸ್ತು ಹಿಲ್ ವೀವ್ ಸುತ್ತಮುತ್ತ.

ಏ.23: ಸ್ಪರ್ಶ ಆಸ್ಪತ್ರೆ ಮತ್ತು ಐಡಿಯಲ್ ಹೋಮ್ಸ್ ಸುತ್ತಮುತ್ತ.

ನೈಟಿಂಗೇಲ್ ದಾದಿಯರ ಪ್ರಶಸ್ತಿ: ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯಮಟ್ಟದ ಫ್ಲಾರೆನ್ಸ್ ನೈಟಿಂಗೇಲ್ ಶುಶ್ರೂಷಕರ ಪ್ರಶಸ್ತಿಗೆ ಆಂಗ್ಲೊ ಇಂಡಿಯನ್ ಯುನಿಟಿ ಸೆಂಟರ್ ಅರ್ಹರಿಂದ ಅರ್ಜಿ ಆಹ್ವಾನಿಸಿದೆ.

ಮೇ 12ರಂದು ನಡೆಯಲಿರುವ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯ ವೇಳೆ ಈ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

10 ಮಂದಿ ಸ್ಟಾಫ್ ನರ್ಸ್, ಒಬ್ಬರು ಪ್ರಾಚಾರ್ಯ ಅಥವಾ ಉಪನ್ಯಾಸಕರು ಮತ್ತು ಒಬ್ಬರು ನರ್ಸಿಂಗ್ ಸೂಪರಿಂಟೆಂಡೆಂಟ್‌ಗೆ ಪ್ರಶಸ್ತಿ ನೀಡಲಾಗುತ್ತದೆ. ಇದೇ ತಿಂಗಳ 30 ಅರ್ಜಿ ಸಲ್ಲಿಕೆಗೆ ಕೊನೆಯ ದಿನ.

ಮಾಹಿತಿಗೆ, ಎಲ್ಲ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳ ಕಚೇರಿ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

'ಅಂತರರಾಷ್ಟ್ರೀಯ ವ್ಯಾಪಾರ ಕಾನೂನಿನಲ್ಲಿ ಹೊಸ ಪ್ರವೃತ್ತಿಗಳು' ಕುರಿತ ಅಂತರರಾಷ್ಟ್ರೀಯ ಆನ್‌ಲೈನ್ ವಿಚಾರ ಸಂಕಿರಣ: ಮಾತನಾಡುವವರು–ಅಮೆರಿಕದ ಕಾನ್ಸಾಸ್ ಕಾನೂನು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಾಜ್ ಭಲಾ, ಬೆರ್ನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪೀಟರ್ ಎಲ್.ಎಚ್.ವ್ಯಾನ್ ಡೆನ್ ಬಾಷ್, ಅಧ್ಯಕ್ಷತೆ: ಸಿಎಂಆರ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಹಾಗೂ ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ, ಆಯೋಜನೆ: ಸಿಎಂಆರ್ ಕಾನೂನು ವಿಶ್ವವಿದ್ಯಾಲಯ–ಸಂಜೆ 5.30.

'ರಾಷ್ಟ್ರಪ್ರಭುತ್ವ–ಜಾತೀಯ ಹಿಂಸೆ/ಅವಮಾನದ ಹೊಸ ರೂಪಗಳು' ವಿಷಯದ ಕುರಿತ ವೆಬಿನಾರ್: ಮಾತನಾಡುವವರು–ಪ್ರಾಧ್ಯಾಪಕ ಆರ್.ವಿ.ಚಂದ್ರಶೇಖರ, ಅಧ್ಯಕ್ಷತೆ–ಸ್ಫೂರ್ತಿಧಾಮ ಸಂಸ್ಥೆಯ ಅಧ್ಯಕ್ಷ ಎಸ್.ಮರಿಸ್ವಾಮಿ, ಆಯೋಜನೆ–ಸ್ಫೂರ್ತಿಧಾಮ–ಸಂಜೆ 6.30.

ರಂಗ ವಿಜಯಾ ನಾಟಕೋತ್ಸವ–2021: ಉದ್ಘಾಟನೆ–ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ಮುಖ್ಯ ಅತಿಥಿ–ಚಿತ್ರ ನಟಿ ಉಮಾಶ್ರೀ, ಅತಿಥಿಗಳು–ಶಾಸಕ ಕೆ.ವೈ. ನಂಜೇಗೌಡ, ನಗೆ ಬರಹಗಾರ ಎಂ.ಎಸ್. ನರಸಿಂಹ ಮೂರ್ತಿ, ಆಳ್ವಾಸ್ ಪ್ರತಿಷ್ಠಾನದ ಅಧ್ಯಕ್ಷ ಎಂ.ಮೋಹನ್ ಆಳ್ವ, ಅಧ್ಯಕ್ಷತೆ–ರಂಗ ವಿಜಯಾ ಸಂಸ್ಥೆಯ ಗೌರವಾಧ್ಯಕ್ಷ ಗೋವಿಂದರಾಜು–ಸಂಜೆ 6.


ನಾಗಾಭರಣ


ಉಮಾಶ್ರೀ

'ಕೋವಿಡ್ 19 ಲಸಿಕಾ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮಿಷನ್' ಕುರಿತ ಆನ್‌ಲೈನ್ ಸಂವಾದ: ಭಾಗವಹಿಸುವವರು–ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಾಮ್ ಸೇವಕ್ ಶರ್ಮಾ, ಆಯೋಜನೆ–ಪಬ್ಲಿಕ್ ಅಫೈರ್ಸ್ ಫೋರಂ ಆಫ್ ಇಂಡಿಯಾ–ಸಂಜೆ 4.


ಸುರೇಂದ್ರನಾಥ್

ಜನಶತ್ರು ನಾಟಕ ಪ್ರದರ್ಶನ: ರಚನೆ ಮತ್ತು ನಿರ್ದೇಶನ–ಎಸ್.ಸುರೇಂದ್ರನಾಥ್, ಆಯೋಜನೆ–ಸಂಕೇತ್ ನಾಟಕ, ಸ್ಥಳ–ರಂಗ ಶಂಕರ–ಸಂಜೆ 7.30.

ಕಸಾಪ: ನಗರ ಜಿಲ್ಲೆಗೆ 12 ಮಂದಿ ಸ್ಪರ್ಧೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಒಟ್ಟು 12 ಮಂದಿ ಸ್ಪರ್ಧಿಸಿದ್ದಾರೆ.

ಮೇ 9 ರಂದು ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಕೆಗೆ ಬುಧವಾರ ಕಡೆಯ ದಿನವಾಗಿತ್ತು. ರಾಜ್ಯದಲ್ಲಿಯೇ ಅತಿ ಹೆಚ್ಚು ಮತದಾರರನ್ನು ಒಳಗೊಂಡಿರುವ ಬೆಂಗಳೂರು ನಗರ ಜಿಲ್ಲೆ ಘಟಕದ ಅಧ್ಯಕ್ಷ ಗಾದಿಗೆ ಏರಲು ಪ್ರಬಲ ಸ್ಪರ್ಧೆ ಏರ್ಪಟ್ಟಿದೆ.

ಎಚ್.ಎ. ಆತ್ಮಾನಂದ, ಕಾಂತರಾಜಪುರ ಸುರೇಶ್, ಕುವೆಂಪು ಪ್ರಕಾಶ್, ಕೆ.ಎಸ್. ಕೃಷ್ಣೋಜಿರಾವ್, ಆರ್. ಜಯಕುಮಾರ ಗೌಡ, ಎಂ. ತಿಮ್ಮಯ್ಯ, ದಯಾನಂದ ತಿಪ್ಪೇರುದ್ರಪ್ಪ, ಎಂ. ಪ್ರಕಾಶ್ ಮೂರ್ತಿ, ಎಂ. ಪುಟ್ಟರಾಜು, ವೇದಮೂರ್ತಿ ಕೆ.ಸಿ., ಪಿ. ಸುಕುಮಾರ್ ಹಾಗೂ ಪಿ.ಸಿ. ಹೇಮಂತಕುಮಾರ್ ಅವರು ನಾಮಪತ್ರ ಸಲ್ಲಿಸಿದ್ದರು. ಸಲ್ಲಿಕೆಯಾಗಿದ್ದ ನಾಮಪತ್ರಗಳನ್ನು ಚುನಾವಣಾಧಿಕಾರಿ ಶಿವಣ್ಣ ಎಂ.ಜಿ ಅವರ ನೇತೃತ್ವದಲ್ಲಿ ಗುರುವಾರ ಪರಿಶೀಲನೆ ನಡೆಸಲಾಗಿದೆ.

ಎಲ್ಲ ನಾಮಪತ್ರಗಳು ಅಂಗೀಕೃತಗೊಂಡಿದ್ದು, 12 ಮಂದಿಯೂ ಸ್ಪರ್ಧೆಯಲ್ಲಿ ಉಳಿದಿದ್ದಾರೆ. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಒಟ್ಟು 36,596 ಸದಸ್ಯರಿದ್ದಾರೆ. ಇವರಲ್ಲಿ 36,389 ಮಂದಿ ಮತ ಚಲಾವಣೆಯ ಅರ್ಹತೆ ಹೊಂದಿದ್ದಾರೆ.

ನಾಳೆ ಪರೀಕ್ಷೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಬಿ.ಎಂ, ಬಿ.ಬಿ.ಎ, ಬಿ.ಎಚ್.ಎಂ (1 ಮತ್ತು 3ನೇ ವರ್ಷ) ಹಾಗೂ ದೂರಶಿಕ್ಷಣ ಪರೀಕ್ಷೆಗಳು ಇದೇ 10 ರಂದು ನಡೆಯಲಿವೆ.

'ಇದೇ 7ರಂದು ನಡೆಯಬೇಕಿದ್ದ ಪರೀಕ್ಷೆಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮುಷ್ಕರದ ಕಾರಣದಿಂದಾಗಿ ಮುಂದೂಡಲಾಗಿತ್ತು. ಈಗ ಪರಿಷ್ಕೃತ ದಿನಾಂಕ ಬಿಡುಗಡೆ ಮಾಡಲಾಗಿದೆ' ಎಂದು ಕುಲಸಚಿವರ (ಮೌಲ್ಯಮಾಪನ) ಪ್ರಕಟಣೆ ತಿಳಿಸಿದೆ.


ಕಬ್ಬನ್ ಪಾರ್ಕ್‌ನಲ್ಲಿ ವಾಹನ ನಿರ್ಬಂಧ ಅಸಾಧ್ಯ: ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್ ಆವರಣದಲ್ಲಿ ವಾಹನ ಸಂಚಾರ ನಿರ್ಬಂಧಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಸಲ್ಲಿಸಿದ್ದ ಅಫಿಡವಿಟ್ ಪರಿಗಣಿಸಿದ ನ್ಯಾಯಾಲಯ, ಈ ಸಂಬಂಧದ ನ್ಯಾಯಾಂಗ ನಿಂದನೆ ವಿಚಾರಣೆಯನ್ನು ಕೈಬಿಟ್ಟಿದೆ.

'ಕಬ್ಬನ್ ಪಾರ್ಕ್‌ನಲ್ಲಿ ಸಂಚಾರ ತಪ್ಪಿಸಲು ಸಾಧ್ಯವಿಲ್ಲ. ಆದ್ದರಿಂದ ಮೊದಲಿನಂತೆ ಮುಂದುವರಿಸಬೇಕು ಎಂಬ ತೀರ್ಮಾನವನ್ನು 2020ರ ನವೆಂಬರ್ 11ರಂದು ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ' ಎಂದು ಅಫಿಡವಿಟ್‌ನಲ್ಲಿ ಸರ್ಕಾರ ತಿಳಿಸಿದೆ.



'ನಗರ ಭೂಸಾರಿಗೆ ನಿರ್ದೇಶನಾಲಯದ(ಡಲ್ಟ್) ಶಿಫಾರಸನ್ನು ಸರ್ಕಾರ ಪರಿಗಣಿಸಿಲ್ಲ' ಎಂದು ಅರ್ಜಿದಾರರು ದೂರಿದ್ದರು. ಈ ಹಿಂದಿನ ವಿಚಾರಣೆ ವೇಳೆ ಡಲ್ಟ್ ಶಿಫಾರಸು ಪರಿಗಣಿಸುವಂತೆ ಪೀಠ ನಿರ್ದೇಶನ ನೀಡಿತ್ತು. ನ್ಯಾಯಾಲಯದ ಆದೇಶ ಪಾಲಿಸಿಲ್ಲ ಎಂಬ ಕಾರಣಕ್ಕೆ ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿತ್ತು.

ವಿಚಾರಣೆ ಕೈಬಿಟ್ಟ ಪೀಠ, 'ಈ ನಿರ್ಧಾರ ಅರ್ಜಿದಾರರಿಗೆ ತೃಪ್ತಿ ಎನಿಸದಿದ್ದರೆ ಕಾನೂನಿನ ಪ್ರಕಾರ ಮುಂದುವರಿಯಲು ಸ್ವಾತಂತ್ರ್ಯವಿದೆ' ಎಂದು ಹೇಳಿತು.

ಪಾಂಡುರಂಗ ಗರಗ್ ಅಮಾನತಿಗೆ ಆಗ್ರಹ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಬೆಂಗಳೂರು ಪ್ರಾಂತ್ಯದ ಸಹಕಾರ ಸಂಘಗಳ ಜಂಟಿ ರಿಜಿಸ್ಟ್ರಾರ್ ಪಾಂಡುರಂಗ ಡಿ. ಗರಗ್ ಅವರನ್ನು ತಕ್ಷಣ ಸೇವೆಯಿಂದ ಅಮಾನತು ಮಾಡುವಂತೆ ಆಗ್ರಹಿಸಿ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರಿಗೆ ಪತ್ರ ಬರೆದಿದ್ದಾರೆ.

ಅಕ್ರಮ ಆಸ್ತಿ ಹೊಂದಿರುವ ಆರೋಪದ ಮೇಲೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಪಾಂಡುರಂಗ ಗರಗ್ ವಿರುದ್ಧ ಪ್ರಕರಣ ದಾಖಲಿಸಿದ್ದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ಫೆಬ್ರುವರಿ 2ರಂದು ಆರೋಪಿತ ಅಧಿಕಾರಿಯ ಮನೆ, ಕಚೇರಿಗಳ ಮೇಲೆ ದಾಳಿ ಮಾಡಿ ಶೋಧ ನಡೆಸಿತ್ತು.

'ಅಕ್ರಮ ಆಸ್ತಿ ಹೊಂದಿರುವುದು ಮೇಲ್ನೋಟಕ್ಕೆ ಖಚಿತವಾದ ಕಾರಣದಿಂದ ಈ ಅಧಿಕಾರಿಯನ್ನು ಅಮಾನತು ಮಾಡಿ, ಜಂಟಿ ರಿಜಿಸ್ಟ್ರಾರ್ ಹುದ್ದೆಯಿಂದ ಬಿಡುಗಡೆ ಮಾಡುವಂತೆ ಎಸಿಬಿಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಫೆ. 26ರಂದು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಆದರೆ, ಈವರೆಗೂ ಯಾವುದೇ ಕ್ರಮ ಜರುಗಿಸಿಲ್ಲ. ಆರೋಪಿ ಅಧಿಕಾರಿಯನ್ನು ಅಮಾನತು ಮಾಡಲು ತಕ್ಷಣ ಕ್ರಮ ಕೈಗೊಳ್ಳುವಂತೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶನ ನೀಡಬೇಕು' ಎಂದು ಮರಿತಿಬ್ಬೇಗೌಡ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಪ್ರಾಣಿಗಳಿಗೆ ನೀರುಣಿಸುವ ಸ್ವಾಮೀಜಿ

ಕೊರಟಗೆರೆ: ತಾಲ್ಲೂಕಿನ ಸಿದ್ದರಬೆಟ್ಟದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಬಿಸಿಲಿನ ಬೇಗೆಗೆ ಬಸವಳಿಯುವ ಪ್ರಾಣಿ, ಪಕ್ಷಿಗಳ ದಾಹ ಇಂಗಿಸಲು ಅರಣ್ಯ ಪ್ರದೇಶದಲ್ಲಿ ನೀರಿನ ವ್ಯವಸ್ಥೆ ಮಾಡುತ್ತಿದ್ದಾರೆ.

ಸಿದ್ದರಬೆಟ್ಟ ಸಸ್ಯಕಾಶಿ ಎಂದೇ ಹೆಸರು ಗಳಿಸಿದೆ. ಸಾವಿರಾರು ಬಗೆಯ ಗಿಡಗಳು ಇಲ್ಲಿವೆ. ಇದು ವಿವಿಧ ಪಕ್ಷಿ, ಪ್ರಾಣಿಗಳ ಆಶ್ರಯ ತಾಣವೂ ಹೌದು. ಜಿಂಕೆ, ಕಡವೆ, ಕರಡಿ, ಚಿರತೆ, ಕೋತಿಗಳು ಅಪಾರ ಸಂಖ್ಯೆಯಲ್ಲಿವೆ.

ಬೇಸಿಗೆಯಲ್ಲಿ ಪ್ರಾಣಿಗಳಿಗೆ ನೀರಿನ ಅಭಾವ ಕಂಡು ಬರುತ್ತದೆ. ಹಾಗಾಗಿ ರಂಭಾಪುರಿ ಶಾಖಾ ಮಠದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಬೆಟ್ಟದ ತಪ್ಪಲಿನ ಅರಣ್ಯ ಪ್ರದೇಶ ಸೇರಿದಂತೆ ಬೆಟ್ಟದ ಮೇಲ್ಭಾಗದಲ್ಲಿ ನಿತ್ಯ ನೀರು ಇಡುತ್ತಿದ್ದಾರೆ. ಕಾಡಿನ ಅಲ್ಲಲ್ಲಿ ಸಣ್ಣ ಸಿಮೆಂಟ್ ತೊಟ್ಟಿಗಳನ್ನು ನಿರ್ಮಿಸಿ ನಿತ್ಯ ಟ್ಯಾಂಕರ್ ಮೂಲಕ ಆ ತೊಟ್ಟಿಗಳಿಗೆ ನೀರು ತುಂಬಿಸುತ್ತಿದ್ದಾರೆ.

'ಬೇಸಿಗೆಯಲ್ಲಿ ಕುಡಿಯುವ ನೀರು ದೊರೆಯದೆ ಅನೇಕ ಜೀವಿಗಳು ಮೃತಪಡುತ್ತಿದ್ದವು. ಹಾಗಾಗಿ ಮಳೆಗಾಲ ಪ್ರಾರಂಭವಾಗುವವರೆಗೆ ಸಾಕಾಗುವಷ್ಟು ನೀರನ್ನು ನಿತ್ಯ ಅರಣ್ಯ ಪ್ರದೇಶದ ಅಲ್ಲಲ್ಲಿ ಸಂಗ್ರಹಿಸಿಡುತ್ತಿದ್ದೇವೆ' ಎನ್ನುತ್ತಾರೆ ವೀರಭದ್ರ ಶಿವಾಚಾರ್ಯ ಸ್ವಾಮೀಜಿ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ತಿದ್ದುಪಡಿ

ಪ್ರಕಟಣೆ ಸಂಖ್ಯೆ: ಬೆಂಅಪ್ರಾ/ಕಾನಿಅ(ಮೂಸೌವಿ)/ಹರಾಜು(ವಾ)/86616/2020–21, ದಿನಾಂಕ: 29.03.2021ರ ಅನ್ವಯ ದಿನಾಂಕ: 07.04.2021ರಂದು ಪ್ರಕಟವಾಗಿರುವ ಟೆಂಡರ್ ಕಂ ಸಾರ್ವಜನಿಕ ಹರಾಜು ಪ್ರಕಟಣೆ ಆಹ್ವಾನ ಜಾಹೀರಾತಿನ ಸಂಬಂಧದಲ್ಲಿ ಸಾರ್ವಜನಿಕ ಹರಾಜು **ಇ-ಪ್ರೊಕ್ಯೂರ್‌ಮೆಂಟ್ ಮೂಲಕ ನಡೆಯುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು**. ಟೆಂಡರ್ ಕಂ ಸಾರ್ವಜನಿಕ ಹರಾಜಿನ ದಿನಾಂಕಗಳು ಕೆಳಕಂಡಂತಿರುವುದು: ಟೆಂಡರ್ ನಮೂನೆಗಾಗಿ ಮನವಿ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **17.04.2021ರಂದು ಸಂಜೆ 4.00 ಗಂಟೆವರೆಗೆ.** ಖಾಲಿ ಟೆಂಡರ್ ನಮೂನೆಯನ್ನು ನೀಡುವ ದಿನಾಂಕ: **01.04.2021 ರಿಂದ 17.04.2021ರ ಸಂಜೆ 4.00 ಗಂಟೆವರೆಗೆ.** ಭರ್ತಿ ಮಾಡಿದ ಟೆಂಡರ್ ನಮೂನೆ ಸ್ವೀಕರಿಸುವ ಕಡೇ ದಿನಾಂಕ ಮತ್ತು ಸಮಯ: **19.04.2021 ಬೆಳಿಗ್ಗೆ 11.00 ಗಂಟೆಗೆ ಮುನ್ನ**. ಹರಾಜಿನ ದಿನಾಂಕ: **21.04.2021ರಂದು ಬೆಳಿಗ್ಗೆ 11.00 ಗಂಟೆಗೆ.** ಹರಾಜು ನಡೆಯುವ ಸ್ಥಳ: ಬಿಡಿಎ ಪ್ರಧಾನ ಕಛೇರಿ, ಬೆಂಗಳೂರು–20. ಹೆಚ್ಚಿನ ವಿವರಗಳು ಮತ್ತು ಮಾಹಿತಿಗಾಗಿ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಮೂಲಸೌಕರ್ಯ ವಿಭಾಗ, ಬಿಡಿಎ, ಬೆಂಗಳೂರು

ಕರ್ನಾಟಕ ಸರ್ಕಾರ
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್,

ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ನಂ.215, ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾ. ಬೆಂಗಳೂರು ಗ್ರಾಮಾಂತರ ಜಿಲ್ಲೆ, –562110
ಇ–ಮೇಲ್: dobcmbengalururural@gmail.com ಫ್ಯಾಕ್ಸ್/ಕಛೇರಿ ದೂರವಾಣಿ: 080–29787440

ಸಂಖ್ಯೆ: ಡಿಬಿಸಿ/ಬೆಂ.ಗ್ರಾ/ಆಹಾರ ಟೆಂಡರ್/ಸಿ.ಆರ್–01/2021–22 ದಿನಾಂಕ: 05.04.2021

ಪ್ರಕಟಣೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸಲಾಗುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ 2021–22ನೇ ಸಾಲಿನಲ್ಲಿ ಆಹಾರ ಮತ್ತು ಇತರೆ ಸಾಮಾಗ್ರಿಗಳನ್ನು ಪೂರೈಸಲು ಅರ್ಹ ಹಾಗೂ ವಿವಿಧ ಕಾಯ್ದೆಗಳ ಕಾನೂನಿನಡಿಯಲ್ಲಿ ನೊಂದಣಿ ಮಾಡಿಕೊಂಡಿರುವ ವ್ಯಕ್ತಿಗಳು/ ಸಂಸ್ಥೆಗಳಿಂದ ಆನ್‌ಲೈನ್ ಮುಖಾಂತರ ಟೆಂಡರ್ ಕರೆಯಲಾಗಿದೆ. **E-Procurement (https://www.eproc.karnataka.gov.in)** ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: **05.04.2021** ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು, ದಿನಾಂಕ: **04.05.2021ರ ಸಂಜೆ 5.30** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ **E-Procurement (https://www.eproc.karnataka.gov.in)** ನ ಮೂಲಕ ಮಾಹಿತಿ ಪಡೆಯಬಹುದು ಅಥವಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಅಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/13/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗೌರವಾನ್ವಿತ 3ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕೋಲಾರ.

ಮೂಲ ದಾವೆ ಸಂಖ್ಯೆ:409/2019

ವಾದಿ : ವೀರವೆಂಕಟಪ್ಪ ಬಿನ್ ಲೇಟ್. ವೀರಪ್ಪ, ವಯಸ್ಸು ಸುಮಾರು 69 ವರ್ಷ, ವಾಸ: ನಂ.138, ಮಹಾರಾಜ ರಸ್ತೆ, 6ನೇ ಅಡ್ಡರಸ್ತೆ, ರಾಬರ್ಟ್‌ಸನ್ ಪೇಟೆ, ಕೆ.ಜಿ.ಎಫ್. ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು : ರುಕ್ಮಿಣಿಯಮ್ಮ ಮತ್ತು ಇತರರು
ಪ್ರತಿವಾದಿ – 2 : ಶ್ರೀಮತಿ. ಮಂಜುಳ, ಬಿನ್ ಲೇಟ್. ನಾರಾಯಣಪ್ಪ, ವಯಸ್ಸು ಸುಮಾರು 52 ವರ್ಷ, ವಾಸ: ನಂ.554, 3ನೇ ಅಡ್ಡರಸ್ತೆ, 3ನೇ ಫೇಸ್, ಕೆಂಪೇಗೌಡ ಬಡಾವಣೆ, ಬನಶಂಕರಿ 3ನೇ ಹಂತ, ಬೆಂಗಳೂರು

ನೋಟೀಸು

ಈ ಮೂಲಕ ವಾದಿಗಳು ನಿಮಗೆ ತಿಳಿಯಪಡಿಸುವುದೇನೆಂದರೆ, ನಿಮ್ಮ ಹಾಗೂ ಇತರರ ವಿರುದ್ಧ ಅಸಲುದಾವೆ **ಸಂಖ್ಯೆ:409/2019** ರಲ್ಲಿ ವಿಭಾಗಕ್ಕಾಗಿ ಕೋರಿ ದಾವೆ ಹೂಡಿದ್ದು ಈಗಾಗಲೇ ನಿಮ್ಮ ಹಾಜರಾತಿಗಾಗಿ ನ್ಯಾಯಾಯದ ಮೂಲಕ ಮತ್ತು ಅಂಚೆ ಮುಖಾಂತರ ನೋಟೀಸನ್ನು ನೀಡಲಾಗಿದ್ದರೂ ಸಹ ನೀವು ನೋಟಿಸನ್ನು ಸ್ವೀಕರಿಸದೇ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ, ಆದ ಕಾರಣ ಮೇಲ್ಕಂಡ ದಾವೆಯನ್ನು **ದಿನಾಂಕ:28.05.2021** ನಿಮ್ಮ ಹಾಜರಾತಿಗಾಗಿ ನಿಗದಿಪಡಿಸಲಾಗಿದ್ದು, ಅಂದು ಬೆಳಿಗ್ಗೆ **11** ಗಂಟೆಗೆ ತಾವುಗಳು ಖುದ್ದಾಗಿ ಆಗಲೀ ಅಥವಾ ತಮ್ಮ ವಕೀಲರ ಮೂಲಕ ಸದರಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರು ಏನಾದರೂ ಇದ್ದಲ್ಲಿ ಸಲ್ಲಿಸತಕ್ಕದ್ದು ಇಲ್ಲವಾದರೆ ಈ ದಾವೆಯನ್ನು ನ್ಯಾಯಾಲಯದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯುವುದು.

ಈ ನೋಟಿಸನ್ನು ನ್ಯಾಯಾಲಯದ ಆದೇಶದ ಮೇರೆಗೆ **ದಿನಾಂಕ:05.04.2021** ರಂದು ನನ್ನ ಸ್ವಹಸ್ತದೊಂದಿಗೆ ಕಛೇರಿಯ ಮೊಹರು ಸಹಿತ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ,
(ಶಿರಸ್ತೇದಾರರು), 3ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ,
ಮತ್ತು ಸಿ.ಜೆ.ಎಂ., ಕೋಲಾರ.

ಸ್ಥಳ : ಕೋಲಾರ
ದಿನಾಂಕ:05–04–2021

ವಾದಿ ಪರ ವಕೀಲರು: ವಿ.ಎಸ್.ರಮೇಶ್, ವಕೀಲರು, "ಶಿವಕೃಪ ನಿಲಯ" 2ನೇ ಅಡ್ಡರಸ್ತೆ, ಜಯನಗರ, ಕೋಲಾರ ನಗರ, ಕೋಲಾರ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land

Mysore

FOR SALE, 1 Acre Prime Agriculture Land Facing NH-766, between Mysore and T. Narasipura at Inam-Uttanahalli Village, Mysore Taluk. Suitable for Complex, Bunk, Lodging, Hotel etc. Price: 3 Crores (Nego) Contact: 7338091714

Ramanagar

1.15 ACRES Farm House Land for Sale, Between HEJJALA and BIDADI. Fully Fenced. Single Owner 8095353455

Yelahanka

WEST FACING 1-Acre Agricultural Land Near Rajanukunte 2-KM from SH-9 Rs.1 Crore 25 Lakhs. Clear Documents. Contact:9741228396

Commerical

Vasanthnagar

2 BHK converted to office fully furnished space 1262 sqft incl car park for sale. Palace garden compound, palace cross Road. 1.27 cr. neg. Contact 9845493251/ 9449009325.

Flat

General

PRESTIGE KEW GARDENS, 2, 2.5 & 3 BHK ready to occupy Apartment with all amenities for Sale near Yemalur. Call: 9900078809.

Cookes Town

BRAND NEW 2BHK-FLAT 970sft Opposite:ITC Factory Jai BharathNagar Cooke Town, Going Cheap Contact:Owner 9845662043/9886822775

Hebbal

FLAT FOR sale 2 & 3 BHK at Hebbal kempapura & Jakkur contact:8050506201/ 9916108969

Indiranagar

PRESTIGE RAPPERSWIL Large 3 BR in Versova Lyt, near Indira Ngr with Lift, private car parking and 24 hour security. Imm possession. Price Rs. 2.6 Cr. 7259665390

Sites

Banashankari

JOINT VENTURE/SALE, BDA 'A' Khata 12,700 Sqft Land West Facing to 60ft BDA Road, Excellent Location in Banashankari 6th Stage, Suitable for Apartment, Contact: OWNER 9341232829, 9380809384.

General

PRESTIGE GOLFSHIRE, plot for Sale, area 13345 sft, Nandi Hills, Bangalore. Call: 9900020184

Bannerghatta Road

APPROVED LAYOUT Anekal Town Planning at Bannerghatta Road, 30X40, 40X60 after National Park. Contact- 9886241744

Kempegowda Layout

NAADAPRABHU KEMPEGOWDA BADAVANE, BDA Site 40x60for Sale, West Facing, Near Archakara Badavane, Behind PR Road, 7th Block 'F'Sector, SiteNo.2710. Call:9343702975/ 9916099857

Nagarabhavi

"40X60 EF Site Sale Nagarabhavi Railway 1st Stage 40 feet Road, 7500/-P.Sft Genuine Buyers Contact. 9845268611"

Rajarajeshwari Nagar

1921 SQFT Corner Site Sale at Ideal Homes, Rajarajeshwari Nagar. 2.45 Crores, Negotiable. Call: 9845462344.

Vishweshwariah Layout

WANTED AVAILABLE BDA Sites Vishweshwaraiah Layout, Kempegowda Layout 20x30, 30x40, 40x60, 50x80.Contact Genuine Buyers/Sellers: 8892901567/ 9341733480

Yelahanka

SALE BDA Approved North Facing 1427 Sft Site Jayasurya Nagar III Phase 'A' Block, (Vidhana Soudha Layout) At Agarahara, Yelahanka, Bangalore Contact 9535773366, 9448488818

RENTAL PROPERTIES

Accommodation Available

Commercial

TWO FLOORS of 1900 sqft each Commercial space, suitable for office, coaching center, Company Guest House and Showrooms available for rent. Please contact /WhatsApp 9448178451

FOR-RENT- 9000 sqft Commercial/Industrial building @ RAJAJINAGAR INDUSTRIAL-TOWN (West of Chord Road,Service Road). Contact:9886698461

Flats

PRESTIGE Royale GARDENS, 2, 2.5 & 3 BHK ready to occupy Apartment with all amenities for rent in Yelahanka. Call: 7625021143.

PRESTIGE FALCON CITY, Kanakapura Road, ready to occupy Apartment for Rent with all amenities. Call: 9108050577.

AUGUSTA GOLF VILLAGE, Luxury units for rent, 3 & 4 BHK ready to occupy with all amenities, Off Hennur Road. Call: 9900085276.

PRESTIGE LAKESIDE HABITAT, Varthur Road, 2/ 3/ 4 BHK ready to occupy apartment for Rent with all amenities. Call: 6366971311.

Industrial And Factory

4ACRES OF land Available on NH7 80km from Bangalore and 40km from Hosur Suitable for Warehouse and Factories Contact 8056149444

House

FOR RENT 2Bhk Ground Rent/advance : 13000/80000 negotiableHindus(veg), preferably newly married at jp Nagar 7th phase contact:9480077222 /9449832424

3 BHK available for rent at manyatha tech park ready to occupy contact:9900261312

JOB OPPORTUNITIES

Engg/ Production Technical

CONSTRUCTION SITE supervisor with 3 + years experience for site in Kammanahalli (HRBR Layout) should have 2 wheeler and construction knowledge. Contact: 080- 26603729 / 080- 26602089 E-mail: anvesh@mahendraperfumery.com.

General

WANTED EX Service-Men with Good Health To Work Full-Time on A Land Development Project, Salary 26,000/-Pm with Quarterly Raise:-9986067062

Marketing & Sales

WANTED SALES Executive/ Bangalore/ Centering/ Scaffolding Products/ Field work/ 2 Wheeler Must/12K/ Allowance Call: 9900069150

BUSINESS

Business to Business

Shares

WAT_R_U DOING AFTER WORK? Share Market, Deposit 2Lac earn 10% monthly Demat account Call: 8088665724

EDUCATIONAL

Admission

DIRECT FINAL Year: B.Ed/ LL.B/B.Tech/M.Tech/ Diploma/MBA/BBA/BCA/ B.Com. Govt,UGC Recognised, Join immediately. Asha Institute: Bangalore. 9448460103/ 7093438248

School

TEACHERS WANTED at Wisdom Montfort International School (CBSE), Yelahanka, Bengaluru- 64. Eng, Maths, Sci, S.Sci, Hindi, Music, Ph.Ed, Dance. Call: 9036017774 or e-mail: wisdommontfort@gmail.com

PERSONAL

Change of Name

I, AMARNATH C.M and Mohana Priya R. residing at No.8, 7th cross, 3rd Block, Dasappa Layout, Ramamurthy Nagar, Bangalore- 560016 have changed our Son's name from RITVAAN. A to RUTHWIK. A vide affidavit 10/02/2021 notary S.Ramesh, Bengaluru.

I, ARPUTHA Royan S/o. Maria Amalanathan R/at. No.16, Block no.13, E.W.S Quarters, Koramangala, Vivek Nagar, Bangalore South, Bl-47 have changed my name to A. WILLIAM PATRICK vide affidavit 10/02/2021 notary Thangaraj. S, KGF, Kolar Dist.

PATIL JOYTI Sagar W/o. 14856654N, NK Patil Sagar Sunil, Vill: Hivarkhede BK Jamner Jalgaon, Maharashtra, my name PATIL JOYTI SAGAR to PATIL JYOTI SAGAR, notary KV Mani, Bangalore.

I, RANGANATH M. R S/o Rangahanumaiah Resident of Madigondanahalli, Kudur Hobli, Magadi Taluk, Ramanagara, wrongly mentioned my name as Ranganathi M I R in the documents. Here declaring that my correct name is RANGANATH M R only vide affidavit 26/03/2021 notary Ravikala S.N, Magadi.

LALIT AMMA M/o 14833801Y- Sep/MT- SRIKANTH LAMMATA R/a 1-9, Kattivaram, Pedda Srirampuram, Srikakulam, Andhra Pradesh changed name from LALIT AMMA to LAMMATA LALITHA notary KV Mani Bangalore.

14814756H, HAV/MT, Biju AK, 2ATC, mother name service record J KAMALAMMA instead of KAMALAMMA JANAKIAMMA notary KV Mani, Bangalore.

Lost

I have lost my Mark Sheets of 10th Roll No.(4139667) and B.com 3rd Semester (166JC41064), If found kindly Contact 9620996268.

ಕೋವಿಡ್ ನಿಯಂತ್ರಣ ಮಾರ್ಗಸೂಚಿ ಕಡೆಗಣನೆ: ಎಂಟು ವಿಭಾಗಗಳಲ್ಲಿ ಕಾರ್ಯಾಚರಣೆ

29 ಮಳಿಗೆಗಳ ಮುಚ್ಚಿಸಿದ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಹರಡುವಿಕೆ ನಿಯಂತ್ರಿಸಲು ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳನ್ನು ಕಡೆಗಣಿಸಿರುವ 29 ಮಳಿಗೆಗಳನ್ನು ಬಿಬಿಎಂಪಿ ಅಧಿಕಾರಿಗಳು ಗುರುವಾರ ಮುಚ್ಚಿಸಿದ್ದಾರೆ. ಇವುಗಳಲ್ಲಿ ಬೇಕರಿಗಳು, ಸೂಪರ್ ಮಾರ್ಕೆಟ್‌ಗಳು, ಸಲೂನ್, ಜಿಮ್ ಹಾಗೂ ಮಾಲ್‌ಗಳಲ್ಲಿನ ಮಳಿಗೆಗಳು ಸೇರಿವೆ.

ಸೋಂಕು ಹರಡುವಿಕೆ ನಿಯಂತ್ರಿಸಲು ಮಳಿಗೆಗಳ ಮಾಲೀಕರು ಕ್ರಮಕೈಗೊಂಡಿದ್ದಾರೆಯೇ ಎಂಬುದನ್ನು ಪರಿಶೀಲಿಸಲು ಪ್ರತಿ ವಲಯಗಳಲ್ಲೂ ಬಿಬಿಎಂಪಿ ಆರೋಗ್ಯಾಧಿಕಾರಿ ನೇತೃತ್ವದಲ್ಲಿ ತಂಡಗಳನ್ನು ರಚಿಸಲಾಗಿದೆ. ಈ ತಂಡಗಳು ಅಂಗಡಿ ಮಳಿಗೆಗಳಿಗೆ ಖುದ್ದಾಗಿ ಭೇಟಿ ನೀಡಿ ಅಲ್ಲಿನ ಸಿಬ್ಬಂದಿ ಸೋಂಕು ನಿಯಂತ್ರಣ ಕ್ರಮಗಳನ್ನು ಪಾಲಿಸುತ್ತಿದ್ದಾರೆಯೇ, ಗ್ರಾಹಕರು ಅಂತರ ಕಾಪಾಡಲು ವ್ಯವಸ್ಥೆ ಕಲ್ಪಿಸಲಾಗಿದೆಯೇ ಎಂಬುದನ್ನು ಪರಿಶೀಲಿಸುತ್ತಿವೆ. ಸಿಬ್ಬಂದಿ ಮಾಸ್ಕ್ ಧರಿಸದಿದ್ದರೆ ಅಧಿಕಾರಿಗಳು ದಂಡ ವಿಧಿಸಿ ಎಚ್ಚರಿಕೆ ನೀಡುತ್ತಿದ್ದಾರೆ. ಸೂಪರ್ ಮಾರ್ಕೆಟ್, ಮಾಲ್, ಹೋಟೆಲ್ ಮುಂತಾದ ಹೆಚ್ಚು ಜನ ಸೇರುವ ತಾಣಗಳಲ್ಲಿ ಸೋಂಕು ಹರಡುವಿಕೆ ನಿಯಂತ್ರಣ ಕ್ರಮಗಳನ್ನು ಕಡೆಗಣಿಸಿದ್ದರೆ, ಅಂತಹ ಮಳಿಗೆಗಳನ್ನು ಅಧಿಕಾರಿಗಳು ಮುಚ್ಚಿಸುತ್ತಿದ್ದಾರೆ.

ಅಂಗಡಿ– ಮಳಿಗೆ ಮುಚ್ಚಿಸಿದ ವಿವರ	
ವಲಯ	ಸಂಖ್ಯೆ
ಯಲಹಂಕ	3
ಮಹದೇವಪುರ	2
ಪಶ್ಚಿಮ	5
ದಕ್ಷಿಣ	7
ಬೊಮ್ಮನಹಳ್ಳಿ	4
ಪೂರ್ವ	5
ಆರ್.ಆರ್.ನಗರ	2
ದಾಸರಹಳ್ಳಿ	1

ಪಶ್ಚಿಮ ವಲಯದ ಚಾಮರಾಜಪೇಟೆಯ ಕಾವೇರಿ ಬಾರ್ ಮತ್ತು ರೆಸ್ಟೋರೆಂಟ್, ಮಲ್ಲೇಶ್ವರ ಮಲ್ಟಿ ಕಾರ್ ಸರ್ವಿಸ್, ಹಿಲ್ ಟಾಪ್ ಕಾಂಡಿಮೆಂಟ್ಸ್, ಶ್ರೀಗಾಯತ್ರೀ ಗ್ಲಾಸ್ ಮ್ತು ಪ್ಲೈವುಡ್ಸ್, ಶ್ರಿರಾಮ್ ಹಾಟ್ ಚಿಪ್ಸ್ ಮಳಿಗೆಗಳನ್ನು ಆರೋಗ್ಯಾಧಿಕಾರಿಗಳ ತಂಡ ಮುಚ್ಚಿಸಿತು. ಈ ವಲಯದಲ್ಲಿ 18 ಮಳಿಗೆಗಳಿಗೆ ಒಟ್ಟು ₹14 ಸಾವಿರ ದಂಡ ವಿಧಿಸಲಾಗಿದೆ.



ಕೋವಿಡ್ ಹರಡುವಿಕೆ ನಿಯಂತ್ರಿಸಲು ಸರ್ಕಾರ ಸೂಚಿಸಿದ ಮಾರ್ಗಸೂಚಿ ಪಾಲಿಸದ ಕಾರಣಕ್ಕೆ ಗಿರಿನಗರದ ಜಿಮ್ ಒಂದನ್ನು ಬಿಬಿಎಂಪಿ ಅಧಿಕಾರಿಗಳು ಗುರುವಾರ ಮುಚ್ಚಿಸಿದರು

ಮಹದೇವಪುರ ವಲಯದಲ್ಲಿ ಮುನ್ನೆಕೊಳಾಲದ ಖಿಶಿ ಪಾಯಿಂಟ್ ಹಾಗೂ ಮೇಡಹಳ್ಳಿಯ ಬಿಗ್ ಡೇ ಸೂಪರ್ ಮಾರ್ಕೆಟ್‌ಗಳಿಗೆ ಅಧಿಕಾರಿಗಳು ಬೀಗಮುದ್ರೆ ಹಾಕಿದರು. ಮೂರು ಮಳಿಗೆಗಳಿಗೆ ಒಟ್ಟು ₹ 1,800 ದಂಡ ವಿಧಿಸಿದರು.

ಯಲಹಂಕ ವಲಯದಲ್ಲಿ ಬ್ಯಾಟರಾಯನಪುರದಲ್ಲಿ ಧ್ರುವೇಶ್ ಹೋಂಡಾ ಶೋರೂಮ್, ಮಯೂರ ಬೇಕರಿ, ನಂದಿನಿ ಹಾಲಿನ ಮಳಿಗೆ, ಸೌತ್ ಜಂಕ್ಷನ್ ಮಳಿಗೆಗಳನ್ನು ಅಧಿಕಾರಿಗಳು ಮುಚ್ಚಿಸಿದರು. ಅಂಗಡಿಯೊಂದಕ್ಕೆ ₹ 1 ಸಾವಿರ ದಂಡ ವಿಧಿಸಿದರು.

ದಕ್ಷಿಣ ವಲಯದ ಶ್ರೀನಗರ, ವಿದ್ಯಾಪೀಠ ಹಾಗೂ ಗಿರಿನಗರ ವಾರ್ಡ್‌ಗಳಲ್ಲಿ ಒಟ್ಟು ಆರು ಮಳಿಗೆಗಳನ್ನು ಮುಚ್ಚಿಸಿದ್ದಾರೆ. ಗಿರಿನಗರದಲ್ಲಿ ದಿ ಬಾಡಿ ಇಮೇಜ್ ಜಿಮ್‌ಗೆ ಅಧಿಕಾರಿಗಳು ಬೀಗ ಹಾಕಿಸಿದ್ದಾರೆ. ಪೋರಂ ಮಾಲ್‌ನ ಮಳಿಗೆಯನ್ನು ಮುಚ್ಚಿಸಿದ್ದಾರೆ.

ಪೂರ್ವ ವಲಯದಲ್ಲಿ ಎಸ್.ಆರ್.ನಗರದಲ್ಲಿ ನೋಬಲ್ ಕಾರ್ನರ್ ಸೂಪರ್ ಮಾರ್ಕೆಟ್, ಹೊಯ್ಸಳ ನಗರ ವಾರ್ಡ್‌ನ ಅಲ್‌ಬೇಕ್ ಹೋಟೆಲ್ ಹಾಗೂ ಮೂರು ಮಳಿಗೆಗಳಿಗೆ ಅಧಿಕಾರಿಗಳು ಬೀಗ ಹಾಕಿಸಿದರು. ವಿವಿಧ ಮಳಿಗೆಗಳಿಂದ ಒಟ್ಟು ₹ 61,700 ಸಾವಿರ ದಂಡ ಸಂಗ್ರಹಿಸಿದರು. ಇದರಲ್ಲಿ ಕಸ ಸಂಗ್ರಹಣೆಯನ್ನು ಸಮರ್ಪಕವಾಗಿ ನಿರ್ವಹಿಸದ ದಂಡವೂ ಇದರಲ್ಲಿ ಸೇರಿದೆ.

ದಾಸರಹಳ್ಳಿ ವಲಯದಲ್ಲಿ ಒಂದು ಮಳಿಗೆಯನ್ನು ಮುಚ್ಚಿಸಲಾಗಿದ್ದು, ವಿವಿಧ ಮಳಿಗೆಗಳಿಂದ ಒಟ್ಟು ₹ 3ಸಾವಿರ ದಂಡ ಸಂಗ್ರಹಿಸಲಾಗಿದೆ. ಬೊಮ್ಮನಹಳ್ಳಿ ವಲಯದಲ್ಲಿ ನಾಲ್ಕು ಮಳಿಗೆಗಳನ್ನು ಮುಚ್ಚಿಸಲಾಗಿದೆ.

ಸುದ್ದಿ 2 ನಿಮಿಷ

ನರ್ಸಿಂಗ್ ಪರೀಕ್ಷೆಯಲ್ಲೂ ನಕಲಿ ಅಭ್ಯರ್ಥಿಗಳು: ಬಂಧನ

ಬೆಂಗಳೂರು: ನರ್ಸಿಂಗ್ ಪರೀಕ್ಷೆ ಬರೆಯಬೇಕಿದ್ದ ಅಸಲಿ ಅಭ್ಯರ್ಥಿಗಳ ಹೆಸರಿನಲ್ಲಿ ಪರೀಕ್ಷೆ ಬರೆಯುತ್ತಿದ್ದ ಇಬ್ಬರು ನಕಲಿ ಅಭ್ಯರ್ಥಿಗಳನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಗುಜರಾತ್‌ನ ನೀಲಂ ವಾಕರ್ ಹಾಗೂ ಎಲ್ಸಿ ಬಂಧಿತರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಇಬ್ಬರು, ಬಾಡಿಗೆ ಮನೆಯಲ್ಲಿ ವಾಸವಿದ್ದರು. ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತಯಾರಿ ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹನುಮಂತನಗರದ ಶ್ರೀ ಭವಾನಿ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ನರ್ಸಿಂಗ್ ಪರೀಕ್ಷೆ ನಡೆಯುತ್ತಿತ್ತು. ಪರೀಕ್ಷೆಗೆ ಮನೀಶಾ ಡೇರಿಯಾ ಹಾಗೂ ನಟೂರಿಯಾ ಸುಮೈಯಾ ಎಂಬುವವರು ಹಾಜರಾಗಬೇಕಿತ್ತು. ಆದರೆ, ಅವರ ಬದಲು ಆರೋಪಿಗಳು ಹಾಜರಾಗಿದ್ದರು.'

'ಪರೀಕ್ಷೆ ಬರೆಯುತ್ತಿದ್ದ ಸಂದರ್ಭದಲ್ಲೇ ಮೇಲ್ವಿಚಾರಕರು ಪರಿಶೀಲನೆ ನಡೆಸಿದ್ದರು. ಅವಾಗಲೇ ಆರೋಪಿಗಳ ಕೃತ್ಯ ಬಯಲಾಯಿತು. ಸ್ಥಳದಲ್ಲಿದ್ದ ಸಿಬ್ಬಂದಿ ಆರೋಪಿಗಳನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದರು' ಎಂದೂ ಮೂಲಗಳು ತಿಳಿಸಿವೆ.

ಇತ್ತೀಚೆಗಷ್ಟೇ ಪೊಲೀಸ್ ಕಾನ್‌ಸ್ಟೆಬಲ್ ಪರೀಕ್ಷೆಯಲ್ಲೂ ನಕಲಿ ಅಭ್ಯರ್ಥಿಗಳು ಸಿಕ್ಕಿಬಿದ್ದಿದ್ದರು. ಅವರೆಲ್ಲ ಸದ್ಯ ಜೈಲಿನಲ್ಲಿದ್ದಾರೆ.

ಅಕ್ರಮವಾಗಿ ಕುಕ್ಕರ್ ಶೇಖರಣೆ ತರಾತುರಿಯಲ್ಲಿ ವಿತರಣೆ



ಅಕ್ರಮವಾಗಿ ಶೇಖರಣೆ ಮಾಡಿದ ಕುಕ್ಕರ್ ಮತ್ತು ಹಾಟ್ ಬಾಕ್ಸ್

ಕೆ.ಆರ್.ಪುರ: ಗ್ರಾಮ ಪಂಚಾಯಿತಿ ಅವ್ಯವಹಾರಗಳ ಬಗ್ಗೆ ಲೋಕಾಯುಕ್ತ ಅಧಿಕಾರಿಗಳು ತನಿಖೆಗೆ ಬರುತ್ತಾರೆ ಎಂದು ಗೊತ್ತಾದ ಕೂಡಲೇ ಕುಕ್ಕರ್, ಹಾಟ್ ಬಾಕ್ಸ್‌ಗಳನ್ನು ತರಾತುರಿಯಲ್ಲಿ ವಿತರಿಸಿರುವ ಘಟನೆ ಕಣ್ಣೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಬಂಡೆ ಹೊಸೂರಿನಲ್ಲಿ ಜರುಗಿದೆ.

2018-19ನೇ ಸಾಲಿನಲ್ಲಿ ಶೇ 24 ಅನುದಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಿಟ್ಟ ಕುಕ್ಕರ್ ಮತ್ತು ಹಾಟ್ ಬಾಕ್ಸ್‌ಗಳನ್ನು ಕಣ್ಣೂರು ಗ್ರಾಮ ಪಂಚಾಯಿತಿಯು ವಿತರಣೆ ಮಾಡಿರಲಿಲ್ಲ. ಅವುಗಳನ್ನು ಬಂಡೆ ಹೊಸೂರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಅಕ್ರಮವಾಗಿ ಶೇಖರಣೆ ಮಾಡಲಾಗಿತ್ತು. ಈ ಬಗ್ಗೆ ಗ್ರಾಮ ಪಂಚಾಯಿತಿ ಸದಸ್ಯ ಮಧು ಅವರು ಭ್ರಷ್ಟಾಚಾರ ನಿಗ್ರಹ ದಳ, ಲೋಕಾಯುಕ್ತ ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರಿಗೆ ದೂರು ನೀಡಿದ್ದರು.

'ದೂರಿನ ಅನ್ವಯ ಲೋಕಾಯುಕ್ತ ಅಧಿಕಾರಿಗಳು ತನಿಖೆ ಮುಂದಾಗಿದ್ದರು. ಇದನ್ನು ತಿಳಿದ ಗ್ರಾಮ ಪಂಚಾಯಿತಿಯ ಕೆಲವರು ಈ ಕುಕ್ಕರ್‌ಗಳನ್ನು ತಮಗೆ ಬೇಕಾದವರಿಗೆ ಮಾತ್ರ ವಿತರಿಸಿದ್ದಾರೆ. ಬಡವರು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಸಾಮಗ್ರಿಗಳನ್ನು ಅನುಮತಿ ಪಡೆಯದೆ ಅನ್ಯರಿಗೆ ಹಂಚಿದ್ದಾರೆ' ಎಂದು ಮಧು ದೂರಿದರು.

'ಕ್ಷೇತ್ರ ಶಿಕ್ಷಣಾಧಿಕಾರಿಯವರ ಅನುಮತಿ ಪಡೆಯದೆ ಶಾಲಾ ಕೊಠಡಿಯಲ್ಲಿದ್ದ ವಸ್ತುಗಳನ್ನು ತೆಗೆದುಕೊಳ್ಳುವ ಮೂಲಕ ಮತ್ತೊಂದು ಅಪರಾಧ ಮಾಡಿದ್ದಾರೆ. ಈ ವಿಚಾರವನ್ನು ಲೋಕಾಯುಕ್ತರ ಗಮನಕ್ಕೆ ತರಲಾಗಿದೆ. ಪಂಚಾಯಿತಿ ವತಿಯಿಂದ ಬಾಗಲೂರು ಠಾಣೆಯಲ್ಲಿ ದೂರು ನೀಡಲಾಗಿದೆ' ಎಂದು ತಿಳಿಸಿದರು.

ಕೋವಿಡ್: 50 ಸಾವಿರ ದಾಟಿದ ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಸತತ ಮೂರನೇ ದಿನ ಕೂಡ ಆರು ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗಿದ್ದು, 24 ಗಂಟೆಗಳ ಅವಧಿಯಲ್ಲಿ 6,570 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 53,395ಕ್ಕೆ ತಲುಪಿದೆ.

ಕಳೆದ ತಿಂಗಳು ರಾಜ್ಯದಲ್ಲಿ ಈ ವೇಳೆ ಕೇವಲ 6,815 ಸಕ್ರಿಯ ಪ್ರಕರಣಗಳಿದ್ದವು. ಬಳಿಕ ಹೊಸ ಪ್ರಕರಣಗಳು ಏರುಗತಿ ಪಡೆದುಕೊಂಡಿದ್ದು, ಈಗ ಕೇವಲ ಮೂರು ದಿನಗಳ ಅವಧಿಯಲ್ಲಿಯೇ 19,941 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ರಾಜ್ಯದ 8 ಜಿಲ್ಲೆಗಳಲ್ಲಿ ಮೂರಂಕಿ ತಲುಪಿದೆ. ಬೆಂಗಳೂರಿನಲ್ಲಿ 4,422 ಮಂದಿ ಸೋಂಕಿತರಾಗಿದ್ದು, ಒಟ್ಟು ಸೋಂಕಿತರ ಸಂಖ್ಯೆ 4.64 ಲಕ್ಷ ದಾಟಿದೆ. ಕಲಬುರ್ಗಿ (240), ಮೈಸೂರು (216), ತುಮಕೂರು (183) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ.

ಸದ್ಯ ಸೋಂಕು ದೃಢ ಪ್ರಮಾಣ ಶೇ 6.04ಕ್ಕೆ ಏರಿಕೆಯಾಗಿದೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 10.40 ಲಕ್ಷ ದಾಟಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 36 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರಿನಲ್ಲಿ 22 ಮಂದಿ, ಕಲಬುರ್ಗಿಯಲ್ಲಿ 3 ಮಂದಿ, ಮಂಡ್ಯ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ ಇಬ್ಬರು, ವಿಜಯಪುರ, ತುಮಕೂರು, ಮೈಸೂರು, ಕೋಲಾರ, ಧಾರವಾಡ, ಬೀದರ್ ಹಾಗೂ ಬೆಳಗಾವಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಈವರೆಗೆ ಮೃತಪಟ್ಟವರ ಸಂಖ್ಯೆ 12,767ಕ್ಕೆ ತಲುಪಿದೆ.

ತೀವ್ರ ನಿಗಾ ಘಟಕಕ್ಕೆ ದಾಖಲಾಗುವವರ ಸಂಖ್ಯೆ ಕೂಡ ಹೆಚ್ಚಳವಾಗಿದೆ. ಸದ್ಯ 357 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಒಂದು ದಿನದ ಅವಧಿಯಲ್ಲಿ 1.08 ಲಕ್ಷ ಮಂದಿಗೆ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಕೊರೊನಾ ಸೋಂಕಿತರಲ್ಲಿ 2,393 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.73 ಲಕ್ಷ ದಾಟಿದೆ.

ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಘಟನೆ ● ಮೊಬೈಲ್, ಚಿನ್ನಾಭರಣ, ನಗದು ಕಳವು

ಮನೆಗೆ ನುಗ್ಗಿ ಇಬ್ಬರ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿ ವೃದ್ಧೆ ಸೇರಿ ಇಬ್ಬರನ್ನು ಹತ್ಯೆ ಮಾಡಿರುವ ದುಷ್ಕರ್ಮಿ, ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ನಗದು ಸಮೇತ ಪರಾರಿಯಾಗಿದ್ದಾನೆ.

'ಮಮತಾ ಬಸು (75) ಹಾಗೂ ಅವರ ಮಗನ ಸ್ನೇಹಿತ ದೇವಬ್ರತ್ (41) ಕೊಲೆಯಾದವರು. ಮನೆಯ ಪ್ರತ್ಯೇಕ ಕೊಠಡಿಯಲ್ಲಿ ಮೃತದೇಹಗಳು ಬಿದ್ದಿದ್ದವು. ಸ್ಥಳಕ್ಕೆ ಹೋಗಿ ಮರಣೋತ್ತರ ಪರೀಕ್ಷೆಗಾಗಿ ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮನೆಯಲ್ಲಿ ಕಳ್ಳತನಕ್ಕೆ ಬಂದಿದ್ದ ಆರೋಪಿ, ಇಬ್ಬರನ್ನೂ ಹತ್ಯೆ ಮಾಡಿ ಹೋಗಿರುವ ಅನುಮಾನವಿದೆ. ಯಾರಾದರೂ ಪರಿಚಯಸ್ಥರು ಕೃತ್ಯ ಎಸಗಿರಬಹುದೆಂಬ ಶಂಕೆಯೂ ಇದೆ. ಎರಡೂ ಆಯಾಮದಲ್ಲೂ ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದರು.



ಮಮತಾ ಬಸು



ದೇವಬ್ರತ್

ಪ್ರತ್ಯೇಕವಾಗಿ ನೆಲೆಸಿದ್ದ ವೃದ್ಧೆ: 'ಪಶ್ಚಿಮ ಬಂಗಾಳದ ಮಮತಾ ಬಸು ಹಾಗೂ ಅವರ ಮಗ ದೇವ್ ಬಸು ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಜೆ.ಪಿ.ನಗರದ ಸಂತೃಪ್ತಿ ನಗರದಲ್ಲಿರುವ ಸ್ವಂತ ಮನೆಯಲ್ಲಿ ವಾಸವಿದ್ದರು. 2018ರಲ್ಲಿ ಮಗನಿಗೆ ಮದುವೆಯಾಗಿತ್ತು. ಅತ್ತೆ– ಸೊಸೆ ನಡುವೆ ಜಗಳ ಶುರುವಾಗಿತ್ತು. ಪತ್ನಿ ಸಮೇತ ಮನೆ ತೊರೆದಿದ್ದ ಮಗ ದೇವ್, ಪ್ರತ್ಯೇಕವಾಗಿ ವಾಸವಿದ್ದರು. ಮಮತಾ ಒಬ್ಬರೇ ಮನೆಯಲ್ಲಿದ್ದರು' ಎಂದು ಪೊಲೀಸರು ಹೇಳಿದರು.

'ನಗರದ ಕಾಲೇಜೊಂದರಲ್ಲಿ ಉಪನ್ಯಾಸಕರಾಗಿರುವ ಮಗ, ಆಗಾಗ ತಾಯಿ ಮನೆಗೆ ಬಂದು ಹೋಗುತ್ತಿದ್ದರು. ಮಗನ ಸ್ನೇಹಿತನಾದ ಪಶ್ಚಿಮ ಬಂಗಾಳದ ದೇವಬ್ರತ್ ಅವರಿಗೆ ನಗರದ ಕಾಲೇಜೊಂದರಲ್ಲಿ ಉಪನ್ಯಾಸಕ ಕೆಲಸ ಸಿಕ್ಕಿತ್ತು. ಬೆಂಗಳೂರಿಗೆ 20 ದಿನಗಳ ಹಿಂದಷ್ಟೇ ಬಂದಿದ್ದ ಅವರು, ಸ್ನೇಹಿತನ ತಾಯಿ ಮಮತಾ ಮನೆಯಲ್ಲಿ ಉಳಿದುಕೊಂಡಿದ್ದರು.'

ಊಟ ಮಾಡಿಕೊಂಡು ಹೋಗಿದ್ದ ಮಗ: 'ತಾಯಿ ಮನೆಗೆ ಬುಧವಾರ ಸಂಜೆ ಬಂದಿದ್ದ ಮಗ, ರಾತ್ರಿ 9ರವರೆಗೂ ಇದ್ದರು. ತಾಯಿ, ಸ್ನೇಹಿತನ ಜೊತೆ ಊಟ ಮಾಡಿದ್ದರು. ನಂತರ, ಮನೆಗೆ ವಾಪಸು ಹೋಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಮಮತಾ ಹಾಗೂ ದೇವಬ್ರತ್ ಮನೆಯ ಪ್ರತ್ಯೇಕ ಕೊಠಡಿಯಲ್ಲಿ ಮಲಗಿದ್ದರು. ತಡರಾತ್ರಿ ಬೈಕ್‌ನಲ್ಲಿ ಮನೆ ಬಳಿ ಬಂದಿದ್ದ ವ್ಯಕ್ತಿಯೊಬ್ಬ, ಮನೆಯೊಳಗೆ ನುಗ್ಗಿದ್ದ. ನಂತರ ಇಬ್ಬರ ಕೊಠಡಿಗೂ ಹೋಗಿ ಚಾಕುವಿನಿಂದ ಇರಿದು ಹತ್ಯೆ ಮಾಡಿರುವ ಮಾಹಿತಿ ಇದೆ' ಎಂದೂ ಹೇಳಿದರು.

'ಹತ್ಯೆ ನಂತರ ಮನೆಯಲ್ಲೆಲ್ಲ ಓಡಾಡಿರುವ ಆರೋಪಿ, ಲ್ಯಾಪ್‌ಟಾಪ್, ಮೊಬೈಲ್, ಚಿನ್ನಾಭರಣ ಹಾಗೂ ಎಟಿಎಂ ಕಾರ್ಡ್ ದೋಚಿ ಪರಾರಿಯಾಗಿದ್ದಾನೆ. ಗುರುವಾರ ಬೆಳಿಗ್ಗೆ ಕೆಲಸಕ್ಕೆ ಬಂದಿದ್ದ ಮಹಿಳೆ ಮೃತದೇಹ ಕಂಡು ಚೀರಿದ್ದರು' ಎಂದೂ ತಿಳಿಸಿದರು.

'ಕೊಲೆ ಸಂಬಂಧ ಮಗ ದೇವ್ ದೂರು ನೀಡಿದ್ದಾರೆ. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದೂ ಪೊಲೀಸ್ ಹೇಳಿದರು.

ಮಹಿಳಾ ಟೆಕಿಯಿಂದ ₹ 10 ಲಕ್ಷ ಕಿತ್ತ ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈವಾಹಿಕ ಜಾಲತಾಣದಲ್ಲಿ ಪರಿಚಯವಾಗಿ ಮದುವೆಯಾಗುವುದಾಗಿ ಹೇಳಿ ನಂಬಿಸಿದ್ದ ಆದಿಕರ್ಶ್ ಶರ್ಮಾ, ₹ 10 ಲಕ್ಷ ಪಡೆದು ಪರಾರಿಯಾಗಿದ್ದಾನೆ' ಎಂದು ಮಹಿಳಾ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರು (ಟೆಕಿ) ಕಾಡುಗೋಡಿ ಠಾಣೆಗೆ ದೂರು ನೀಡಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಯುವತಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ಜಾಲತಾಣದ ಖಾತೆಯಲ್ಲಿರುವ ಮಾಹಿತಿ ಆಧರಿಸಿ ಆರೋಪಿ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: '2020ರ ಫೆಬ್ರುವರಿಯಲ್ಲಿ ಯುವತಿ, ವೈವಾಹಿಕ ಜಾಲತಾಣವೊಂದರಲ್ಲಿ ಖಾತೆ ತೆರೆದಿದ್ದರು. ರಿಕ್ವೆಸ್ಟ್ ಕಳುಹಿಸಿದ್ದ ಆರೋಪಿ, ಮದುವೆಯಾಗುವುದಾಗಿ ಹೇಳಿದ್ದ. ಅದಕ್ಕೆ ಯುವತಿಯೂ ಒಪ್ಪಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದು ಮೂಲಗಳು ಹೇಳಿವೆ,

'ಬೆಂಗಳೂರಿನಲ್ಲಿ ಉದ್ಯಮ ಆರಂಭಿಸುತ್ತಿರುವುದಾಗಿ ಹೇಳಿದ್ದ ಆರೋಪಿ, ಯುವತಿಯಿಂದ ₹ 10 ಲಕ್ಷ ಪಡೆದಿದ್ದ. ಅದಾದ ಕೆಲ ದಿನಗಳ ನಂತರ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಆರೋಪಿ ಪರಾರಿಯಾಗಿರುವುದಾಗಿ ಯುವತಿ ಹೇಳಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಎದುರಾಳಿ ಹತ್ಯೆಗೆ ಸಂಚು: ರೌಡಿ ಗ್ಯಾಂಗ್ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎದುರಾಳಿಯನ್ನು ಹತ್ಯೆ ಮಾಡಿ ಸುಲಿಗೆ ಮಾಡಲು ಸಂಚು ರೂಪಿಸಿದ್ದ ಆರೋಪದಡಿ ರೌಡಿ ರೋಹಿತ್ ಅಲಿಯಾಸ್ ಕಾಡುಬಿಸನಹಳ್ಳಿ ರೋಹಿತ್‌ಗೌಡ (29) ಹಾಗೂ ಆತನ ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕಾಡುಬಿಸನಹಳ್ಳಿಯ ರೌಡಿ ಸೋಮನನ್ನು ಹತ್ಯೆ ಮಾಡಲು ಆರೋಪಿಗಳು ಸಂಚು ರೂಪಿಸಿದ್ದರು. ಬಂಧಿತ ಆರೋಪಿಗಳಿಂದ ಪಿಸ್ತೂಲ್, ಜೀವಂತ ಗುಂಡು, 10 ಮಚ್ಚುಗಳು ಹಾಗೂ 2 ಕಾರುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಎರಡು ವರ್ಷಗಳ ದ್ವೇಷ: 'ರೌಡಿ ರೋಹಿತ್‌ನ ಅಣ್ಣನನ್ನು 2018ರಲ್ಲಿ ಕೊಲೆ ಮಾಡಲಾಗಿತ್ತು. ಇದರಲ್ಲಿ ರೌಡಿ ಸೋಮನ ಹೆಸರು ಕೇಳಿಬಂದಿತ್ತು. ಮರು ವರ್ಷವೇ ಸೋಮನ ತಮ್ಮ ಮಂಜನ ಕೊಲೆಯಾಗಿತ್ತು. ಅದರಲ್ಲಿ ರೋಹಿತ್ ಹೆಸರು ಕೇಳಿಬಂದಿತ್ತು' ಎಂದು ಪೊಲೀಸರು ತಿಳಿಸಿದರು.



ಪೊಲೀಸರು ಬಂಧಿಸಿರುವ ರೌಡಿ ಗ್ಯಾಂಗ್

'ಸೋಮ ಹಾಗೂ ರೋಹಿತ್ ನಡುವೆ ಎರಡು ವರ್ಷಗಳಿಂದ ಗಲಾಟೆ ನಡೆಯುತ್ತಿತ್ತು. ಒಬ್ಬರಿಗೊಬ್ಬರು ಹತ್ಯೆ ಮಾಡಲು ತೆರೆಮರೆಯಲ್ಲಿ ಸಂಚು ರೂಪಿಸುತ್ತಲೇ ಇದ್ದರು' ಎಂದರು.

ಗ್ಯಾಂಗ್ ಕಟ್ಟಿದ್ದ ರೋಹಿತ್: 'ರೌಡಿ ಅಮರನಾಥ್, ಮುನಿರಾಜು, ವಿಘ್ನೇಶ್, ಕಾಂತರಾಜು, ಹರೀಶ್, ಪ್ರಶಾಂತ್ ಕುಮಾರ್, ಜಮೀರ್, ಚಂದನ್, ಗಂಗರಾಜು, ಮಂಜುನಾಥ್‌ನನ್ನು ಸೇರಿಸಿಕೊಂಡು ರೋಹಿತ್ ಗ್ಯಾಂಗ್ ಕಟ್ಟಿದ್ದ' ಎಂದೂ ಪೊಲೀಸರು ಹೇಳಿದರು.

'ಗುರುವಾರ ಬೆಳಿಗ್ಗೆ ಬಾಗಲಗುಂಟೆ ಠಾಣೆ ವ್ಯಾಪ್ತಿಯ ಮಲ್ಲಸಂದ್ರದಿಂದ ರವೀಂದ್ರನಗರದತ್ತ ಹೋಗುವ ರಸ್ತೆಯಲ್ಲಿ ಆರೋಪಿಗಳು ನಿಂತಿದ್ದರು. ಅದೇ ರಸ್ತೆಯಲ್ಲೇ ಸೋಮ ಬರುವುದನ್ನು ಕಾಯುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು' ಎಂದೂ ತಿಳಿಸಿದರು.

ಪಿಎಸ್‌ಐ ಹತ್ಯೆ ಮಾಡಿದ್ದ ರೌಡಿ

'ಮಹದೇವಪುರ ಠಾಣೆ ರೌಡಿಪಟ್ಟಿಯಲ್ಲಿ ಅಮರನಾಥ್ ಹೆಸರಿದೆ. ತಮಿಳುನಾಡಿನ ಹೊಸೂರು ಠಾಣೆ ಪಿಎಸ್‌ಐ ಹತ್ಯೆಯಲ್ಲೂ ಈತ ಆರೋಪಿ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ಹೊಸೂರಿನಲ್ಲಿ ಸರಗಳವು ಮಾಡಿದ್ದ ಅಮರ್‌ನನ್ನು ಬಂಧಿಸಲು ಪಿಎಸ್‌ಐ ಕಾರ್ಯಾಚರಣೆ ನಡೆಸಿದ್ದರು. ಅದೇ ಸಂದರ್ಭದಲ್ಲೇ ಮಾರಕಾಸ್ತ್ರಗಳಿಂದ ಹೊಡೆದು ಅಮರ್ ಹಾಗೂ ಆತನ ಸಹಚರರು, ಪಿಎಸ್‌ಐ ಅವರನ್ನೇ ಕೊಂದು ಪರಾರಿಯಾಗಿದ್ದರು. ರೌಡಿ ಅಮರ್‌ಗಾಗಿ ಹೊಸೂರು ಪೊಲೀಸರು ಹುಡುಕಾಡುತ್ತಿದ್ದರು. ಸದ್ಯ ಬಂಧಿಸಿರುವ ಉಳಿದ ಆರೋಪಿಗಳೆಲ್ಲರೂ ಅಪರಾಧ ಹಿನ್ನೆಲೆಯುಳ್ಳವರು' ಎಂದೂ ತಿಳಿಸಿದರು.

ಕಾಗ್ನಿಜೆಂಟ್‌ನಿಂದ ಕಂಪ್ಯೂಟರ್ ಕಾಲೇಜುಗಳಿಗೆ ರವಾನೆ

ಬೆಂಗಳೂರು: 'ಹೆಲ್ಪ್ ಎಜುಕೇಟ್' ಕಾರ್ಯಕ್ರಮದಡಿಯಲ್ಲಿ ಕಾಗ್ನಿಜೆಂಟ್ ಕಂಪನಿ ನೀಡಿರುವ ಡಿಬಾಂಡೆಡ್ ಕಂಪ್ಯೂಟರ್‌ಗಳನ್ನು ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳು ವಿವಿಧ ಕಾಲೇಜುಗಳಿಗೆ ಗುರುವಾರ ಕಳುಹಿಸಿಕೊಟ್ಟರು.

ಕಂಪ್ಯೂಟರ್‌ಗಳನ್ನು ಹೊತ್ತ ವಾಹನಗಳಿಗೆ ಶೇಷಾದ್ರಿ ರಸ್ತೆಯಲ್ಲಿರುವ ಕಾಲೇಜು ಶಿಕ್ಷಣ ಇಲಾಖೆಯ ಕಚೇರಿ ಮುಂಭಾಗದಲ್ಲಿ ಇಲಾಖೆಯ ಆಯುಕ್ತ ಪ್ರದೀಪ್ ಹಸಿರು ನಿಶಾನೆ ತೋರಿಸಿದರು.

'ಕಾಗ್ನಿಜೆಂಟ್ ಕಂಪನಿ ಡಿಬಾಂಡೆಡ್ ಕಂಪ್ಯೂಟರ್‌ಗಳನ್ನು ಇಲಾಖೆಗೆ ನೀಡಿದೆ. ಇದಕ್ಕೆ ಅಗತ್ಯವಾದ ಸಾಫ್ಟ್‌ವೇರ್ ಅನ್ನು ರೋಟರಿ ಕ್ಲಬ್ ಅಪ್‌ಡೇಟ್ ಮಾಡಿಕೊಡುತ್ತಿದೆ. ಈ ಕಂಪ್ಯೂಟರ್‌ಗಳನ್ನು ಸರ್ಕಾರಿ ಪದವಿ ಕಾಲೇಜು, ಎಂಜಿನಿಯರಿಂಗ್ ಕಾಲೇಜು, ತಾಂತ್ರಿಕ ಶಿಕ್ಷಣ ಇಲಾಖೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ' ಎಂದು ಪ್ರದೀಪ್ ಹೇಳಿದರು.

'ಪದವಿ, ಎಂಜಿನಿಯರಿಂಗ್, ತಾಂತ್ರಿಕ ಕಾಲೇಜುಗಳಿಗೆ ಒಟ್ಟು 30 ಸಾವಿರ ಕಂಪ್ಯೂಟರ್‌ಗಳು ಬೇಕು. ಈಗ ಕಾಗ್ನಿಜೆಂಟ್ ಕಂಪನಿ 12,500 ಕಂಪ್ಯೂಟರ್‌ಗಳನ್ನು ನೀಡುತ್ತಿದೆ. ಮತ್ತೆ 8 ಸಾವಿರ ಕಂಪ್ಯೂಟರ್‌ಗಳನ್ನು ನೀಡುವುದಾಗಿ ತಿಳಿಸಿದೆ. ಉಳಿದ, 10 ಸಾವಿರ ಕಂಪ್ಯೂಟರ್‌ಗಳನ್ನು ಬೇರೆ ಬೇರೆ ಕಂಪನಿಗಳಿಂದ ಪಡೆಯಲಾಗುವುದು' ಎಂದರು.

'ವಿದ್ಯಾರ್ಥಿಗಳಿಗೆ ನೆರವಾಗುವ ಹಾಗೂ ಅಧ್ಯಾಪಕರಿಗೆ ತರಬೇತಿ ನೀಡಲು ಹಾಗೂ ಕಾಲೇಜುಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲು ಹೆಲ್ಪ್ ಎಜುಕೇಟ್ ಹೆಸರಿನಲ್ಲಿ ಈ ಕಾರ್ಯಕ್ರಮ ಜಾರಿಗೆ ತಂದಿದ್ದೇವೆ' ಎಂದೂ ಅವರು ಮಾಹಿತಿ ನೀಡಿದರು. ರೋಟರಿ ಕ್ಲಬ್ ಮುಖ್ಯಸ್ಥ ನಾಗೇಂದ್ರ ಪ್ರಸಾದ್, ಕಾಗ್ನಿಜೆಂಟ್ ಕಂಪನಿಯ ಸೆಲ್ವಿ ಇದ್ದರು.

ಸ್ಕೈ ಬಾರ್ ಹಲ್ಲೆ ಪ್ರಕರಣ: ಆದೇಶ ಪ್ರಕಟಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2014ರ ಜುಲೈ 1ರಂದು ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಜನ್ಮದಿನದ ಆಚರಣೆ ವೇಳೆ ನಗರದ ವಿಠಲ ಮಲ್ಯ ರಸ್ತೆಯ ಸ್ಕೈ ಬಾರ್‌ನಲ್ಲಿ ನಡೆದಿದ್ದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದ ಅಂತಿಮ ಆದೇಶ ಪ್ರಕಟಣೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಏಪ್ರಿಲ್ 15ಕ್ಕೆ ಮುಂದೂಡಿದೆ.

ಆಗ ಶಾಸಕರಾಗಿದ್ದ ವಿಜಯಾನಂದ ಕಾಶಪ್ಪನವರ, ಅವರ ಆಪ್ತ ಸೋಮಶೇಖರಗೌಡ ಸೇರಿದಂತೆ ಕೆಲವರು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್‌ಗಳಾದ ಕಿರಣ್ ಮತ್ತು ಪ್ರಶಾಂತ್ ನಾಯಕ್ ಮೇಲೆ ಹಲ್ಲೆ ನಡೆಸಿದ ಆರೋಪವಿದೆ. ಸಿಸಿಬಿ ಪೊಲೀಸರು ಪ್ರಕರಣದ ತನಿಖೆ ನಡೆಸಿ, ಆರೋಪಪಟ್ಟಿ ಸಲ್ಲಿಸಿದ್ದರು. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಗುರುವಾರ ಆದೇಶ ಪ್ರಕಟಣೆ ನಿಗದಿ ಮಾಡಿತ್ತು.

ಆದರೆ, ವಿಜಯಾನಂದ ಗೈರಾಗಲು ಅನುಮತಿ ಕೋರಿ ಅವರ ವಕೀಲರು ಅರ್ಜಿ ಸಲ್ಲಿಸಿದ್ದರು. ಮತ್ತೊಬ್ಬ ಆರೋಪಿ ಸೋಮಶೇಖರ ಗೌಡ ಕೂಡ ವಿಚಾರಣೆಗೆ ಹಾಜರಾಗಿರಲಿಲ್ಲ. ಸೋಮಶೇಖರ ಗೌಡಗೆ ವಾರೆಂಟ್ ಜಾರಿಗೆ ಆದೇಶಿಸಿದ ನ್ಯಾಯಾಧೀಶರು, ಪ್ರಕರಣದ ಅಂತಿಮ ಆದೇಶ ಪ್ರಕಟಣೆಯನ್ನು ಏ.15ಕ್ಕೆ ಮುಂದೂಡಿದರು.



ಪೀಣ್ಯ ದಾಸರಹಳ್ಳಿ ಸಮೀಪ ಮಲ್ಲಸಂದ್ರದ ಶಾಂತಿ ಲೇಔಟ್‌ನಲ್ಲಿ ₹98 ಲಕ್ಷ ವೆಚ್ಚದ ರಸ್ತೆ, ಚರಂಡಿ ಕಾಮಗಾರಿ ಹಾಗೂ ಸೆಲೆಕ್ಷನ್ ಕಾರ್ನರ್ ಹತ್ತಿರ ₹12 ಲಕ್ಷ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಕಾಮಗಾರಿಗೆ ಶಾಸಕ ಆರ್ .ಮಂಜುನಾಥ್ ಚಾಲನೆ ನೀಡಿದರು. ಜೆಡಿಎಸ್ ಮಲ್ಲಸಂದ್ರ ವಾರ್ಡ್ ಅಧ್ಯಕ್ಷ ಗೋಪಾಲ್, ಮುಖಂಡರಾದ ಎಂ .ಸಿದ್ದರಾಜು , ಲಕ್ಷ್ಮಿಪತಿ, ಶೇಖರ್, ಅಶೋಕ್, ಪಾಪಣ್ಣ ಮುಂತಾದವರಿದ್ದರು.

ಅತ್ಯಾಚಾರವೆಸಗಿ ಪರಾರಿಯಾಗುತ್ತಿದ್ದ ಆರೋಪಿ ಬಂಧನ

'ಇನ್‌ಸ್ಟಾಗ್ರಾಮ್' ಪರಿಚಯ; 10 ಯುವತಿಯರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್‌ಸ್ಟಾಗ್ರಾಮ್' ಸಾಮಾಜಿಕ ಜಾಲತಾಣದಲ್ಲಿ ಯುವತಿಯರನ್ನು ಪರಿಚಯಿಸಿಕೊಂಡು ಸಲುಗೆ ಬೆಳೆಸಿ ಅತ್ಯಾಚಾರ ಎಸಗಿ ಪರಾರಿಯಾಗುತ್ತಿದ್ದ ಆರೋಪಿ ಹರ್ಷ ಅಲಿಯಾಸ್ ದಿವಾಕರ್‌ನನ್ನು (31) ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತುರುವೇಕೆರೆ ನಿವಾಸಿ ಹರ್ಷ, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಆತನ ವಿರುದ್ಧ ಇತ್ತೀಚೆಗಷ್ಟೇ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅದನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



ಹರ್ಷ

'ಇನ್‌ಸ್ಟಾಗ್ರಾಮ್‌ನಲ್ಲಿ ಖಾತೆ ತೆರೆದಿದ್ದ ಆರೋಪಿ, ಯುವತಿಯರಿಗೆ ರಿಕ್ವೆಸ್ಟ್ ಕಳುಹಿಸುತ್ತಿದ್ದ. ಚಾಟಿಂಗ್ ಮಾಡಲಾರಂಭಿಸುತ್ತಿದ್ದ. 'ಕೆಎಎಸ್ ಹಾಗೂ ಐಎಎಸ್ ಪರೀಕ್ಷೆಗೆ ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಸದ್ಯದಲ್ಲೇ ಪರೀಕ್ಷೆ ತೇರ್ಗಡೆಯಾಗಿ ಅಧಿಕಾರಿ ಆಗುತ್ತೇನೆ' ಎಂದು ಆರೋಪಿ ಯುವತಿಯರಿಗೆ ಹೇಳುತ್ತಿದ್ದ.'

ಅಪರಾಧ ಸುದ್ದಿ

'ಆರೋಪಿ ಮಾತು ನಂಬಿದ್ದ ಯುವತಿಯರು, ಆತನ ಜೊತೆ ಮಾತನಾಡಲಾರಂಭಿಸುತ್ತಿದ್ದರು. ದಿನ ಕಳೆದಂತೆ ಆರೋಪಿ, ಪ್ರೀತಿಸುವುದಾಗಿ ಹೇಳಿ ಯುವತಿಯರ ಜೊತೆ ಸಲುಗೆ ಬೆಳೆಸುತ್ತಿದ್ದ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಭೇಟಿಯಾಗಬೇಕೆಂದು ಹೇಳಿ ಯುವತಿಯರನ್ನು ತನ್ನ ಬಳಿ ಕರೆಸಿಕೊಳ್ಳುತ್ತಿದ್ದ ಆರೋಪಿ, ಅತ್ಯಾಚಾರ ಎಸಗುತ್ತಿದ್ದ. ಅದಾದ ನಂತರ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಪರಾರಿಯಾಗುತ್ತಿದ್ದ. ಇತ್ತೀಚೆಗೆ ಬಾಲಕಿಯ ಮೇಲೆ ಆರೋಪಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು' ಎಂದೂ ಹೇಳಿವೆ.

'ಆರೋಪಿ ಇದುವರೆಗೂ 10 ಯುವತಿಯರಿಗೆ ವಂಚಿಸಿರುವ ಮಾಹಿತಿ ಇದೆ. ಎಲ್ಲರಿಂದಲೂ ಹೇಳಿಕೆ ಪಡೆಯಲು ಪ್ರಯತ್ನಿಸಲಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

ಉದ್ಯೋಗ ಖಾತ್ರಿ: ಸ್ಫೂರ್ತಿ ತುಂಬಿದ ವೃದ್ಧ ದಂಪತಿ

ಪ್ರಜಾವಾಣಿ ವಾರ್ತೆ

ನರೇಗಲ್: ಸಮೀಪದ ಅಬ್ಬಿಗೇರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ವೃದ್ಧ ದಂಪತಿ ಯುವಜನರೇ ನಾಚುವಂತೆ ಬದು ನಿರ್ಮಾಣ ಕಾಮಗಾರಿಯಲ್ಲಿ ದುಡಿದು ಎಲ್ಲರಿಗೆ ಸ್ಫೂರ್ತಿಯಾಗಿದ್ದಾರೆ.

ಅಬ್ಬಿಗೇರಿ ಗ್ರಾಮದ 69ರ ಕಂಠಯ್ಯ ಮಠಪತಿ ಹಾಗೂ 65ರ ಪಾರವ್ವ ಕಂಠಯ್ಯ ಮಠಪತಿ ಹೊಲವೊಂದರಲ್ಲಿ ನಡೆದಿರುವ 'ದುಡಿಯೋಣ ಬಾ' ಕಾಮಗಾರಿಯಲ್ಲಿ ದುಡಿಯುತ್ತಿರುವುದನ್ನು ನೋಡಿದ ಯುವಜನರೂ ಕೆಲಸಕ್ಕೆ ಹಾಜರಾಗಿದ್ದಾರೆ.

'ಬೆವರು ಸುರಿಸಿ ದುಡಿದರೆ ಭೂಮಿ ತಾಯಿ ನಮ್ಮನ್ನು ಚೆನ್ನಾಗಿ ಇಟ್ಟಿರುತ್ತಾಳೆ. ದುಡಿಮೆ ತಕ್ಕಂತೆ ಊಟ ಹೋಗುತ್ತದೆ, ಯಾವುದೇ ರೋಗಗಳು ಬರುವುದಿಲ್ಲ' ಎಂದು ಮಠಪತಿ ದಂಪತಿ 'ಪ್ರಜಾವಾಣಿ'ಗೆ ತಿಳಿಸಿದರು.

'ವಯಸ್ಸಿನಲ್ಲಿ ಹಿರಿಯರಾದರೂ ಕೆಲಸದಲ್ಲಿ ಯುವಕರಂತೆ ದುಡಿಯುತ್ತಿರುವ ದಂಪತಿ ನಮ್ಮೂರಿನ ಜನರಿಗೆ ಮಾದರಿಯಾಗಿದ್ದಾರೆ. ಸದ್ಯ ಅಬ್ಬಿಗೇರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮೂರು ಸಾವಿರಕ್ಕೂ ಹೆಚ್ಚು ಕಾರ್ಮಿಕರೂ ಕೆಲಸಕ್ಕೆ ಬರುತ್ತಿದ್ದಾರೆ. ಅದರಲ್ಲಿ ನೂರಕ್ಕೂ ಹೆಚ್ಚು ಜನ ಹಿರಿಯ ನಾಗರಿಕರು ಇದ್ದಾರೆ' ಎಂದು ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಶಿವನಗೌಡ ಮೆಣಸಗಿ ತಿಳಿಸಿದರು.


ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಪರಿಶೀಲನೆ ನಡೆಸಿದ ಪೊಲೀಸ್ ಆಯುಕ್ತ ಕಮಲ್ ಪಂತ್


ನಗರದಲ್ಲಿ ಸಂಚರಿಸಿದ ಬಿಎಂಟಿಸಿ ಬಸ್‌ಗಳಿಗೆ ಭದ್ರತೆ ಒದಗಿಸಿದ್ದ ಪೊಲೀಸರು



ಪೊಲೀಸ್ ಬೆಂಗಾವಲಿನಲ್ಲಿ ಮೈಸೂರಿಗೆ ತೆರಳಿದ ಕೆಎಸ್‌ಆರ್‌ಟಿಸಿ ಐರಾವತ ಬಸ್

ಪ್ರಯಾಣಿಕರು ವಿರಳ: ಪ್ರಯಾಣ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರದ ಎರಡನೇ ದಿನವಾದ ಗುರುವಾರವೂ ಖಾಸಗಿ ಬಸ್‌ಗಳು ಕಾರ್ಯಾಚರಣೆ ಮಾಡಿದ್ದರಿಂದ ಪ್ರಯಾಣಿಕರ ಪರದಾಟ ಕಡಿಮೆಯಾಗಿತ್ತು. ಆದರೆ, ಕೆಎಸ್‌ಆರ್‌ಟಿಸಿ ದರ ಪಟ್ಟಿ ನೀಡಿದ್ದರೂ, ಅದನ್ನೂ ಲೆಕ್ಕಿಸದೆ ಪ್ರಯಾಣಿಕರಿಂದ ಹೆಚ್ಚಿನ ದರ ವಸೂಲಿ ಮಾಡಿದವು.

ಬುಧವಾರದಂತೆಯೇ ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣ ಕೆಂಪು ಬಸ್‌ಗಳಿಲ್ಲದೆ ಬಿಕೋ ಎನ್ನುತ್ತಿತ್ತು. ಖಾಸಗಿ ಬಸ್‌ಗಳು, ಆಟೋರಿಕ್ಷಾಗಳೇ ನಿಲ್ದಾಣವನ್ನು ಆವರಿಸಿಕೊಂಡಿದ್ದವು. ಆದರೆ, ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು. ನಿಲ್ದಾಣಕ್ಕೆ ಬರುವ ಪ್ರಯಾಣಿಕರನ್ನು ಅಡ್ಡಗಟ್ಟಿ ಯಾವ ಊರಿಗೆ ಎಂದು ಕೇಳಿ ಕರೆದೊಯ್ದು ತಮ್ಮ ವಾಹನಗಳಿಗೆ ಚಾಲಕರು ಕೂರಿಸಿಕೊಳ್ಳುತ್ತಿದ್ದರು.



ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಗುರುವಾರ ಬಸ್ ಇಲ್ಲದೇ ಮಹಿಳೆಯೊಬ್ಬರು ಪರದಾಟ ನಡೆಸಿದರು

ಪ್ರಯಾಣ ದರದ ಪಟ್ಟಿಯನ್ನು ಕೆಎಸ್‌ಆರ್‌ಟಿಸಿ ಕೊಟ್ಟಿತ್ತು. ಆದರೂ, ಅದಕ್ಕೂ ಮೀರಿ ₹50ರಿಂದ ₹100 ಹೆಚ್ಚಿನ ದರ ಪಡೆದುಕೊಳ್ಳುವುದು ಸಾಮಾನ್ಯವಾಗಿತ್ತು. 'ಮ್ಯಾಕ್ಸಿಕ್ಯಾಬ್‌ಗಳಿಗೆ ಕೆಎಸ್‌ಆರ್‌ಟಿಸಿಯ 'ಕರ್ನಾಟಕ ಸಾರಿಗೆ(ಕೆಂಪು)' ಬಸ್‌ಗಳ ದರ ಪಡೆಯಲು ಆಗುವುದಿಲ್ಲ. ಸೀಟಿನಲ್ಲಿ ಹಿಂದಕ್ಕೆ ವಾಲುವ ಅವಕಾಶ(ಪುಷ್ ಬ್ಯಾಕ್) ಇದೆ. ಹೀಗಾಗಿ, 'ರಾಜಹಂಸ' ಬಸ್‌ಗಳಲ್ಲಿನ ಪ್ರಯಾಣ ದರ ಪಡೆಯಲಾಗುವುದು' ಎಂದು ಚಾಲಕರು ಸಮಜಾಯಿಷಿ ನೀಡುತ್ತಿದ್ದರು.

'ರಾಜಹಂಸ' ಬಸ್‌ಗಳಲ್ಲಿ ಕುಳಿತುಕೊಳ್ಳಲು ಸ್ವಲ್ಪ ವಿಶಾಲವಾದ ಜಾಗ ಇರುತ್ತದೆ. ಆದರೆ, ಮ್ಯಾಕ್ಸಿಕ್ಯಾಬ್‌ಗಳಲ್ಲಿ ಪುಷ್ ಬ್ಯಾಕ್ ಸೀಟುಗಳಿದ್ದರೂ, ಇಕ್ಕಟ್ಟಿನಲ್ಲೇ ಕುಳಿತುಕೊಳ್ಳಬೇಕು. 'ಕರ್ನಾಟಕ ಸಾರಿಗೆ' ಬಸ್‌ಗಳಲ್ಲಿ ಕೂರುವಷ್ಟು ಅರಾಮದಾಯಕವಾಗಿಲ್ಲ. ಆದರೆ, ದುಪಟ್ಟು ಪ್ರಯಾಣ ದರ ನೀಡಬೇಕಾಗಿದೆ. ಖಾಸಗಿ ಬಸ್‌ಗಳಿಂದ ನಮಗೆ ಹೊರೆಯಾಗುತ್ತಿದೆ' ಎಂದು ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದರು.

ದರಪಟ್ಟಿ ಹಿಡಿದು ನಿಲ್ದಾಣದ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದರು. ಆದರೂ, ಅವರ ಮಾತಿಗೂ ಕಿವಿಗೊಡದೆ ನಿಲ್ದಾಣದಿಂದ ಹೊರಗೆ ಬಂದ ಬಳಿಕ ಹೆಚ್ಚಿನ ದರ ಪಡೆಯಲಾಗುತ್ತಿದೆ ಎಂದು ಪ್ರಯಾಣಿಕರು ದೂರಿದರು.

ಇನ್ನು ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ನಿಗಮದ ಕೆಲ ಬಸ್‌ಗಳು ಕಾಣಿಸಿಕೊಂಡವು. ಖಾಸಗಿ ಬಸ್‌ಗಳು ಇದ್ದರೂ ಜನರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ ಇತ್ತು.

ಅಂಕಿ-ಅಂಶಗಳು

456 ಕಾರ್ಯಾಚರಣೆ ಮಾಡಿದ ಸಾರಿಗೆ ನಿಗಮಗಳ ಬಸ್‌ಗಳು	**6** ವಿವಿಧೆಡೆ ಹಾನಿಯಾಗಿರುವ ಕೆಎಸ್‌ಆರ್‌ಟಿಸಿ ಬಸ್‌ಗಳು
14,278 ಕಾರ್ಯಾಚರಣೆ ಮಾಡಿದ ಒಟ್ಟು ಖಾಸಗಿ ಬಸ್‌ಗಳು	**896** ರಾಜ್ಯದಲ್ಲಿ ಕಾರ್ಯಾಚರಣೆ ಮಾಡಿದ ಹೊರ ರಾಜ್ಯದ ಬಸ್‌ಗಳು

ಅಧಿಕಾರಿಗಳಿಗೆ ಕೂಟ ಪ್ರಶ್ನೆ

'ನೌಕರರ ಅಳಿವು-ಉಳಿವಿನ ಪ್ರಶ್ನೆ ಆಗಿರುವ ಮುಷ್ಕರದಲ್ಲಿ ಸಾರಿಗೆ ನಿಗಮಗಳ ಅಧಿಕಾರಿ ಮತ್ತು ಭದ್ರತಾ ಸಿಬ್ಬಂದಿ ಪಾಲ್ಗೊಳ್ಳಬೇಕು' ಎಂದು ಸಾರಿಗೆ ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ಮನವಿ ಮಾಡಿದ್ದಾರೆ.

'ಬೇರೆ ನಿಗಮ ಮತ್ತು ಇಲಾಖೆಗಳ ಅಧಿಕಾರಿಗಳಿಗೆ ಹೋಲಿಸಿದರೆ ನಿಮ್ಮ ವೇತನ ಹಾಗೂ ಇತರ ಸೌಲಭ್ಯಗಳು ಎಷ್ಟಿವೆ ಎಂಬುದನ್ನು ಪರಿಶೀಲಿಸಿಕೊಳ್ಳಿ. ಮನಸಿನಲ್ಲೇ ವ್ಯಥೆಪಡುವುದನ್ನು ಬಿಟ್ಟು ನಮ್ಮೊಂದಿಗೆ ಕೈಜೋಡಿಸಿ. ಎಲ್ಲರು ಒಗ್ಗಟ್ಟಿನಿಂದ ಹೋರಾಟ ಮಾಡಲು ಮುಂದೆ ಬನ್ನಿ' ಎಂದು ಕೋರಿ ವಿಡಿಯೊ ಮಾಡಿ ಬಿಡುಗಡೆ ಮಾಡಿದ್ದಾರೆ.

'ಕೇವಲ ನೈತಿಕ ಬೆಂಬಲ ಸೂಚಿಸುವುದರಿಂದ ಪ್ರಯೋಜನ ಇಲ್ಲ. ನಮ್ಮ ಹೋರಾಟ ಕೆಳ ಹಂತದ ನೌಕರರ ಪರ ಮಾತ್ರ ಅಲ್ಲ. ನಿಮ್ಮ ಪರವೂ ಇದೆ. ನಿಮ್ಮ ಮತ್ತು ಇತರ ಇಲಾಖೆ ಅಧಿಕಾರಿಗಳ ವೇತನದಲ್ಲಿ ಇರುವ ತಾರತಮ್ಯವೂ ನಿವಾರಣೆ ಆಗಬೇಕು. ಬೀದಿಗೆ ಬನ್ನಿ' ಎಂದು ಮನವಿ ಮಾಡಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಅಧಿಕಾರಿಯೊಬ್ಬರು, 'ನಾವು ಕೆಲಸಕ್ಕೆ ಸೇರುವಾಗಲೇ ನಮ್ಮ ಕೆಲಸ, ಸಂಬಳ, ಸಂಸ್ಥೆಯಲ್ಲಿ ದೊರೆಯುವ ಸೌಲಭ್ಯದ ಬಗ್ಗೆ ಅರಿವಿತ್ತು. ಆದರೂ, ಪ್ರಸ್ತುತ ಸ್ಥಿತಿಯಲ್ಲಿ ಬರುತ್ತಿರುವ ಸಂಬಳ ಮತ್ತು ಇತರೆ ಭತ್ಯೆಗಳು ಬೇರೆ ಇಲಾಖೆಗಳಿಗೆ ಹೋಲಿಸಿದಾಗ ಕಡಿಮೆ ಎನಿಸಿದೆ. ಕೋವಿಡ್ ಸಂದರ್ಭದಲ್ಲಿ 6ನೇ ವೇತನ ಆಯೋಗದ ಶಿಫಾರಸು ಅಳವಡಿಕೆ ಬಗ್ಗೆಯಾಗಲಿ, ಸಾರಿಗೆ ಬಂದ್ ಮಾಡುವುದಕ್ಕೆ ನಮ್ಮ ಸಹಮತವಿಲ್ಲ' ಎಂದರು.

'ಅತ್ಯಂತ ಕ್ಲಿಷ್ಟಕರ ಸಮಯದಲ್ಲಿ ಸರ್ಕಾರ ನಮ್ಮ ನೆರವಿಗೆ ಬಂದಿದೆ. ಮುಷ್ಕರ ಕೈಬಿಟ್ಟು ಸರ್ಕಾರದ ಜತೆ ಮಾತುಕತೆ ನಡೆಸಿಕೊಂಡು ವೇತನ ಹೆಚ್ಚಳಕ್ಕೆ ಒತ್ತಾಯಿಸಬಹುದಾಗಿದೆ' ಎಂದು ಹೇಳಿದರು.

ಸಂಕಷ್ಟದಲ್ಲಿರುವವರಿಗೆ ಸಾಲ ವಿತರಣೆ: ಸೂಚನೆ

ರಾಜರಾಜೇಶ್ವರಿನಗರ : ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಸ್ವಾವಲಂಬನೆಯ ಬದುಕು ಕಟ್ಟಿಕೊಳ್ಳಲು ಯುವ ಸಮೂಹ ರೈತಾಪಿ ವರ್ಗದವರು ಮುಂದಾಗಬೇಕು ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಚಂದ್ರಪ್ಪ ಸರ್ಕಲ್, ಕುಡುಸಿದ್ದನಪಾಳ್ಯ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟನೆ, ಹೊಸಪಾಳ್ಯ, ಗಂಗಪ್ಪನಹಳ್ಳಿ, ದೇವಮಾಚೋಹಳ್ಳಿಯ ಗ್ರಾಮಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದರು.

'ರಾಜ್ಯದ ಎಲ್ಲ ಸಹಕಾರಿ ಸಂಘಗಳ ಅಭಿವೃದ್ಧಿ, ಸ್ವಂತ ಕಟ್ಟಡ ನಿರ್ಮಾಣ, ಸಂಪನ್ಮೂಲ ವೃದ್ಧಿಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು. ಕೊರೋನಾ ಸಂದರ್ಭದಲ್ಲಿ ರೈತರು ಸಂಕಷ್ಟದಲ್ಲಿದ್ದು ಕೃಷಿ, ವಾಣಿಜ್ಯ ಚಟುವಟಿಕೆ, ಗುಡಿಕೈಗಾರಿಕೆಗಳಿಗೆ ಅರ್ಜಿಗಳು ಬಂದಂತೆ ಸಾಲ ವಿತರಣೆ ಮಾಡಲು ಎಲ್ಲ ಡಿಸಿಸಿ ಬ್ಯಾಂಕ್‌ಗಳಿಗೆ ಸೂಚಿಸಲಾಗಿದೆ' ಎಂದರು.


ಚಂದ್ರಪ್ಪ ಸರ್ಕಲ್‌ನಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು. ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಿ.ಹನುಮಂತಯ್ಯ, ಬೆಂಗಳೂರು ಡೈರಿ ಅಧ್ಯಕ್ಷ ಕೆ.ನರಸಿಂಹಮೂರ್ತಿ, ತಾಲ್ಲೂಕು ಪಂಚಾಯಿತಿ ಸದಸ್ಯೆ ಕವಿತಾ ರಾಮಕೃಷ್ಣಯ್ಯ, ಸ್ಥಳೀಯ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಚಂದ್ರಶೇಖರ್, ಮಾಜಿ ಅಧ್ಯಕ್ಷರಾದ ಡಿ.ಆನಂದಸ್ವಾಮಿ, ರುದ್ರಪ್ಪ ಇದ್ದಾರೆ.

ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಿ.ಹನುಮಂತಯ್ಯ ಮಾತನಾಡಿ, 'ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಜಿಲ್ಲೆಗಳ ರೈತರಿಗೆ ಜನವರಿಯಿಂದ ಇಲ್ಲಿಯವರೆವಿಗೆ ₹75 ಕೋಟಿ ಬೆಳೆ ಸಾಲ ನೀಡಲಾಗಿದ್ದು, ಮತ್ತೆ ₹30 ಕೋಟಿ ವಿತರಣೆ ಮಾಡಲಾಗುತ್ತಿದೆ' ಎಂದರು.

ಬೆಂಗಳೂರು ಡೈರಿ ಅಧ್ಯಕ್ಷ ಕೆ.ನರಸಿಂಹಮೂರ್ತಿ, ತಾಲ್ಲೂಕು ಪಂಚಾಯಿತಿ ಸದಸ್ಯೆ ಕವಿತಾ ರಾಮಕೃಷ್ಣಯ್ಯ, ಸ್ಥಳೀಯ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಚಂದ್ರಶೇಖರ್, ಗ್ರಾಮಪಂಚಾಯತಿ ಉಪಾಧ್ಯಕ್ಷ ಎನ್.ನರಸಿಂಹಮೂರ್ತಿ, ಮಾಜಿ ಅಧ್ಯಕ್ಷರಾದ ಡಿ.ಆನಂದಸ್ವಾಮಿ, ರುದ್ರಪ್ಪ, ಸದಸ್ಯ ಎನ್.ದೇವರಾಜ್‌ಪಟೇಲ್ ಇದ್ದರು.

ಬಸ್ ಮೇಲೆ ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ

ಕೋಲಾರ: ಸಾರಿಗೆ ನೌಕರರ ಮುಷ್ಕರದ ನಡುವೆಯೂ ರಸ್ತೆಗಿಳಿದ ಕೆಎಸ್‌ಆರ್‌ಟಿಸಿ ಬಸ್‌ಗಳ ಮೇಲೆ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದು, ಎರಡು ಬಸ್‌ಗಳ ಗಾಜು ಪುಡಿಯಾಗಿವೆ.

ಬೆಂಗಳೂರಿನಿಂದ ಆಂಧ್ರಪ್ರದೇಶದ ವಿಜಯವಾಡಕ್ಕೆ ಹೋಗುತ್ತಿದ್ದ ಬಸ್ ಮೇಲೆ ದುಷ್ಕರ್ಮಿಗಳು ಬುಧವಾರ ರಾತ್ರಿ ತಂಬಳ್ಳಿ ಗೇಟ್ ಬಳಿ ಕಲ್ಲು ತೂರಿ ಪರಾರಿಯಾಗಿದ್ದಾರೆ. ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಬೈಕ್‌ನಲ್ಲಿ ಬಂದ ಕಿಡಿಗೇಡಿಗಳು ಗುರುವಾರ ಮಧ್ಯಾಹ್ನ ಕೋಲಾರದಿಂದ ಮಾಲೂರಿಗೆ ಹೋಗುತ್ತಿದ್ದ ಬಸ್ ಮೇಲೆ ಚಲುವನಹಳ್ಳಿ ಗೇಟ್ ಬಳಿ ಕಲ್ಲು ತೂರಿ ಪರಾರಿಯಾಗಿದ್ದಾರೆ.

ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಗದಗ: ಗದಗ ವಿಭಾಗದಲ್ಲಿ ಚಾಲಕ/ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ವಸಂತ ರಾಮದುರ್ಗ ಎಂಬ ನೌಕರ ಗುರುವಾರ ರಾತ್ರಿ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅವರಿಗೆ ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಇವರು ಕದಡಿ ಗ್ರಾಮದವರಾಗಿದ್ದು, ನಗರದ ಹುಡ್ಕೊ ಬಡಾವಣೆಯಲ್ಲಿ ವಾಸವಾಗಿದ್ದರು. ಗದಗ ಡಿಪೊ ಬಳಿ ವಿಷಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಕರ್ತವ್ಯಕ್ಕೆ ಹಾಜರಾಗದೇ ಮುಷ್ಕರದಲ್ಲಿ ತೊಡಗಿದ್ದ ವಸಂತ ಅವರನ್ನು ಸಾರಿಗೆ ಸಂಸ್ಥೆಯ ಅಧಿಕಾರಿಗಳು ಕರ್ತವ್ಯಕ್ಕೆ ಹಾಜರಾಗಬೇಕು ಎಂದು ತಾಕೀತು ಮಾಡಿದ್ದರು.

'ಮುಷ್ಕರದ ಎರಡನೇ ದಿನದಂದು ಕೆಲವು ಬಸ್‌ಗಳ ಸಂಚಾರ ಆರಂಭಿಸಿವೆ. ಇನ್ನು ನಮಗೆ ಆರನೇ ವೇತನ ಆಯೋಗ ಜಾರಿಯಾಗುವುದಿಲ್ಲ. ನಮ್ಮ ಬೇಡಿಕೆಗಳು ಈಡೇರುವುದಿಲ್ಲ. ಮತ್ತೆ ಸಾಲದ ಸುಳಿಗೆ ಸಿಲುಕುವುದು ತಪ್ಪುವುದಿಲ್ಲ. ಹೋರಾಟ ಮಾಡಿದ್ದು ವ್ಯರ್ಥವಾಯಿತು. ಜೀವನದಲ್ಲಿ ಜುಗುಪ್ಸೆಗೊಂಡಿದ್ದೇನೆ. ಹೀಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ವಸಂತ ಹೇಳಿ ವಿಷ ಸೇವಿಸಿದ್ದಾರೆ' ಎಂದು ಅವರ ಸಹೋದ್ಯೋಗಿಗಳು ತಿಳಿಸಿದ್ದಾರೆ.

ಅಧಿಕಾರಿಗಳ ಕಿರುಕುಳದಿಂದ ವಿಷ ಸೇವಿಸಿದ್ದಾರೆ ಎಂಬುದು ಕುಟುಂಬಸ್ಥರ ಆರೋಪವಾಗಿದೆ.

ನಿಧನ ವಾರ್ತೆ

ಪಾಪರಾಜು



ಬೆಂಗಳೂರು: ಕಂದಾಯ ಇಲಾಖೆಯ ನಿವೃತ್ತ ವಾಹನ ಚಾಲಕ ಪಾಪರಾಜು (67) ಅವರು ಅನಾರೋಗ್ಯದಿಂದಾಗಿ ಗುರುವಾರ ಸಂಜೆ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ನಾಲ್ವರು ಪುತ್ರಿಯರು ಇದ್ದಾರೆ. ಆಡುಗೋಡಿ ಸಮೀಪದ ಕ್ರೈಸ್ತ ಸೆಮಿಟ್ರಿಯಲ್ಲಿ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಅಂತಿಮ ಸಂಸ್ಕಾರ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಪಾಪರಾಜು ಅವರು ರಾಜ್ಯ ಸರ್ಕಾರದ ಡಿ ಗ್ರೂಪ್ ನೌಕರರ ಸಂಘದ ಮಾಜಿ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು.

ಶಿವರಾಮಕಾರಂತ ಬಡಾವಣೆ: ಸಮಸ್ಯೆ ಆಲಿಸಿದ ಜೈಕರ್ ಜೆರೋಮ್

ಯುಗಾದಿ ಬಳಿಕ ಸಭೆ–ಸಮಸ್ಯೆ ಬಗೆಹರಿಸಲು ಪ್ರಯತ್ನ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಶಿವರಾಮಕಾರಂತ ಬಡಾವಣೆ ಬಗ್ಗೆ ವರದಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ನಿಯೋಜಿಸಿರುವ ಸಮಿತಿಯ ಸದಸ್ಯ ಜೈಕರ್ ಜೆರೋಮ್ ಅವರು ಚಿಕ್ಕಬಾಣಾವರ ಗ್ರಾಮದ ಮಾರುತಿನಗರ, ಕೆಂಪಾಪುರ, ಗಾಣಿಗರಹಳ್ಳಿ ಗ್ರಾಮಗಳಿಗೆ ಗುರುವಾರ ಬೆಳಿಗ್ಗೆ ಭೇಟಿ ನೀಡಿ ಗ್ರಾಮಸ್ಥರ ಅಳಲುಗಳನ್ನು ಆಲಿಸಿದರು.

'17 ದಾಖಲೆಗಳನ್ನು ಕೊಡುವಂತೆ ನೋಟಿಸ್ ನೀಡಿದ್ದೀರಿ. ಆದರೆ, ಅಷ್ಟೊಂದು ದಾಖಲೆಗಳು ನಮ್ಮ ಬಳಿ ಇಲ್ಲ. ಏನು ಮಾಡುವುದು?' ಎಂದು ಗಾಣಿಗರಹಳ್ಳಿ ಗ್ರಾಮದ ಹನುಮಂತರಾಯಪ್ಪ ಲೇಔಟ್‌ನ ನಿವಾಸಿಗಳು ಪ್ರಶ್ನಿಸಿದರು. 'ಹದಿನೇಳು ದಾಖಲೆಗಳಲ್ಲಿ ಒಂದನ್ನು ಮಾತ್ರ ನೀಡಿ. ಈ ಬಗ್ಗೆ ಪ್ರಕಟಣೆ ಹೊರಡಿಸುತ್ತೇನೆ' ಎಂದು ಜೈಕರ್ ಜೆರೋಮ್ ತಿಳಿಸಿದರು.

'17 ಹಳ್ಳಿಗಳ ಪ್ರಮುಖರನ್ನು ಒಂದು ಕಡೆ ಸಭೆ ಕರೆದು ನಮ್ಮ ಕಷ್ಟಗಳನ್ನು ಆಲಿಸಿ. ಸಾಲ ಮಾಡಿ ಮನೆಗಳನ್ನು ಕಟ್ಟಿಕೊಂಡಿದ್ದೇವೆ. ಇನ್ನೂ ಸಾಲ ತೀರಿಲ್ಲ. ಮನೆ ಕೆಡವಿ ಬಿಟ್ಟರೆ ನಾವು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ' ಎಂದು ಗುಣಿಅಗ್ರಹಾರ ಗ್ರಾಮದ ನಿವಾಸಿ ಕೃಷ್ಣಪ್ಪ ಅಳಲು ತೋಡಿಕೊಂಡರು.

ತಕ್ಷಣ ಸ್ಪಂದಿಸಿದ ಜೈಕರ್ ಜೆರೋಮ್, 'ನೀವೆಲ್ಲ ಯುಗಾದಿ ಹಬ್ಬ ಕಳೆದ ಕೂಡಲೇ ಒಂದು ಸ್ಥಳವನ್ನು ನಿಗದಿ ಮಾಡಿ. ಯಾರು ಬರಬೇಕು ಎಂದು ನೀವೇ ನಿರ್ಧಾರ ಮಾಡಿ. ಎಲ್ಲರೂ ಸೇರಿ ಕುಳಿತು ಮಾತನಾಡೋಣ. ಸಮಸ್ಯೆ ಬಗೆಹರಿಸಲು ಪ್ರಯತ್ನ ಮಾಡೋಣ" ಎಂದರು.


ಜೈಕರ್ ಜೆರೋಮ್ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿದರು.

'ನನ್ನ ಗಂಡ ಸೈನಿಕರಾಗಿದ್ದರು. ಈಗ ಅವರು ಇಲ್ಲ. ಅವರಿಗೆ ಕೊಟ್ಟ ಹಣದಲ್ಲಿ ಮನೆಯನ್ನು ಕಟ್ಟಿದ್ದೇವೆ. ಮುಂದೆ ಏನು ಮಾಡಬೇಕು ಎಂಬುದನ್ನು ನೀವೇ ಹೇಳಿ' ಎಂದು ಸೈನಿಕನ ಪತ್ನಿಯೊಬ್ಬರು ಕಣ್ಣೀರು ಇಟ್ಟರು.

'ನಿವೇಶನಗಳ ಬಗ್ಗೆ ಏಪ್ರಿಲ್ 30ರ ತನಕ ಏನೂ ಹೇಳಲು ಬರುವುದಿಲ್ಲ. ನೀವೆಲ್ಲ ಸರಿಯಾದ ಮಾಹಿತಿ ನೀಡಿ. 2008ರಿಂದ 2018ರ ತನಕ ಇಷ್ಟು ಮನೆಗಳು ಆಗಿವೆ ಎಂದು ಸುಪ್ರೀಂ ಕೋರ್ಟ್‌ಗೆ ವರದಿ ನೀಡುವುದು ಅಷ್ಟೇ ನಮ್ಮ ಕೆಲಸ. ವರದಿ ನೀಡೋಣ. ನಂತರ ಕೋರ್ಟ್ ಏನು ತೀರ್ಪು ನೀಡುತ್ತದೆ ನೋಡೋಣ. ಹೆದರಬೇಡಿ' ಎಂದು ಜೈಕರ್ ಜೆರೋಮ್ ಅವರು ಧೈರ್ಯ ತುಂಬಿದರು.

ಪಾರ್ಶ್ವವಾಯುಗೆ ಒಳಗಾಗಿದ್ದ ವಿದ್ಯಾರ್ಥಿನಿಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಬ್ರೈನ್ ಸ್ಟ್ರೋಕ್ (ಮಿದುಳಿನ ಪಾರ್ಶ್ವವಾಯು) ಆಗಿದ್ದ ವಿದ್ಯಾರ್ಥಿನಿ ಹಾಸಿಗೆಯಲ್ಲಿ ಮಲಗಿದ್ದರೂ ಛಲ ಬಿಡದೇ ಓದಿ ಸ್ನಾತಕೋತ್ತರ ಪದವಿಯಲ್ಲಿ (ಇಂಗ್ಲಿಷ್) ಚಿನ್ನದ ಪದಕ ಪಡೆದಿದ್ದಾರೆ.


ನಿಸರ್ಗ

ದಾವಣಗೆರೆ ವಿದ್ಯಾನಗರದ ನಿಸರ್ಗ ಕೆ.ಪಿ. ಈ ಸಾಧಕ ವಿದ್ಯಾರ್ಥಿನಿ. ಸಿವಿಲ್ ಕಂಟ್ರಾಕ್ಟರ್ ಪಂಚಾಕ್ಷರಿ-ಬಸಮ್ಮ ದಂಪತಿಯ ಮಗಳಾಗಿರುವ ನಿಸರ್ಗ ಅವರಿಗೆ 2020ರ ಏಪ್ರಿಲ್‌ನಲ್ಲಿ ಬ್ರೈನ್ ಸ್ಟ್ರೋಕ್ ಆಗಿತ್ತು. ಶಿವಮೊಗ್ಗದ ಮಾನಸ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕೊರೊನಾ ಕಾರಣದಿಂದ ತಡವಾಗಿ ಅಂದರೆ ಸೆಪ್ಟೆಂಬರ್‌ನಲ್ಲಿ ಪರೀಕ್ಷೆ ಘೋಷಣೆಯಾಗಿತ್ತು. ಬೆಡ್‌ನಲ್ಲಿ ಮಲಗಿಕೊಂಡೇ ಮೊಬೈಲ್ ಮತ್ತು ಲ್ಯಾಪ್‌ಟಾಪ್‌ನಲ್ಲಿ ಅಧ್ಯಯನ ಮಾಡಿದ್ದರು. ಅವರಿಗೆ ಮೂರು ವರ್ಷ ಚಿಕಿತ್ಸೆ ಅಗತ್ಯವಿದೆ. ಈ ಮಧ್ಯೆ ಪರೀಕ್ಷೆ ಬರೆದು ಹೋಗಿದ್ದರು. ಇದೀಗ ಮೂರು ಚಿನ್ನದ ಪದಕಗಳನ್ನು ಗಳಿಸಿದ್ದಾರೆ. ಗುರುವಾರ ನಡೆದ ಘಟಿಕೋತ್ಸವದಲ್ಲಿ ಈ ಪದಕಗಳನ್ನು ಸ್ವೀಕರಿಸಿದರು.


ಅರಿಶಿನಕುಂಟೆಯಲ್ಲಿ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ನಿವೃತ್ತ ಯೋಧ ಎಚ್.ಎಂ.ಶಿವಕುಮಾರ್ ಅವರನ್ನು ಸನ್ಮಾನಿಸಿದರು.

ತವರಿಗೆ ಬಂದ ಯೋಧನಿಗೆ ಅದ್ಧೂರಿ ಸ್ವಾಗತ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಸೇನೆಯಲ್ಲಿ ಸೇವೆ ಸಲ್ಲಿಸಿ, ತವರಿಗೆ ಮರಳಿದ ತಾಲ್ಲೂಕಿನ ಹೊನ್ನಾರಾಯನಹಳ್ಳಿಯ ನಿವೃತ್ತ ಯೋಧ ಸೈನಿಕ ಲಾನ್ಸ್ ನಾಯಕ್ ಎಚ್.ಎಂ.ಶಿವಕುಮಾರ್ ಅವರನ್ನು ಜನ ಅದ್ಧೂರಿಯಾಗಿ ಬರಮಾಡಿಕೊಂಡರು.

ಮೆರವಣಿಗೆಯ ಮುಖಾಂತರ ಬಸವಣ್ಣದೇವರ ಮಠಕ್ಕೆ ಬಂದ ಶಿವಕುಮಾರ್ ಅವರನ್ನು ಪುರಸ್ಕರಿಸಿ ಮಾತನಾಡಿದ ಬಸವಣ್ಣದೇವರ ಮಠದ ಸಿದ್ದಲಿಂಗ ಶ್ರೀಗಳು,'ಸೇನೆಯಲ್ಲಿ ಸೇವೆ ಸಲ್ಲಿಸಿದವರಿಗೆ ಈ ರೀತಿಯ ಅದ್ದೂರಿ ಸ್ವಾಗತ ಸೇನೆಗೆ ಸಲ್ಲಿಸಿದ ಗೌರವ ಹಾಗೂ ಸೈನ್ಯಕ್ಕೆ ಸೇರಲು ಪ್ರೇರಣೆ ನೀಡಿದಂತಾಗಿದೆ' ಎಂದರು.

'ಸೇನೆಯಲ್ಲಿ ಸೇವೆ ಸಲ್ಲಿಸಲು ಸಿಕ್ಕ ಅವಕಾಶ ಬಳಸಿಕೊಂಡಿದ್ದೇನೆ. ಸ್ವಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ, ಮೊದಲಕೋಟೆಯಲ್ಲಿ ಪ್ರೌಢ ಹಾಗೂ ಸಿದ್ದಗಂಗಾ ಮಠದಲ್ಲಿ ಪಿಯುಸಿ ಮುಗಿಸಿ ಸೇನೆಗೆ ಸೇರಿದ್ದೆ. ಬೆಂಗಳೂರು, ದೆಹಲಿ, ಕಾಶ್ಮೀರ, ಪಂಜಾಬ್, ಕೊಲ್ಕತ್ತಾ, ಕಾರ್ಗಿಲ್, ಮಥುರಾ ಸೇರಿದಂತೆ ಹಲವೆಡೆ ಒಟ್ಟು 17 ವರ್ಷ ಸೇವೆ ಸಲ್ಲಿಸಿದ್ದೇನೆ. ಈ ಬಗ್ಗೆ ನನಗೆ ಹೆಮ್ಮೆ ಇದೆ' ಎಂದು ಶಿವಕುಮಾರ್ ಹೇಳಿದರು.

ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳಾದ ಉಮೇಶ್‌ಗೌಡ, ರಂಗಸ್ವಾಮಿ, ಬಿ.ನರಸಿಂಹಯ್ಯ, ರಾಮಮೂರ್ತಿ, ಕನ್ನಡ ಸಾಂಸ್ಕೃತಿಕ ರಂಗದ ಡಿ.ಸಿದ್ದರಾಜು, ಸುಗ್ಗರಾಜು, ವಿನೋದ್ ಕುಮಾರ್ ಇತರರು ಇದ್ದರು.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ವರದಿ ಸಲ್ಲಿಸಿದ ರಾಜ್ಯ ಸರ್ಕಾರ

'ವಾಯು ಮಾಲಿನ್ಯ: ನಿಯಂತ್ರಣಕ್ಕೆ ಕ್ರಮ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕಟ್ಟಡ ಕಾಮಗಾರಿ ಮತ್ತು ಕಟ್ಟಡ ನೆಲಸಮದ ತ್ಯಾಜ್ಯ ಸಾಗಣೆಯಿಂದ ಹಾಗೂ ತ್ಯಾಜ್ಯಕ್ಕೆ ಬೆಂಕಿ ಇಡುವುದರಿಂದ ಉಂಟಾಗುವ ಮಾಲಿನ್ಯದ ಪ್ರಮಾಣವನ್ನು ಪರಿಶೀಲಿಸುವ ಕಾರ್ಯ ಜಾರಿಯಲ್ಲಿದೆ ಎಂದು ರಾಜ್ಯ ಸರ್ಕಾರವು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ಮಾಹಿತಿ ನೀಡಿದೆ.

ವಾಯು ಮಾಲಿನ್ಯ ನಿಯಂತ್ರಣಕ್ಕೆ ಕೈಗೊಳ್ಳಲಾದ ಕಟ್ಟುನಿಟ್ಟಿನ ಕ್ರಮಗಳ ಕುರಿತು ವರದಿ ಸಲ್ಲಿಸುವಂತೆ ಹಸಿರು ಪೀಠ ಎಲ್ಲ ರಾಜ್ಯ ಸರ್ಕಾರಗಳಿಗೂ ನೀಡಿದ್ದ ಸೂಚನೆಯ ಮೇರೆಗೆ ಕರ್ನಾಟಕ ಸರ್ಕಾರ ಇತ್ತೀಚೆಗೆ ಈ ಮಾಹಿತಿ ಇರುವ ಹೇಳಿಕೆ ಸಲ್ಲಿಸಿದೆ.

ಕಟ್ಟಡ ಕಾಮಗಾರಿಯಿಂದ ಉಂಟಾಗುವ ದೂಳು ಮತ್ತು ಮಾಲಿನ್ಯ ನಿವಾರಣೆಗಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಬ್ರಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಪೌರಾಡಳಿತ ನಿರ್ದೇಶನಾಲಯಕ್ಕೆ ಸೂಚಿಸಲಾಗಿದೆ ಎಂದು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಸರ್ಕಾರದ ಪರ ಹಸಿರು ಪೀಠಕ್ಕೆ ಸಲ್ಲಿಸಿರುವ ಹೇಳಿಕೆಯಲ್ಲಿ ವಿವರಿಸಿದೆ.

ಬಿಬಿಎಂಪಿ ವತಿಯಿಂದ ಮಾಲಿನ್ಯ ನಿಯಂತ್ರಣ ಕ್ರಮ ಕೈಗೊಳ್ಳಲಾಗಿದೆ. ಈ ಸಂಬಂಧ ಮಂಡಳಿಯ ಗಾಳಿ ಗುಣಮಟ್ಟ ಉಸ್ತುವಾರಿ ಕೇಂದ್ರಕ್ಕೆ ವರದಿ ಸಲ್ಲಿಸಲಾಗುತ್ತಿದೆ. ಪೌರಾಡಳಿತ ನಿರ್ದೇಶನಾಲಯವು ರಾಜ್ಯದ ಎಲ್ಲ ಪಾಲಿಕೆ, ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯ್ತಿಗಳಿಗೂ ಮಾಲಿನ್ಯ ನಿಯಂತ್ರಣ ಕ್ರಮ ಅನುಸರಿಸಲು ಸೂಚಿಸಿದ್ದು, ಪ್ರತಿ ಮೂರು ತಿಂಗಳಿಗೊಮ್ಮೆ ಈ ಸಂಬಂಧದ ವರದಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮಾಲಿನ್ಯ ನಿಯಂತ್ರಣದ ಹಿನ್ನೆಲೆಯಲ್ಲಿ ರಸ್ತೆ ಪಕ್ಕದಲ್ಲಿ ಮತ್ತು ರಸ್ತೆ ವಿಭಜಕದ ನಡುವಿನ ಜಾಗದಲ್ಲಿ ಸಸಿ ನೆಡುವಂತೆಯೂ ನಿರ್ದೇಶನಾಲಯ ಸೂಚಿಸಿದೆ. ಯಾವುದೇ ರೀತಿಯ ತ್ಯಾಜ್ಯಕ್ಕೆ ಬೆಂಕಿ ಇಡುವುದನ್ನು ತಡೆಯುವ ನಿಟ್ಟಿನಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ಕೃಷಿ ತ್ಯಾಜ್ಯ ಸುಡದಂತೆ ತಡೆಯಲೆಂದೇ ತ್ಯಾಜ್ಯವನ್ನು ಗೊಬ್ಬರ ಮತ್ತಿತರ ಉಪ ಉತ್ಪನ್ನವನ್ನಾಗಿ ಪರಿವರ್ತಿಸಲು ಕೃಷಿ ಇಲಾಖೆ ನೆರವು ನೀಡುತ್ತಿದೆ ಎಂದು ವರದಿ ತಿಳಿಸಿದೆ.

ಬೆಂಗಳೂರು ನಗರವೊಂದರಲ್ಲೇ ಸಸಿಗಳಿಗೆ ನೀರು ಸಿಂಪರಣೆ ಯಂತ್ರ ಖರೀದಿಗೆ, ಹಸಿರೀಕರಣಕ್ಕೆ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿಯಂತಹ ಚಟುವಟಿಕೆಗಳಿಗಾಗಿ ₹ 2.22 ಕೋಟಿ ಅನುದಾನವನ್ನು ಬಿಬಿಎಂಪಿಗೆ ಮಂಜೂರು ಮಾಡಲಾಗಿದೆ ಎಂದು ಮಂಡಳಿ ಸ್ಪಷ್ಟಪಡಿಸಿದೆ.

ಈ ಅನುದಾನ ಬಳಕೆಗಾಗಿಯೇ ಕೈಗೊಳ್ಳಲಾದ ಕಾಮಗಾರಿಯ ಪಟ್ಟಿಯನ್ನು ಬಿಬಿಎಂಪಿಯು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿದೆ. ಮಾಲಿನ್ಯ ನಿಯಂತ್ರಣ, ನಗರದ ಹಸಿರೀಕರಣ ಮತ್ತು ಸಸಿ ವಿತರಣಾ ಆಂದೋಲನವನ್ನೂ ಹಮ್ಮಿಕೊಳ್ಳಲಾಗಿದೆ. ಸಂಸ್ಕರಿಸಲಾದ ಒಳಚರಂಡಿಯ ನೀರು ಬಳಸಿ ಕಾರಂಜಿ ನಿರ್ಮಿಸುವುದಕ್ಕೂ, ಸ್ವಚ್ಛತೆಗೆ ಅಗತ್ಯವಿರುವ ಯಂತ್ರೋಪಕರಣ, ವಾಹನಗಳ ಖರೀದಿಗೂ ಇದೇ ಅನುದಾನ ಬಳಸಲಾಗುತ್ತದೆ ಎಂದು ವಿವರಿಸಲಾಗಿದೆ.

ಕಾವೇರಿ ಪೈಪ್‌ಲೈನ್ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಹೆಸರಘಟ್ಟ ಮುಖ್ಯ ರಸ್ತೆಯ 8ನೇ ಮೈಲಿ ಬಳಿ ಕಾವೇರಿ 5ನೇ ಹಂತದ ಪೈಪ್‌ಲೈನ್ ಕಾಮಗಾರಿಗೆ ಶಾಸಕ ಆರ್. ಮಂಜುನಾಥ್ ಬುಧವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 'ನಮ್ಮ ಭಾಗದಲ್ಲಿ 13 ಕಿ.ಮೀ. ಪೈಪ್‌ಲೈನ್ ಹಾದುಹೋಗಲಿದ್ದು ಗಂಗಾ ಇಂಟರ್‌ನ್ಯಾಷನಲ್ ಶಾಲೆಯಿಂದ ಆರಂಭವಾಗಿ ಹೆಸರಘಟ್ಟ ಮುಖ್ಯರಸ್ತೆಯ 8ನೇ ಮೈಲಿ, ಮಲ್ಲಸಂದ್ರ, ಲಕ್ಷ್ಮಿಪುರ ಮಾರ್ಗವಾಗಿ ಸಿಂಗಪುರ ಭಾಗಕ್ಕೆ ಹೋಗಲಿದೆ' ಎಂದರು.

'ನಮ್ಮ ಭಾಗದ 110 ಹಳ್ಳಿಗೆ ಒಳಪಡುವ ಶೆಟ್ಟಿಹಳ್ಳಿ, ಕಮ್ಮಗೊಂಡನಹಳ್ಳಿ, ಅಬ್ಬಿಗೆರೆ, ಕಾನ್ಶಿರಾಮನಗರ, ಲಕ್ಷ್ಮಿಪುರ, ಚಿಕ್ಕಸಂದ್ರ, ಸಿಡೆದಹಳ್ಳಿ ಭಾಗದ ಜನರಿಗೆ ಅನುಕೂಲವಾಗಲಿದ್ದು, ಕಾಮಗಾರಿ ಮುಕ್ತಾಯಗೊಂಡ ನಂತರ ಕಾವೇರಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಕ್ಕಂತಾಗುತ್ತದೆ' ಎಂದರು.



ಕಾಮಗಾರಿಗೆ ಶಾಸಕ ಆರ್.ಮಂಜುನಾಥ್ ಚಾಲನೆ ನೀಡಿದರು.

'ಸದ್ಯಕ್ಕೆ ತಾತ್ಕಾಲಿಕವಾಗಿ ಈ ಭಾಗದಲ್ಲಿ ಸಂಚರಿಸುವ ಸಾರ್ವಜನಿಕರಿಗೆ, ವಾಹನ ಚಾಲಕರಿಗೆ, ತೊಂದರೆಯಾಗಲಿದ್ದು ಸಾರ್ವಜನಿಕರು ಸಹಕರಿಸಬೇಕು' ಎಂದು ಮನವಿ ಮಾಡಿದರು.

ಕ್ಷೇತ್ರ ಜೆಡಿಎಸ್ ಘಟಕದ ಅಧ್ಯಕ್ಷ ಮುನಿಸ್ವಾಮಣ್ಣ, ಬಿ.ಎನ್. ಜಗದೀಶ್, ರುದ್ರೇಗೌಡ, ಗೋವಿಂದಪ್ಪ, ಮಲ್ಲೇಶಗೌಡ, ಪಾಪಣ್ಣ, ಬಲರಾಮ್, ರಾಣಿ ಪ್ರತಾಪ್, ಕೃಷ್ಣಮೂರ್ತಿ ಮತ್ತಿತರರಿದ್ದರು.

ಜಿಲೆಟಿನ್ ಸ್ಫೋಟ ಪ್ರಕರಣ: ಮತ್ತೊಬ್ಬ ಸಾವು

ಹಾಸನ: ಹೊಳೆನರಸೀಪುರ ತಾಲ್ಲೂಕಿನ ಚಾಕೇನಹಳ್ಳಿ ಕಟ್ಟೆ ಗ್ರಾಮದ ಸ್ಫೋಟಕ ಸಂಗ್ರಹಿಸಿದ್ದ ಗೋದಾಮಿನ ಬಳಿ, ಜಿಲೆಟಿನ್ ಸ್ಫೋಟಿಸಿ ಗಂಭೀರವಾಗಿ ಗಾಯಗೊಂಡಿದ್ದ ಮತ್ತೊಬ್ಬ ಕಾರ್ಮಿಕ ನಟರಾಜ್, ಗುರುವಾರ ಬೆಂಗಳೂರಿನಲ್ಲಿ ಮೃತಪಟ್ಟಿದ್ದಾರೆ. ಪ್ರಕರಣದಲ್ಲಿ ಮೃತಪಟ್ಟವರ ಸಂಖ್ಯೆ ಮೂರಕ್ಕೇರಿದೆ. ಗೋದಾಮು ಮಾಲೀಕ ನಾಗೇಶ್ ಅವರನ್ನು ಗುರುವಾರ ಬಂಧಿಸಲಾಗಿದೆ.

ಕೆಪಿಎಸ್‌ಸಿ ಸದಸ್ಯರಾಗಿ ಪ್ರಭುದೇವ್ ನೇಮಕ



ಬೆಂಗಳೂರು: ಕೌಶಲಾಭಿವೃದ್ಧಿ ಹಾಗೂ ಜೀವನೋಪಾಯ ಇಲಾಖೆಯ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಪ್ರಭುದೇವ್ ಅವರನ್ನು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರನ್ನಾಗಿ ರಾಜ್ಯ ಸರ್ಕಾರ ನೇಮಿಸಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ನೆಲಮನೆ ಗ್ರಾಮದ ಪ್ರಭುದೇವ್, ಪಾಂಡವಪುರದಲ್ಲಿ ಪ್ರಾಥಮಿಕ ಶಿಕ್ಷಣ, ಮೈಸೂರಿನ ಮರಿಮಲ್ಲಪ್ಪ ಶಾಲೆಯಲ್ಲಿ ಪ್ರೌಢ ಶಿಕ್ಷಣ, ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ ಬಿ.ಇ. ಪದವಿ, ಮೈಸೂರು ವಿವಿಯಲ್ಲಿ ವ್ಯವಹಾರ ಆಡಳಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ, ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಪಿಎಚ್‌ಡಿ ಪಡೆದರು.

ವಾಣಿಜ್ಯ ತೆರಿಗೆ ಅಧಿಕಾರಿಯಾಗಿ, ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಕರಕುಶಲ ಅಭಿವೃದ್ಧಿ ನಿಗಮ, ಹಟ್ಟಿ ಚಿನ್ನದ ಗಣಿ ನಿಗಮಗಳಲ್ಲಿ ಪ್ರಧಾನ ವ್ಯವಸ್ಥಾಪಕರಾಗಿ ಕರ್ತವ್ಯ ಸಲ್ಲಿಸಿದ್ದಾರೆ.

ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಒತ್ತಾಯ

'ಅನ್ಯಾಯದ ಬ್ರಹ್ಮಾಸ್ತ್ರ ಬೇಡ'

ಪ್ರಜಾವಾಣಿ ವಾರ್ತೆ



ಕೋಡಿಹಳ್ಳಿ ಚಂದ್ರಶೇಖರ್

ಬೆಂಗಳೂರು: 'ಸಾರಿಗೆ ನೌಕರರ ಮುಷ್ಕರವನ್ನು ಹತ್ತಿಕ್ಕಲು ಅನ್ಯಾಯದ ಬ್ರಹ್ಮಾಸ್ತ್ರದ ಮಾರ್ಗಗಳನ್ನು ಸರ್ಕಾರ ಅನುಸರಿಸುತ್ತಿದೆ. ಅದನ್ನು ಬಿಟ್ಟು ಮಾತುಕತೆಗೆ ಮುಂದಾಗಬೇಕು' ಎಂದು ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಒತ್ತಾಯಿಸಿದರು.

'ಸಾರಿಗೆ ಸಿಬ್ಬಂದಿಗೆ ನೋಟಿಸ್ ನೀಡಲಾಗುತ್ತಿದೆ. ತರಬೇತಿ ಮತ್ತು ಪ್ರೊಬೇಷನರಿ ಅವಧಿಯಲ್ಲಿರುವ ಸಿಬ್ಬಂದಿ ವಜಾಗೊಳಿಸಲಾಗುತ್ತಿದೆ. ನಿಗಮ ನೀಡಿರುವ ಮನೆಗಳನ್ನು ಖಾಲಿ ಮಾಡಿಸುವ ಪ್ರಯತ್ನಗಳೂ ನಡೆಯುತ್ತಿವೆ. ನೌಕರರನ್ನು ಮನೆಗಳಿಂದ ದಬ್ಬುವ ಪ್ರಯತ್ನ ಸರಿಯಲ್ಲ. ಇವೆಲ್ಲವೂ ಪ್ರಜಾಪ್ರಭುತ್ವ ವಿರೋಧಿ ನಡೆಗಳು' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.


'ಆರೋಗ್ಯದ ಕಾರಣಗಳನ್ನು ನೀಡಿ ಸೇವೆಯಲ್ಲಿರುವ ಹಿರಿಯ ನೌಕರರನ್ನು ಮನೆಗೆ ಕಳುಹಿಸುವ ಪ್ರಯತ್ನ ಒಂದೆಡೆ ನಡೆಯುತ್ತಿದೆ. ಇನ್ನೊಂದೆಡೆ ನಿವೃತ್ತ ನೌಕರರನ್ನು ವಾಪಸ್ ಕರೆತರುವ ಪ್ರಯತ್ನ ಮಾಡಲಾಗುತ್ತಿದೆ. ತರಬೇತಿ ಅವಧಿಯ ಸಿಬ್ಬಂದಿಯ ಕೈಗೆ ಪ್ರಯಾಣಿಕರ ಬಸ್‌ಗಳನ್ನು ಕೊಡುವುದು ಸರಿಯಲ್ಲ. ಈ ಎಲ್ಲ ಪ್ರಯತ್ನದ ಮೂಲಕ ಸರ್ಕಾರ ಅಪಾಯ ಮೈಮೇಲೆ ಎಳೆದುಕೊಳ್ಳುತ್ತಿದೆ' ಎಂದರು.

'ಮಾರ್ಚ್ ತಿಂಗಳ ವೇತನ ತಡೆಹಿಡಿಯುವ ಮೂಲಕ ಸಾರಿಗೆ ನೌಕರರು ಯುಗಾದಿ ಹಬ್ಬ ಆಚರಣೆ ಮಾಡದಂತೆ ಸರ್ಕಾರ ಮಾಡಿದೆ. ಮುಖ್ಯಮಂತ್ರಿ ಮಾತ್ರ ಹೋಳಿಗೆ-ತುಪ್ಪದ ಊಟ ಮಾಡಿದರೆ ಸಾಕೆ' ಎಂದು ಪ್ರಶ್ನಿಸಿದರು.

'ರಾಜ್ಯದಲ್ಲಿರುವ 76 ನಿಗಮಗಳಲ್ಲಿ 4 ಸಾರಿಗೆ ನಿಗಮಗಳ ನೌಕರರಿಗೆ ಮಾತ್ರ ಏಕೆ ತಾರತಮ್ಯ. ಬೇರೆ ನಿಗಮಗಳ ನೌಕರರಿಗೆ ಯುಗಾದಿ ಬೋನಸ್ ದೊರೆಯುತ್ತಿದೆ. ಅದಕ್ಕೆ ವಿರೋಧ ಇಲ್ಲ. ಅವರಿಗೆ ಸರಿಸಮನಾದ ವೇತನ ಸೌಲಭ್ಯಗಳನ್ನು ನೀಡಿ ಎಂಬುದಷ್ಟೇ ನಮ್ಮ ಒತ್ತಾಯ' ಎಂದರು.

'ಶಾಂತಿ, ಅಹಿಂಸೆ, ಶಿಸ್ತುಬದ್ಧವಾಗಿ ಚಳವಳಿ ನಡೆಯುತ್ತಿದೆ. ಬಸ್ ನಿಲ್ದಾಣಗಳಿಗೆ ಖಾಸಗಿ ಬಸ್‌ಗಳನ್ನು ತಂದು ಕಾರ್ಯಾಚರಣೆ ಮಾಡುತ್ತಿದ್ದರೂ ಅಡ್ಡಿಪಡಿಸಲು ಬಂದಿಲ್ಲ. ಶಾಂತಿಯುತ ಮುಷ್ಕರ ನಡೆಸುತ್ತಿರುವ ನೌಕರರ ವಿರುದ್ಧ ಕಠಿಣ ಕ್ರಮಗಳನ್ನು ಹೇರಬಾರದು. ಎಸ್ಮಾ, ಐಪಿಸಿ, ಸಿಆರ್‌ಪಿಸಿ ಸೆಕ್ಷನ್‌ಗಳನ್ನು ನಿಮ್ಮದೇ ನಾಗರಿಕರ ಮೇಲೆ ಹೇರುವ ಬೆದರಿಕೆ ಬೇಡ. ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ' ಎಂದರು.

ಮನೆ ಖಾಲಿ ಮಾಡಿಸುತ್ತಿಲ್ಲ: ಕಳಸದ



ಶಿವಯೋಗಿ ಸಿ. ಕಳಸದ

'ಕರ್ತವ್ಯಕ್ಕೆ ಗೈರಾಗಿರುವ ಸಿಬ್ಬಂದಿಗೆ ನೋಟಿಸ್ ನೀಡಿ ಕೆಲಸಕ್ಕೆ ಬರುವಂತೆ ಮನವೊಲಿಸುವ ಪ್ರಯತ್ನ ಮಾಡಲಾಗುತ್ತಿದೆ. ವಸತಿ ಗೃಹಗಳಲ್ಲಿ ಇರುವ ಸಿಬ್ಬಂದಿಯನ್ನು ಖಾಲಿ ಮಾಡಿಸುವ ಪ್ರಯತ್ನ ಮಾಡುತ್ತಿಲ್ಲ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಸ್ಪಷ್ಟಪಡಿಸಿದರು.

'ಮುಷ್ಕರದ ವೇಳೆ ಹೊರದರ ಮುಂದಿನ ದಿನಗಳಲ್ಲಿ ತೊಂದರೆಗೆ ಸಿಲುಕಬೇಕಾಗುತ್ತದೆ ಎಂದು ನೌಕರರು ಮತ್ತು ಅವರ ಕುಟುಂಬ ಸದಸ್ಯರಿಗೆ ಮನವರಿಕೆ ಮಾಡಲಾಗುತ್ತಿದೆ. ಮನೆ ಖಾಲಿ ಮಾಡಿಸುವ ರೀತಿಯ ಪ್ರಯತ್ನ ಆಗಿದ್ದರೆ, ಹಾಗೆ ಮಾಡದಂತೆ ಸೂಚನೆ ನೀಡಲಾಗುವುದು' ಎಂದು ಹೇಳಿದರು.

'ತರಬೇತಿ ಮತ್ತು ಪ್ರೊಬೇಷನರಿ ಅವಧಿಯಲ್ಲಿರುವ ಸಿಬ್ಬಂದಿಗೆ ನೋಟಿಸ್ ನೀಡಲಾಗಿದೆ. ಕರ್ತವ್ಯಕ್ಕೆ ಹಾಜರಾಗದಿದ್ದರೆ ಕಠಿಣ ಕ್ರಮ ಜರುಗಿಸುವ ಎಚ್ಚರಿಕೆ ನೀಡಲಾಗುತ್ತಿದೆ. ದೀರ್ಘ ಗೈರು ಹಾಜರಿಯಲ್ಲಿರುವ ಸಿಬ್ಬಂದಿಯನ್ನಷ್ಟೇ ವಜಾಗೊಳಿಸಲಾಗುತ್ತಿದೆ' ಎಂದರು.

ಕೆಎಸ್‌ಆರ್‌ಟಿಸಿ ಖಾಸಗೀಕರಣ ಹುನ್ನಾರ: ಬಡಗಲಪುರ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಾರಿಗೆ ನಿಗಮಗಳ ನೌಕರರ ಮುಷ್ಕರಕ್ಕೆ ಸರ್ಕಾರವೇ ನೇರ ಹೊಣೆಯಾಗಿದ್ದು, ಇದರ ಹಿಂದೆ, ಕೆಎಸ್‌ಆರ್‌ಟಿಸಿಯ ಖಾಸಗೀಕರಣದ ಹುನ್ನಾರ ಅಡಗಿದೆ' ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಆರೋಪಿಸಿದ್ದಾರೆ.

'ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಷ್ಕರ ನಡೆಸುವುದಾಗಿ ನೌಕರರು ಮುಂಚಿತವಾಗಿಯೇ ಮಾಹಿತಿ ನೀಡಿದ್ದರು. ಆದರೂ ಸರ್ಕಾರ ಅವರ ಜತೆ ಮಾತುಕತೆಗೆ ಮುಂದಾಗಿಲ್ಲ. ಮುಷ್ಕರ ನಡೆಸಲಿ ಎಂಬುದೇ ಸರ್ಕಾರದ ಉದ್ದೇಶವಾಗಿತ್ತು' ಎಂದು ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ದೂರಿದರು.

'ನೌಕರರನ್ನು ಎತ್ತಿಕಟ್ಟಿ ಸರ್ಕಾರವೇ ಮುಷ್ಕರ ನಡೆಸುತ್ತಿದೆ. ಸಾರಿಗೆ ನೌಕರರ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಿಲ್ಲ ಎಂಬ ಕಾರಣ ನೀಡಿ ಇಡೀ ನಿಗಮವನ್ನೇ ಖಾಸಗೀಕರಣಗೊಳಿಸುವ ಷಡ್ಯಂತ್ರ ನಡೆಯುತ್ತಿದೆ. ಸರ್ಕಾರವು ಖಾಸಗೀಕರಣಕ್ಕೆ ಮುಂದಾದರೆ ರೈತ ಸಂಘ ಹೋರಾಟ ನಡೆಸಲಿದೆ' ಎಂದು ಎಚ್ಚರಿಸಿದರು.

ಕುಸಿದು ಬಿದ್ದ ನಿರ್ವಾಹಕ

ಚಳ್ಳಕೆರೆ: ನಗರದ ಸರ್ಕಾರಿ ಸಾರಿಗೆ ಡಿಪೊದಲ್ಲಿ ಕೆಲಸ ಮಾಡುತ್ತಿದ್ದ ನಿರ್ವಾಹಕ ಶಿವರಾಜ್ ಶುಕ್ರವಾರ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬಸ್ಸಿನಲ್ಲೇ ಕುಸಿದು ಬಿದ್ದರು.

ತಕ್ಷಣವೇ ಇಲಾಖೆ ಸಿಬ್ಬಂದಿ ಶಿವರಾಜ್ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರು. ಭರಮಸಾಗರದವರಾದ ಶಿವರಾಜ್, ನಿರ್ವಾಹಕ ತರಬೇತಿ ಅವಧಿಯಲ್ಲಿದ್ದರು. ಅಧಿಕಾರಿಗಳ ಒತ್ತಡದ ಮೇರೆಗೆ ಸತತ ಮೂರು ದಿನಗಳಿಂದ ನಿರಂತರವಾಗಿ ಕರ್ತವ್ಯ ನಿರತರಾಗಿದ್ದರು. ಶುಕ್ರವಾರ ಬಸ್ ಚಿತ್ರದುರ್ಗದಿಂದ ಬಂದು ಚಳ್ಳಕೆರೆ ತಲುಪಿದಾಗ ಅಸ್ವಸ್ಥಗೊಂಡು ಬಸ್‌ನಲ್ಲೇ ಕುಸಿದು ಬಿದ್ದರು ಎಂದು ಮೂಲಗಳು ತಿಳಿಸಿವೆ.

ಬಸ್‌ಗೆ ಕಲ್ಲು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಸಂಡೂರು: ಇಲ್ಲಿನ ಬಸ್ ಘಟಕದಿಂದ ಗುರುವಾರ ತಾಲ್ಲೂಕಿನ ದೋಣಿಮಲೈ ಕಡೆಗೆ ಹೊರಟಿದ್ದ ಸಾರಿಗೆ ಸಂಸ್ಥೆ ಬಸ್ ಚಾಲಕನ ಕರ್ತವ್ಯಕ್ಕೆ ಅಡ್ಡಿ ಪಡಿಸಿ, ಬಸ್ಸಿನ ಮೇಲೆ ಕಲ್ಲು ತೂರಾಟ ಮಾಡಿ, ಗಾಜನ್ನು ಒಡೆದು ಹಾಕಿದ ಸಂಸ್ಥೆಯ ಇಬ್ಬರು ಚಾಲಕರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಆರೋಪಿಗಳಾದ ಶಿವಕುಮಾರ್ ಕಲ್ಲಹಳ್ಳಿ ಹಾಗೂ ನಾಗರಾಜ ಎಂಬುವವರ ವಿರುದ್ಧ ಸಂಡೂರಿನ ಪೊಲೀಸ್ ಠಾಣೆಯಲ್ಲಿ ಚಾಲಕ ದೇವೇಂದ್ರ ಮಡಿವಾಳ ದೂರು ದಾಖಲಿಸಿದ್ದಾರೆ.

'ಮುಷ್ಕರದ ಹೆಸರಿನಲ್ಲಿ ಯಾರೇ ಆಗಲಿ ಕಾನೂನನ್ನು ಕೈಗೆ ತೆಗೆದುಕೊಂಡು ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದಲ್ಲಿ ಅಥವಾ ಸರ್ಕಾರದ ಆಸ್ತಿಗೆ ನಷ್ಟ ಉಂಟು ಮಾಡಿದಲ್ಲಿ, ಅಂತಹವರ ವಿರುದ್ಧ ಇಲಾಖೆಯು ಕಠಿಣ ಕ್ರಮ ಕೈಗೊಳ್ಳುತ್ತದೆ' ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಸೈದುಲು ಅಡಾವತ್ ಎಚ್ಚರಿಕೆ ನೀಡಿದ್ದಾರೆ.



ಬಸ್ಸಿಗೆ ಚಾಲಕರಿಬ್ಬರು ಕಲ್ಲು ತೂರಿ, ಬಸ್ಸಿನ ಗಾಜನ್ನು ಒಡೆದಿರುವುದು

ಕಠಿಣ ನಿಲುವು ತಳೆದ ಸರ್ಕಾರ

ಒಂದನೇ ಪುಟದಿಂದ

ಈ ಪೈಕಿ ದೀರ್ಘ ಕಾಲದಿಂದ ಶಿಸ್ತು ಕ್ರಮಕ್ಕೆ ಶಿಫಾರಸುಗೊಂಡಿದ್ದ 130 ಜನರನ್ನು ಗುರುವಾರ ಸೇವೆಯಿಂದ ವಜಾಗೊಳಿಸಲಾಗಿದೆ.

ಕೆಎಸ್‌ಆರ್‌ಟಿಸಿಯ 96, ಬಿಎಂಟಿಸಿಯ 32 ಮತ್ತು ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯ 12 ಟ್ರೈನಿ ನೌಕರರ ನೇಮಕಾತಿ ಆದೇಶವನ್ನು ರದ್ದುಗೊಳಿಸುವ ತೀರ್ಮಾನವನ್ನು ಕೈಗೊಳ್ಳಲಾಗಿದೆ. ಈ ನೌಕರರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಿದ್ದ ಪ್ರಸ್ತಾವಗಳು ದೀರ್ಘ ಕಾಲದಿಂದ ಬಾಕಿ ಇದ್ದವು. ಮುಷ್ಕರ ಬೆಂಬಲಿಸಿ ಕರ್ತವ್ಯಕ್ಕೆ ಗೈರಾಗುತ್ತಿರುವ ನೌಕರರಿಗೆ ಕಠಿಣ ಸಂದೇಶ ರವಾನಿಸುವ ಉದ್ದೇಶದಿಂದ ಗುರುವಾರ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಾರಿಗೆ ಇಲಾಖೆ ಮೂಲಗಳು ತಿಳಿಸಿವೆ.

ಕಾಯಂ ಸಿಬ್ಬಂದಿಗೂ ನೋಟಿಸ್: ನಾಲ್ಕೂ ನಿಗಮಗಳ ಕಾಯಂ ನೌಕರರಿಗೂ ಶಿಸ್ತು ಕ್ರಮ ಜರುಗಿಸುವ ಎಚ್ಚರಿಕೆಯುಳ್ಳ ನೋಟಿಸ್ ಜಾರಿಮಾಡುವ ಪ್ರಕ್ರಿಯೆ ಆರಂಭವಾಗಿದೆ. ಗುರುವಾರ ಸಂಜೆ ನೂರಾರು ನೌಕರರ ಮನೆಗಳಿಗೆ ನೋಟಿಸ್ ತಲುಪಿಸಲಾಗಿದೆ.

ಬೆಳಿಗ್ಗೆ ನೌಕರರ ಮೊಬೈಲ್ ಸಂಖ್ಯೆಗೆ ಅಧಿಕೃತವಾಗಿ ಎಸ್‌ಎಂಎಸ್ ಕಳುಹಿಸಿದ್ದ ನಿಗಮದ ಅಧಿಕಾರಿಗಳು, ಸಂಜೆಯೊಳಕ್ಕೆ ಕರ್ತವ್ಯಕ್ಕೆ ಮರಳುವಂತೆ ಸೂಚಿಸಿದ್ದರು. ಸಂಜೆ ನೋಟಿಸ್ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಶುಕ್ರವಾರ ಮುಷ್ಕರದಲ್ಲಿ ಭಾಗಿಯಾಗಿರುವ ಬಹುತೇಕ ಎಲ್ಲ ನೌಕರರಿಗೂ ನೋಟಿಸ್ ತಲುಪಿಸಲು ಸಾರಿಗೆ ನಿಗಮಗಳು ಸಿದ್ಧತೆ ಮಾಡಿಕೊಂಡಿವೆ.

ವಸತಿ ಗೃಹ ತೆರವಿಗೆ ಸೂಚನೆ: ಮುಷ್ಕರನಿರತ ಸಾರಿಗೆ ನಿಗಮಗಳ ನೌಕರರ ಕುಟುಂಬಗಳನ್ನು ಸರ್ಕಾರಿ ವಸತಿ ಗೃಹಗಳಿಂದ ತೆರವು ಮಾಡುವುದಕ್ಕೂ ಸರ್ಕಾರ ಮುಂದಾಗಿದೆ. ಸಾರಿಗೆ ಇಲಾಖೆಯ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ನೌಕರರ ಕುಟುಂಬಗಳನ್ನು ಖುದ್ದಾಗಿ ಭೇಟಿ ಮಾಡಿರುವ ನಿಗಮಗಳ ಭದ್ರತಾ ಸಿಬ್ಬಂದಿ, ವಸತಿ ಗೃಹ ಖಾಲಿ ಮಾಡಬೇಕೆಂಬ ಸೂಚನೆಯುಳ್ಳ ನೋಟಿಸ್ ತಲುಪಿಸಿದ್ದಾರೆ.

ನಿವೃತ್ತರ ನೇಮಕಕ್ಕೆ ನಿರ್ಧಾರ: ಎರಡು ವರ್ಷದಿಂದ ಈಚೆಗೆ ನಿವೃತ್ತರಾಗಿದ್ದು, 62 ವರ್ಷ ಮೀರದ ನೌಕರರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡು ಬಸ್‌ಗಳನ್ನು ಓಡಿಸುವ ನಿರ್ಧಾರವನ್ನೂ ಸಾರಿಗೆ ಇಲಾಖೆ ಕೈಗೊಂಡಿದೆ. ನಿವೃತ್ತ ನೌಕರರ ನೇಮಕಾತಿಗೆ ಅರ್ಜಿ ಆಹ್ವಾನಿಸಿ ನಾಲ್ಕೂ ನಿಗಮಗಳು ಗುರುವಾರವೇ ಪ್ರಕಟಣೆ ಹೊರಡಿಸಿವೆ.

ಸಾರಿಗೆ ನಿಗಮಗಳ ನೌಕರರ ಮುಷ್ಕರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಗುರುವಾರ ಸಂಜೆ ಉನ್ನತಮಟ್ಟದ ಸಭೆ ನಿಗದಿಯಾಗಿತ್ತು. ಆದರೆ, ದಿಢೀರ್ ಸಭೆಯನ್ನು ರದ್ದುಪಡಿಸಲಾಯಿತು.

ಖಾಸಗಿ ಬಸ್‌ಗಳ ಅಬ್ಬರ: ಎರಡನೇ ದಿನವೂ ರಾಜ್ಯದಾದ್ಯಂತ ಖಾಸಗಿ ಬಸ್‌ಗಳ ಸಂಚಾರದ ಅಬ್ಬರ ಜೋರಾಗಿತ್ತು. ಬಹುತೇಕ ಕಡೆಗಳಲ್ಲಿ ಸರ್ಕಾರಿ ಬಸ್ ನಿಲ್ದಾಣಗಳಿಂದಲೇ ಖಾಸಗಿ ಬಸ್‌ಗಳ ಸಂಚಾರ ಮುಂದುವರಿದಿದೆ. ಸರ್ಕಾರಿ ಬಸ್‌ಗಳ ದರ ಪಟ್ಟಿಯನ್ನೇ ಪಾಲಿಸುವಂತೆ ನಿರ್ದೇಶನ ನೀಡಿದ್ದರೂ, ಹಲವು ಕಡೆಗಳಲ್ಲಿ ಪ್ರಯಾಣಿಕರಿಂದ ಹೆಚ್ಚು ಹಣ ವಸೂಲಿ ಮಾಡುತ್ತಿರುವ ದೂರುಗಳು ಮುಂದುವರಿದಿವೆ.

'ಮಾರ್ಚ್ 29ಕ್ಕೆ ಬಳಕೆಗೆ ಯೋಗ್ಯವಲ್ಲದ ಕಾರಣಕ್ಕೆ ಅನುಪಯುಕ್ತ ವಾಹನಗಳ ಪಟ್ಟಿಯಲ್ಲಿದ್ದ ಖಾಸಗಿ ಬಸ್‌ಗಳಿಗೂ ತೆರಿಗೆ ವಿನಾಯಿತಿಯೊಂದಿಗೆ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಖಾಸಗಿ ಪ್ರಯಾಣಿಕ ವಾಹನಗಳಿಗೆ ತುರ್ತಾಗಿ ರಹದಾರಿ ನೀಡಲು ಅವಕಾಶ ಕಲ್ಪಿಸಲಾಗಿದೆ. ಈವರೆಗೆ 100 ರಹದಾರಿಗಳನ್ನು ವಿತರಿಸಲಾಗಿದೆ' ಎಂದು ಸಾರಿಗೆ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

ಹಾಸನ, ಕಲಬುರ್ಗಿ, ಕೋಲಾರ, ಬೆಂಗಳೂರಿನ ಹೊರವಲಯ ಸೇರಿದಂತೆ ಕೆಲವು ಕಡೆಗಳಲ್ಲಿ ಮುಷ್ಕರದ ನಡುವೆಯೂ ಸಂಚರಿಸಿದ ಸಾರಿಗೆ ನಿಗಮಗಳ ಬಸ್‌ಗಳ ಮೇಲೆ ಕಲ್ಲು ತೂರಾಟ ನಡೆದಿದೆ. ಕೆಲವು ಬಸ್‌ಗಳ ಗಾಜುಗಳಿಗೆ ಹಾನಿಯಾಗಿದೆ.

ಸರ್ಕಾರ ನಡೆಸುವುದು ಗೊತ್ತಿದೆ: ಬಿಎಸ್‌ವೈ

ಒಂದನೇ ಪುಟದಿಂದ

ವಿಮಾನ ನಿಲ್ದಾಣದಲ್ಲಿ ಮಾತನಾಡಿದ ಅವರು 'ಮುಷ್ಕರ ನಡೆಯುತ್ತಿರುವುದರಿಂದ ವಿಮೆ ಹಾಗೂ ಪರ್ಮಿಟ್ ಅವಧಿ ಮುಗಿದ ಖಾಸಗಿ ವಾಹನಗಳನ್ನು ಓಡಿಸಲಾಗುತ್ತಿದೆಯಲ್ಲ' ಎನ್ನುವ ಪ್ರಶ್ನೆಗೆ ಅವರು ಸಿಟ್ಟಿನಿಂದಲೇ ಪ್ರತಿಕ್ರಿಯಿಸಿದರು.

'ಖಾಸಗಿ ವಾಹನಗಳು ದುಪ್ಪಟ್ಟು ಹಣ ವಸೂಲಿ ಮಾಡುತ್ತಿಲ್ಲ, ಒಂದು ವೇಳೆ ದುಪ್ಪಟ್ಟು ಹಣ ವಸೂಲಿ ಮಾಡಿದರೆ ಕ್ರಮ ಜರುಗಿಸುತ್ತೇವೆ. ವಿಶೇಷ ಸಂದರ್ಭಗಳಲ್ಲಿ ಪ್ರಯಾಣಿಕರ ಜವಾಬ್ದಾರಿ ನಾವು ತೆಗೆದುಕೊಳ್ಳುತ್ತೇವೆ. ಜನರು ಆತಂಕ ಪಡುವುದು ಬೇಡ' ಎಂದರು.

'ಹಠ ಬಿಟ್ಟು ಮಾತುಕತೆಗೆ ಬನ್ನಿ'

'ಸಾರಿಗೆ ನೌಕರರಿಗೆ ಆರನೇ ವೇತನ ಆಯೋಗದ ವರದಿಯಂತೆ ವೇತನ ನೀಡಲು ಸಾಧ್ಯವಿಲ್ಲವೆಂದು ಸರ್ಕಾರ ಈಗಾಗಲೇ ಸ್ಪಷ್ಟಪಡಿಸಿದೆ. ಆದರೆ, ಮಾತುಕತೆಗೆ ಸಿದ್ಧ. ಅವರು ಹಠ ಬಿಟ್ಟು ಬರಲಿ' ಎಂದು ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಂಜುಂ ಪರ್ವೇಜ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಪ್ರತಿಭಟನೆ ನಿರತರು ಮತ್ತು ಅದಕ್ಕೆ ಪ್ರಚೋದನೆ ನೀಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆ. ಎಸ್ಮಾ ಜಾರಿಗೆ ಅವಕಾಶವಿದೆ. ಜೂನ್‌ವರೆಗೆ ಎಸ್ಮಾ ಜಾರಿಯ ಅವಕಾಶವನ್ನು ಕಾರ್ಮಿಕ ಇಲಾಖೆ ನೀಡಿದೆ. ಪರಿಸ್ಥಿತಿ ಬಂದರೆ ಎಸ್ಮಾ ಜಾರಿ ಮಾಡಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

'ನೌಕರರಿಗೆ ತಕ್ಷಣ ಮಧ್ಯಂತರ ಪರಿಹಾರವಾಗಿ ಶೇ 10ರಷ್ಟು ವೇತನ ಪರಿಷ್ಕರಣೆಗೆ ನಾವು ಸಿದ್ಧ. ಮೊದಲಿಗೆ ಶೇ 8 ಉಳಿದ ಶೇ 2ರಷ್ಟು ನಂತರದ ದಿನಗಳಲ್ಲಿ ಹೆಚ್ಚಿಸಬಹುದು. ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ವೇತನ ಪರಿಷ್ಕರಿಸುವುದಾಗಿ ಮಾತು ಕೊಟ್ಟಿದ್ದೇವೆ' ಎಂದರು.

ನೆರೆ ರಾಜ್ಯಗಳ ನೆರವು ಯಾಚನೆ

'ಸಾರಿಗೆ ನಿಗಮಗಳ ನೌಕರರ ಮುಷ್ಕರದಿಂದ ಜನರಿಗೆ ತೊಂದರೆ ಆಗುವುದನ್ನು ತಪ್ಪಿಸಲು ನೆರೆಯ ತೆಲಂಗಾಣ, ಆಂಧ್ರಪ್ರದೇಶ ಮತ್ತು ತಮಿಳುನಾಡು ಸರ್ಕಾರಗಳಿಗೆ ಪತ್ರ ಬರೆದು ಕರ್ನಾಟಕಕ್ಕೆ ಹೆಚ್ಚುವರಿ ಬಸ್‌ಗಳನ್ನು ಓಡಿಸುವಂತೆ ಕೋರಲಾಗಿದೆ. ಎಲ್ಲ ಸರ್ಕಾರಗಳೂ ಸಕಾರಾತ್ಮಕವಾಗಿ ಸ್ಪಂದಿಸಿವೆ' ಎಂದು ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

ನೆರೆಯ ರಾಜ್ಯದ ಖಾಸಗಿ ಬಸ್‌ಗಳ ಮಾಲೀಕರು ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ ಬಸ್ ಓಡಿಸಲು ಆಸಕ್ತಿ ತೋರಿದರೆ ಅಂತಹ ವಾಹನಗಳ ಸೇವೆ ಪಡೆಯುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ.

ಕೋವಿಡ್ ನಿಯಂತ್ರಣ: ಮೈಸೂರು ಜಿಲ್ಲಾಧಿಕಾರಿ ಆದೇಶದ ಬೆನ್ನಲ್ಲೇ ಕಂದಾಯ ಇಲಾಖೆ ಸುತ್ತೋಲೆ

ಪ್ರತ್ಯೇಕ ಆದೇಶ ಹಿಂಪಡೆಯಲು ಸೂಚನೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಕೋವಿಡ್–19 ನಿಯಂತ್ರಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಕೆಲವು ನಿರ್ಬಂಧ ವಿಧಿಸಿದ ಬೆನ್ನಲ್ಲೇ, ಮುಖ್ಯಮಂತ್ರಿ ಅನುಮೋದನೆ ಹಾಗೂ ಮುಖ್ಯ ಕಾರ್ಯದರ್ಶಿ ಸಹಿ ಇಲ್ಲದೇ ಯಾವುದೇ ಆದೇಶ ಹೊರಡಿಸಬಾರದೆಂದು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಸುತ್ತೋಲೆ ಹೊರಡಿಸಿದೆ.

‘ಕೆಲ ಜಿಲ್ಲೆಗಳ ಆಡಳಿತವು ಪ್ರತ್ಯೇಕ ಸಲಹೆ/ಸೂಚನೆ ಹೊರಡಿಸುತ್ತಿರುವುದು ಕಂಡುಬಂದಿದೆ. ಇದು ಮುಖ್ಯಮಂತ್ರಿಯವರು ನೀಡಿರುವ ನಿರ್ದೇಶನಕ್ಕೆ ವ್ಯತಿರಿಕ್ತವಾಗಿದೆ’ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ವಿಪತ್ತು ನಿರ್ವಹಣೆ ಕಾರ್ಯಕಾರಿ ಸಮಿತಿ ಸದಸ್ಯ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಸುತ್ತೋಲೆಯಲ್ಲಿ ಹೇಳಿದ್ದಾರೆ.

‘ಕೋವಿಡ್ ನಿಯಂತ್ರಣ, ನಿರ್ವಹಣೆಗೆ ಸಂಬಂಧಿಸಿದಂತೆ ಇಲಾಖೆಗಳ ಮುಖ್ಯಸ್ಥರು, ಜಿಲ್ಲಾಡಳಿತ, ಪ್ರಾಧಿಕಾರ, ಪಾಲಿಕೆಗಳು, ಸ್ಥಳೀಯ ಸಂಸ್ಥೆಗಳು ಯಾವುದೇ ಪ್ರತ್ಯೇಕ ಆದೇಶ ಹೊರಡಿಸಬಾರದು. ಈಗಾಗಲೇ ಆದೇಶ ಹೊರಡಿಸಿದ್ದರೆ ತಕ್ಷಣವೇ ಹಿಂಪಡೆಯಬೇಕು. ನಿರ್ದಿಷ್ಟ ಪ್ರಸ್ತಾವಗಳಿದ್ದರೆ ಸರ್ಕಾರಕ್ಕೆ ಸಲ್ಲಿಸಬೇಕು. ಮುಖ್ಯಮಂತ್ರಿ ಹಾಗೂ ಮುಖ್ಯ ಕಾರ್ಯದರ್ಶಿ ಜೊತೆ ಸಮಾಲೋಚಿಸಿ ಕಂದಾಯ ಇಲಾಖೆಯಿಂದ (ವಿಪತ್ತು ನಿರ್ವಹಣೆ) ನಿರ್ದೇಶನ ನೀಡಲಾಗುವುದು’ ಎಂದಿದ್ದಾರೆ.



ಸಿಂಧೂರಿ

ಬೆಳಿಗ್ಗೆಯಷ್ಟೇ ಆದೇಶ: ಮೈಸೂರಿನ ಪ್ರವಾಸಿ ತಾಣಗಳು, ರೆಸಾರ್ಟ್‌ಗಳು, ಕನ್ವೆನ್ಷನ್ ಹಾಲ್, ಪಾರ್ಟಿ, ರಿಕ್ರಿಯೇಷನ್ ಕ್ಲಬ್ ಹಾಗೂ ಚಿತ್ರಮಂದಿರ ಪ್ರವೇಶಕ್ಕೆ ಕೋವಿಡ್–19 ನೆಗೆಟಿವ್ ವರದಿ ತರುವುದನ್ನು ಕಡ್ಡಾಯ ಮಾಡಿರುವುದಾಗಿ ಗುರುವಾರ ಬೆಳಿಗ್ಗೆಯಷ್ಟೇ ಜಿಲ್ಲಾಧಿಕಾರಿ ಸಿಂಧೂರಿ ಹೇಳಿದ್ದರು.

‘ಏ.10ರಿಂದ ಏ.20ರವರೆಗೆ ಈ ಆದೇಶ ಜಾರಿಯಲ್ಲಿರಲಿದೆ. ಈ ಸ್ಥಳಗಳಿಗೆ ಭೇಟಿ ನೀಡುವ 72 ಗಂಟೆಯೊಳಗೆ ಕೋವಿಡ್ ನೆಗೆಟಿವ್ ವರದಿ ಪಡೆದಿರಬೇಕು. ಆದರೆ, ಯಾವುದೇ ಪ್ರವಾಸಿ ತಾಣವನ್ನು ಮುಚ್ಚುವುದಿಲ್ಲ’ ಎಂದು ತಿಳಿಸಿದ್ದರು.

ವರದಿ ತರಲು ಸಲಹೆ: ಬೆಂಗಳೂರಿನಿಂದ ಮೈಸೂರಿಗೆ ಬರುವವರು ಕೋವಿಡ್–19 ನೆಗೆಟಿವ್ ವರದಿ ತರುವುದು ಸೂಕ್ತ ಎಂದು ಜಿಲ್ಲಾಧಿಕಾರಿ ಸಲಹೆ ನೀಡಿದ್ದರು.

‘ನಿತ್ಯ 5 ಸಾವಿರ ವಾಹನಗಳು ಬೆಂಗಳೂರಿನಿಂದ ಬರುತ್ತಿವೆ. ಸಾಲು ರಜೆ ಇರುವುದರಿಂದ ಹೆಚ್ಚಿನ ಪ್ರವಾಸಿಗರು ಬರುವ ಸಾಧ್ಯತೆ ಇದೆ. ಮೈಸೂರು ನಗರದಲ್ಲಿ ಕೋವಿಡ್ ಪ್ರಮಾಣ ಹೆಚ್ಚುತ್ತಿದ್ದು, ಗ್ರಾಮಾಂತರ ಪ್ರದೇಶದಲ್ಲಿ ಆ ಪ್ರಮಾಣ ಕಡಿಮೆ ಇದೆ. ಬೆಂಗಳೂರಿನಿಂದ ಬಂದವರು ಗ್ರಾಮಾಂತರ ಪ್ರದೇಶಕ್ಕೆ ಹೋಗಿ ಸೋಂಕು ಹರಡುವ ಸಾಧ್ಯತೆ ಇರುತ್ತದೆ. ಹೀಗಾಗಿ, ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿ ತಂದರೆ ಸೂಕ್ತವಾಗುತ್ತದೆ. ಈ ಸಲಹೆ ಪಾಲಿಸಿ ಸೋಂಕು ಹರಡುವುದನ್ನು ತಡೆಗಟ್ಟಲು ಸಹಕರಿಸಬೇಕು. ಕೇರಳ ಗಡಿ ಪ್ರದೇಶ ಬಾವಲಿ ಚೆಕ್‌ಪೋಸ್ಟ್‌ನಲ್ಲಿ ಮಾಡಿದಂತೆ ತಡೆದು ಪರಿಶೀಲಿಸುವುದಿಲ್ಲ’ ಎಂದಿದ್ದರು.

ಮುನ್ನೆಚ್ಚರಿಕೆ ಕ್ರಮ: ‘ಮೈಸೂರಿನಲ್ಲಿ ಸೋಂಕು ಹರಡುವುದನ್ನು ತಡೆಯಲು, ಮುನ್ನೆಚ್ಚರಿಕೆ ಕ್ರಮವಾಗಿ ಕೋವಿಡ್–19 ನೆಗೆಟಿವ್ ವರದಿ ತರುವ ಸಲಹೆ ನೀಡಲಾಗಿದೆ. ಇದಕ್ಕಾಗಿ ತಡೆದು ಪರಿಶೀಲಿಸುವುದಾಗಲಿ, ವರದಿ ಇಲ್ಲದಿದ್ದರೆ ವಾಪಸ್ ಕಳುಹಿಸುವುದಾಗಲಿ ಮಾಡುವುದಿಲ್ಲ’ ಎಂದೂ ಮೈಸೂರು ನಗರ ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ ಸ್ಪಷ್ಟಪಡಿಸಿದ್ದರು.

ತೀರ್ಥಹಳ್ಳಿ: ಜ್ವರದಿಂದ ಬಳಲುತ್ತಿದ್ದ ಮಹಿಳೆ ಸಾವು

ತೀರ್ಥಹಳ್ಳಿ: ಕೋವಿಡ್ ಲಸಿಕೆ ಪಡೆದಿದ್ದ ತಾಲ್ಲೂಕಿನ ಹಲವರಿಗೆ ತೀವ್ರ ಜ್ವರ, ವಾಂತಿ, ಭೇದಿ ಕಾಣಿಸಿಕೊಂಡಿದೆ.

ತಾಲ್ಲೂಕಿನ ಕುಡುಮಲ್ಲಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆಸರುಗುತ್ತಿ ಗ್ರಾಮದ ಸುಶೀಲಾ (55) ಗುರುವಾರ ಮೃತಪಟ್ಟಿದ್ದಾರೆ. ಮಾರ್ಚ್ 30ರಂದು ಪಟ್ಟಣದ ಜೆ.ಸಿ. ಆಸ್ಪತ್ರೆಯಲ್ಲಿ ಅವರು ಕೋವಿಡ್ ಲಸಿಕೆ ಪಡೆದಿದ್ದರು. ಲಸಿಕೆ ಪಡೆದ ದಿನದಿಂದ ಜ್ವರದಿಂದ ಬಳಲುತ್ತಿದ್ದರು.

‘ಲಸಿಕೆ ಪಡೆದ ಕೆಲವರಿಗೆ ಒಂದೆರಡು ದಿನಗಳ ಕಾಲ ಜ್ವರ ಕಂಡುಬಂದಿದೆ. ಮಹಿಳೆ ಮೃತಪಟ್ಟಿದ್ದರೂ ಸಾವಿಗೆ ಬೇರೆ ಕಾರಣ ಇರಬಹುದು. ಲಸಿಕೆ ಪಡೆದ ಯಾರಲ್ಲೂ ಹಲವು ದಿನಗಳು ಜ್ವರ ಕಾಣಿಸಿಕೊಂಡ ಉದಾಹರಣೆ ಇಲ್ಲ. ಮೃತರ ಮರಣೋತ್ತರ ಪರೀಕ್ಷೆಯ ನಂತರ ಮಾಹಿತಿ ದೊರಕಲಿದೆ’ ತಾಲ್ಲೂಕು ವೈದ್ಯಾಧಿಕಾರಿ ಡಾ.ಅನಿಕೇತನ್ ಪ್ರತಿಕ್ರಿಯಿಸಿದರು.

ತಾಲ್ಲೂಕಿನಲ್ಲಿ ಇದುವರೆಗೆ 10 ಸಾವಿರಕ್ಕೂ ಹೆಚ್ಚು ಜನರು ಲಸಿಕೆ ಹಾಕಿಸಿಕೊಂಡಿದ್ದಾರೆ. ಕೆಲವರಲ್ಲಿ ಜ್ವರ ಕಾಣಿಸಿಕೊಂಡು ಗುಣವಾಗಿದ್ದಾರೆ.

‘ಗಾಂಧಿ ಕುಟುಂಬ ಸದಸ್ಯರು ಲಸಿಕೆ ಏಕೆ ತೆಗೆದುಕೊಂಡಿಲ್ಲ ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಾಂಧಿ (ಸೋನಿಯಾ–ರಾಹುಲ್) ಕುಟುಂಬದ ಸದಸ್ಯರೂ ಯಾರೂ ಕೋವಿಡ್ ಲಸಿಕೆ ತೆಗೆದುಕೊಂಡಿಲ್ಲ’ ಎಂದು ಬಿಜೆಪಿ ಪ್ರಶ್ನಿಸಿದೆ.

‘ಸೋನಿಯಾ, ರಾಹುಲ್ ಮತ್ತು ಪ್ರಿಯಾಂಕ ಗಾಂಧಿ ಅವರಿಗೆ ಭಾರತೀಯ ಲಸಿಕೆ ಮೇಲೆ ನಂಬಿಕೆ ಇಲ್ಲವೇ? ಇಟಲಿಯ ಲಸಿಕೆಗಾಗಿ ಕಾದು ಕುಳಿತಿದ್ದಾರೆಯೇ’ ಎಂದು ಲೇವಡಿ ಮಾಡಿದೆ.

‘ಲಸಿಕೆಯ ಬಗ್ಗೆ ಇವರು ಜನರಲ್ಲಿ ಆತ್ಮ ವಿಶ್ವಾಸ ಮೂಡಿಸುವ ಬದಲು ದೇಶದ ಜನರ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿದೆ’ ಎಂದು ಹೇಳಿದೆ.

‘ಲಸಿಕೆ ತೆಗೆದುಕೊಳ್ಳದೇ ಕಾಂಗ್ರೆಸ್ ಪಕ್ಷಕ್ಕೆ ಮತಿಭ್ರಮಣೆಯಾಗಿದೆ. ಮೋದಿ ಸರ್ಕಾರ ದೇಶದಲ್ಲಿ ನಿತ್ಯ 34 ಲಕ್ಷ ಡೋಸ್ ಲಸಿಕೆ ವಿತರಿಸುತ್ತಿದೆ. ಇರುವರೆಗೆ 9 ಕೋಟಿಗೂ ಅಧಿಕ ಲಸಿಕೆ ವಿತರಿಸಲಾಗಿದ್ದು, ಜಾಗತಿಕ ಮಟ್ಟದಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಲಸಿಕೆ ಕೊರತೆ ನಿಜವಾಗಿದ್ದರೆ ಸಿದ್ದರಾಮಯ್ಯ ಲಸಿಕೆ ಪಡೆಯಲು ಸಾಧ್ಯವಿತ್ತೇ’ ಎಂದು ಪ್ರಶ್ನಿಸಿದೆ.

ಭಿನ್ನಾಭಿಪ್ರಾಯ ಇಲ್ಲ: ಅರುಣ್ ಸಿಂಗ್

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಸಚಿವ ಕೆ.ಎಸ್. ಈಶ್ವರಪ್ಪ ನಡುವಿನ ಭಿನ್ನಾಭಿಪ್ರಾಯ ಶಮನಗೊಂಡಿದೆ. ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳು ಇಲ್ಲ’ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿದರು.

ಮಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ‘ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ಖಚಿತ’ ಎಂದ ಅವರು, ‘ರಾಜ್ಯದಲ್ಲಿ ನಾಯಕತ್ವ ಬದಲಾವಣೆ’ ಬಗ್ಗೆ ಶಾಸಕ ಬಸನಗೌಡ ಯತ್ನಾಳ್ ನೀಡಿದ ಹೇಳಿಕೆ ಕುರಿತ ಪ್ರತಿಕ್ರಿಯಿಸಲು ನಿರಾಕರಿಸಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸರ್ಕಾರ ಸಜ್ಜು: ಸುರೇಶ್ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಪರಿಸ್ಥಿತಿಯಲ್ಲಿ ಕಳೆದ ಬಾರಿಯಂತೆ ಈ ಬಾರಿಯೂ ಎಲ್ಲ ಇಲಾಖೆಗಳು, ಸಂಘ–ಸಂಸ್ಥೆಗಳ ಸಹಕಾರ ಮತ್ತು ಸಮನ್ವಯದೊಂದಿಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ಸರ್ಕಾರ ಎಲ್ಲ ರೀತಿಯಲ್ಲಿ ಸಜ್ಜಾಗಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ಬೆಂಗಳೂರು ಉತ್ತರ, ದಕ್ಷಿಣ ಮತ್ತು ಗ್ರಾಮಾಂತರ ಜಿಲ್ಲೆಗಳ ಡಿಡಿಪಿಐ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ಎಸ್ಸೆಸ್ಸೆಲ್ಸಿ ಪಾಠ ಪ್ರವಚನಗಳ ಪ್ರಗತಿ ಮತ್ತು ಪರೀಕ್ಷಾ ಸಿದ್ಧತೆ ಕುರಿತ ಸಭೆಯಲ್ಲಿ ಮಾತನಾಡಿದ ಅವರು, ‘ಯಾವುದೇ ವಿದ್ಯಾರ್ಥಿ ಪರೀಕ್ಷೆಗೆ ಗೈರು ಹಾಜರಾಗದಂತೆ ಕ್ರಮ ವಹಿಸಬೇಕು’ ಎಂದು ಸಲಹೆ ನೀಡಿದರು.

‘ಪರೀಕ್ಷಾ ಕೊಠಡಿಯಲ್ಲಿ ಈ ಬಾರಿ ಗರಿಷ್ಠ 18 ರಿಂದ 20 ವಿದ್ಯಾರ್ಥಿಗಳಷ್ಟೆ ಇರಬೇಕು. ಪ್ರತಿ ಪರೀಕ್ಷಾ ಕೊಠಡಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮಂಡಳಿಯಿಂದಲೇ ಪ್ರತ್ಯೇಕ ಪ್ರಶ್ನೆಪತ್ರಿಕೆ ಬಂಡಲ್ ರವಾನಿಸಲು ಪರಿಶೀಲಿಸಲಾಗುತ್ತಿದೆ. ಮಳೆಗಾಲದಲ್ಲಿ ಈ ಬಾರಿ ಪರೀಕ್ಷೆ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಕಿರಿಕಿರಿ ಆಗದಂತೆ ಎಚ್ಚರವಹಿಸಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಸ್ವಚ್ಛತೆ, ಶೌಚಾಲಯ, ನೀರು, ಮಾಸ್ಕ್, ಸೋಪಿನ ವ್ಯವಸ್ಥೆ ಕುರಿತು ಗಮನಹರಿಸಬೇಕು’ ಎಂದು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

‘ಪರೀಕ್ಷೆಗೆ ನಿಗದಿಪಡಿಸಿದ್ದ ಪಠ್ಯಕ್ರಮದ ಪಾಠ ಬೋಧನೆ ಮುಗಿದು ಪುನರಾವರ್ತನೆ ಹಂತದಲ್ಲಿರುವ ಈ ಸಮಯದಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಪ್ರೇರೇಪಣೆಗೊಳಿಸಬೇಕು. ಪರೀಕ್ಷೆಯ ಫಲಿತಾಂಶ ಸಂಖ್ಯಾತ್ಮಕವಾಗಿರುವುದಕ್ಕಿಂತ ಗುಣಾತ್ಮಕವಾಗಿರುವಂತೆ ಮತ್ತು ಪರೀಕ್ಷಾ ಪಾವಿತ್ರ್ಯತೆ ಕಾಪಾಡಲು ಆದ್ಯತೆ ನೀಡಬೇಕು. ಪರೀಕ್ಷೆಯಲ್ಲಿ ಸಲ್ಲದ ವಿಷಯಗಳಿಗೆ ಆದ್ಯತೆ ನೀಡಿದ್ದು ಕಂಡುಬಂದರೆ, ಸಂಬಂಧಿಸಿದ ಡಿಡಿಪಿಐ ಹಾಗೂ ಬಿಇಒಗಳನ್ನು ಹೊಣೆಗಾರರನ್ನಾಗಿ ಮಾಡಿ ಶಿಸ್ತುಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.



ಎಸ್ ಸುರೇಶ್ ಕುಮಾರ್

‘ತಾಲ್ಲೂಕು ಇಲ್ಲವೇ ಹೋಬಳಿ ಮಟ್ಟದಲ್ಲಿ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರ ಸಭೆ ನಡೆಸಿ ವಿದ್ಯಾರ್ಥಿಗಳ ಅಭ್ಯಾಸದ ಪ್ರಗತಿ, ಪರೀಕ್ಷೆಗೆ ಪ್ರೇರೇಪಣೆಗೊಳಿಸಲು ಕ್ರಮ ಕೈಗೊಳ್ಳುವ ಕುರಿತು ಮಾಹಿತಿ ನೀಡಬೇಕು. ಪರೀಕ್ಷೆಗೆ ನೋಂದಣಿ ಮಾಡಿಸಿಯೂ ತರಗತಿಗೆ ಹಾಜರಾಗದಿರುವ ವಿದ್ಯಾರ್ಥಿಗಳ ಕುರಿತು ಮಾಹಿತಿ ಸಂಗ್ರಹಿಸಿ, ಪರೀಕ್ಷೆಗೆ ಹಾಜರಾಗುವಂತೆ ಗಮನಹರಿಸಬೇಕು. ಸರ್ಕಾರಿ ಶಾಲೆಗಳಲ್ಲಿ ಯಾವುದೇ ವಿಷಯದ ಶಿಕ್ಷಕರ ಕೊರತೆಯಿದ್ದರೆ ಅಕ್ಕಪಕ್ಕದ ಶಾಲೆಗಳ ಶಿಕ್ಷಕರನ್ನು ಆ ಶಾಲೆಗಳಿಗೆ ನಿಯೋಜಿಸುವ ಮೂಲಕ ಪಠ್ಯಕ್ರಮ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು’ ಎಂದರು.

‘ತರಗತಿಯಿಂದ ದೂರ ಇರುವ ಮಕ್ಕಳು ಯಾವ ಕಾರಣದಿಂದ ದೂರವಿದ್ದಾರೆ ಎಂಬ ಕುರಿತು ಕರೆ ಮಾಡಿ ಸಂಪರ್ಕಿಸಿ ಪರೀಕ್ಷೆ ಸಿದ್ಧತೆ ಕುರಿತು ಕೌನ್ಸೆಲಿಂಗ್ ಮಾಡಬೇಕು. ವಿದ್ಯಾರ್ಥಿಗಳು ಯಾವ ವಿಷಯದಲ್ಲಿ ಹಿಂದುಳಿಯುತ್ತಿದ್ದಾರೆ ಎಂಬುದನ್ನು ಈಗಿನಿಂದಲೇ ಅವರತ್ತ ವಿಶೇಷ ಗಮನ ಹರಿಸಿ ಉತ್ತಮ ಅಂಕಗಳನ್ನು ಪಡೆಯುವಂತೆ ಮಾಡಬೇಕು’ ಎಂದು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಹನಿಟ್ರ್ಯಾಪ್: ಎಸ್‌ಐಟಿ ಬದಲು ನ್ಯಾಯಾಲಯಕ್ಕೆ ಹಾಜರು ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳು ಹನಿಟ್ರ್ಯಾಪ್ ಆಯಾಮದಲ್ಲಿ ತನಿಖೆ ಚುರುಕುಗೊಳಿಸಿರುವ ಬೆನ್ನಲ್ಲೇ, ಪ್ರಕರಣಕ್ಕೆ ಸಂಬಂಧಪಟ್ಟ ಕೆಲ ವ್ಯಕ್ತಿಗಳು ನ್ಯಾಯಾಲಯದ ಎದುರು ಹಾಜರಾಗಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಆ ಬಗ್ಗೆ ವಕೀಲರ ಜೊತೆ ಮಾತುಕತೆ ನಡೆಸಿರುವುದಾಗಿ ಗೊತ್ತಾಗಿದೆ.

ಕಬ್ಬನ್ ಪಾರ್ಕ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣದಲ್ಲಿ ಸಂತ್ರಸ್ತೆ ವಿಚಾರಣೆ ಹಾಗೂ ವೈದ್ಯಕೀಯ ಪರೀಕ್ಷೆ ಮುಕ್ತಾಯವಾಗಿದೆ. ಆರೋಪಿಯೂ ಆದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಕೊರೊನಾ ಸೋಂಕು ತಗುಲಿದ್ದು, ಅವರು ಮನೆಯಲ್ಲೇ ಕ್ವಾರಂಟೈನ್‌ನಲ್ಲಿ ಇದ್ದಾರೆ. ಹೀಗಾಗಿ, ಈ ಪ್ರಕರಣದ ತನಿಖೆ ಸದ್ಯಕ್ಕೆ ನಿಧಾನಗತಿಯಲ್ಲಿ ಸಾಗಿದೆ.

ಸದಾಶಿವನಗರ ಠಾಣೆಯಲ್ಲಿ ರಮೇಶ ಜಾರಕಿಹೊಳಿ ದಾಖಲಿಸಿದ್ದ ಬ್ಲ್ಯಾಕ್‌ಮೇಲ್ ಹಾಗೂ ಸುಲಿಗೆ ಪ್ರಕರಣದ ತನಿಖೆ ಚುರುಕುಗೊಂಡಿದೆ. ತನಿಖಾಧಿಕಾರಿ ಧರ್ಮೇಂದ್ರ ನೇತೃತ್ವದ ತಂಡ, ಸಿ.ಡಿ. ಸೃಷ್ಟಿಯಲ್ಲಿ ಭಾಗಿಯಾಗಿದ್ದರು ಎನ್ನಲಾದ ವ್ಯಕ್ತಿಗಳಿಗಾಗಿ ಹೊರ ರಾಜ್ಯಗಳಲ್ಲಿ ಶೋಧ ಆರಂಭಿಸಿದ್ದಾರೆ. ಬಂಧನ ಭೀತಿಯಲ್ಲಿರುವ ವ್ಯಕ್ತಿಗಳು, ಎಸ್‌ಐಟಿ ಕೈಗೆ ಸಿಗುವುದಕ್ಕೂ ಮುನ್ನವೇ ಯುವತಿಯ ರೀತಿಯಲ್ಲೇ ನ್ಯಾಯಾಲಯದ ಎದುರು ಹಾಜರಾಗಲು ಯೋಚಿಸಿರುವುದಾಗಿ ಗೊತ್ತಾಗಿದೆ.

ವ್ಯವಸ್ಥಿತ ಸಂಚು: ‘ಸುದ್ದಿವಾಹಿನಿಯಲ್ಲಿ ಕೆಲಸ ಮಾಡಿ, ನಂತರ ಕೆಲಸ ಬಿಟ್ಟಿದ್ದ ಇಬ್ಬರು ವ್ಯವಸ್ಥಿತ ಸಂಚು ರೂಪಿಸಿ ಕೃತ್ಯ ಎಸಗಿದ್ದಾರೆ. ರಮೇಶ ಜಾರಕಿಹೊಳಿ ಅವರಿಗೆ ಪರಿಚಯವಿದ್ದ ಯುವತಿಯನ್ನು ಮುಂದಿಟ್ಟುಕೊಂಡು ಸಿ.ಡಿ ಮಾಡಿ ಬ್ಲ್ಯಾಕ್‌ಮೇಲ್ ಹಾಗೂ ಸುಲಿಗೆ ಮಾಡಿರುವ ಮಾಹಿತಿ ಇದೆ. ಅವರಿಬ್ಬರು ಸಿಕ್ಕರೆ ತನಿಖೆಗೆ ಹೊಸ ಆಯಾಮವೇ ಸಿಗಲಿದೆ’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

‘ಈಗಾಗಲೇ ಹಲವು ಬಾರಿ ನೋಟಿಸ್‌ಗಳನ್ನು ನೀಡಲಾಗಿದೆ. ಯಾರೊಬ್ಬರೂ ವಿಚಾರಣೆಗೆ ಹಾಜರಾಗಿಲ್ಲ. ಹೀಗಾಗಿ, ಅವರಿಗಾಗಿ ನಾವೇ ಹುಡುಕಾಟ ನಡೆಸುತ್ತಿದ್ದೇವೆ’ ಎಂದೂ ತಿಳಿಸಿವೆ.

ದಿನಕ್ಕೊಂದು ಸ್ಥಳ ಬದಲು: ಸಂತ್ರಸ್ತೆಗೆ ಕಾವಲು

ಸಿ.ಡಿ. ಪ್ರಕರಣ ಬೆಳಕಿಗೆ ಬಂದಾಗಿನಿಂದಲೂ ಅಜ್ಞಾತ ಸ್ಥಳದಲ್ಲಿದ್ದ ಸಂತ್ರಸ್ತೆ, ಮಾರ್ಚ್ 28ರಂದು ನ್ಯಾಯಾಲಯದ ಎದುರು ಹಾಜರಾಗಿ ಹೇಳಿಕೆ ನೀಡಿ ಎಸ್‌ಐಟಿ ತನಿಖಾಧಿಕಾರಿ ಎದುರು ವಿಚಾರಣೆ ಎದುರಿಸಿದ್ದಾರೆ. ಸಂತ್ರಸ್ತೆಯ ವೈದ್ಯಕೀಯ, ಧ್ವನಿ ಮಾದರಿ, ಹೇಳಿಕೆ ಸಂಗ್ರಹ ಸೇರಿ ತನಿಖಾ ಪ್ರಕ್ರಿಯೆಗಳು ಎಲ್ಲವೂ ಮುಗಿದಿವೆ.

ಬೆಂಗಳೂರಿನ ಪ್ರಮುಖ ಹೋಟೆಲ್‌ಗಳಲ್ಲಿ ಉಳಿದುಕೊಳ್ಳುತ್ತಿರುವ ಸಂತ್ರಸ್ತೆ, ದಿನಕ್ಕೊಂದು ಸ್ಥಳ ಬದಲಿಸುತ್ತಿದ್ದಾರೆ. ಸಂತ್ರಸ್ತೆಗೆ ಖಾಸಗಿ ಕಾವಲು ಸಹ ಇದ್ದು, ಪೊಲೀಸರ ಭದ್ರತೆಯನ್ನೂ ನೀಡಲಾಗಿದೆ. ಎಸ್‌ಐಟಿ ಅಧಿಕಾರಿಗಳು ಪುನಃ ವಿಚಾರಣೆಗೆ ಕರೆಯಬಹುದೆಂಬ ಕಾರಣಕ್ಕೆ ಸಂತ್ರಸ್ತೆ, ನಗರದಲ್ಲೇ ಇದ್ದಾರೆ.

ಲಸಿಕೆ ಸಂಗ್ರಹ ಇಲ್ಲ ಎಂಬುದನ್ನು ಅಲ್ಲಗಳೆದ ಕೇಂದ್ರ: ಮಹಾರಾಷ್ಟ್ರ–ಕೇಂದ್ರದ ನಡುವೆ ಮತ್ತೊಂದು ಜಟಾಪಟಿ

ಮಹಾರಾಷ್ಟ್ರದಲ್ಲಿ ಲಸಿಕೆ ಕೊರತೆ ತೀವ್ರ?

ಮುಂಬೈ (ಎಎಫ್‌ಪಿ): ಮಹಾರಾಷ್ಟ್ರದಲ್ಲಿ ಕೋವಿಡ್ ತಡೆ ಲಸಿಕೆ ಮತ್ತು ಕೋವಿಡ್ ಔಷಧ ರೆಮ್‌ಡಿಸಿವಿರ್ ಕೊರತೆ ತೀವ್ರವಾಗಿದೆ ಎಂದು ವರದಿಯಾಗಿದೆ.

4.8 ಲಕ್ಷ ಸೋಂಕು ಪ್ರಕರಣಗಳು ವರದಿಯಾಗಿರುವ ಮುಂಬೈನ ಹಲವು ಲಸಿಕೆ ಕೇಂದ್ರಗಳಲ್ಲಿ ಲಸಿಕೆಗಳು ಮುಗಿಯುತ್ತಾ ಬಂದಿವೆ. ಮುಂಬೈನ ಲೋಕಮಾನ್ಯ ತಿಲಕ್ ಜನರಲ್ ಆಸ್ಪತ್ರೆಯಲ್ಲಿ ಲಸಿಕೆ ಹಾಕಿಸುವಿಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ. ಧಾರಾವಿ ಕೊಳೆಗೇರಿಯ ಲಸಿಕೆ ಕೇಂದ್ರದಲ್ಲಿಯೂ ಭಾರಿ ಉದ್ದದ ಸಾಲು ಕಾಣಿಸಿದೆ. 440 ಜನರಿಗೆ ನೀಡುವಷ್ಟು ಲಸಿಕೆ ಮಾತ್ರ ಇದೆ ಎಂದು ಈ ಕೇಂದ್ರದ ಉಸ್ತುವಾರಿ ಹೊಣೆ ಹೊತ್ತಿರುವ ಅಫ್ರಿನಾ ಸುಲ್ತಾನಾ ಖಾನ್ ಹೇಳಿದ್ದಾರೆ. ಲಸಿಕೆ ಯಾವಾಗ ಪೂರೈಕೆ ಆಗಬಹುದು ಎಂಬ ಬಗ್ಗೆಯೂ ಹೆಚ್ಚಿನ ಮಾಹಿತಿ ಇಲ್ಲ ಎಂದು ಅವರು ತಿಳಿಸಿದ್ದಾರೆ.

ಆಂಧ್ರದಲ್ಲೂ ಸಮಸ್ಯೆ: ಆಂಧ್ರ ಪ್ರದೇಶದ ಒಂದು ಜಿಲ್ಲೆಯಲ್ಲಿ ಲಸಿಕೆ ಕೊರತೆಯಿಂದಾಗಿ ಲಸಿಕೆ ಹಾಕುವುದನ್ನು ನಿಲ್ಲಿಸಲಾಗಿದೆ. 'ಮುಂದಿನ ಎರಡು ದಿನಗಳಿಗೆ ಮಾತ್ರ ಲಸಿಕೆ ಸಂಗ್ರಹ ಇದೆ' ಎಂದು ಒಡಿಶಾದ ಆರೋಗ್ಯ ಸಚಿವರು ಬರೆದ ಪತ್ರದ ಪ್ರತಿಯು ಸುದ್ದಿಸಂಸ್ಥೆ ಎಎಫ್‌ಪಿಗೆ ಲಭ್ಯವಾಗಿದೆ.

ಈಗ ಇರುವ ಲಸಿಕೆ ಸಂಗ್ರಹವು 2–3 ದಿನಗಳಿಗಷ್ಟೇ ಸಾಕು. ತಕ್ಷಣವೇ ಒಂದು ಕೋಟಿ ಡೋಸ್ ಲಸಿಕೆ ಪೂರೈಸುವಂತೆ ಆಂಧ್ರ ಪ್ರದೇಶ ಸರ್ಕಾರವು ಕೇಂದ್ರವನ್ನು ಕೋರಿದೆ. 'ಮೂರು ಲಕ್ಷ ಡೋಸ್ ಲಸಿಕೆ ಸಂಗ್ರಹ ಇದೆ. ದಿನಕ್ಕೆ 1.4 ಲಕ್ಷ ಜನರಿಗೆ ಲಸಿಕೆ ಹಾಕಲಾಗುತ್ತಿದೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರಿಗೆ ತಿಳಿಸಿದ್ದಾರೆ.

ಕೇಂದ್ರ ನಕಾರ: ಲಸಿಕೆ ಕೊರತೆ ಇದೆ ಎಂಬ ವರದಿಗಳನ್ನು ಕೇಂದ್ರ ಸರ್ಕಾರವು ಅಲ್ಲಗಳೆದಿದೆ. ಮಹಾರಾಷ್ಟ್ರದಲ್ಲಿ ಲಸಿಕೆ ಕೊರತೆ ಇದೆ ಎಂಬುದು ಸಂಪೂರ್ಣ ನಿರಾಧಾರ. ಕೆಲವು ರಾಜ್ಯಗಳು ತಮ್ಮ ವೈಫಲ್ಯಗಳಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಮತ್ತು ಜನರಲ್ಲಿ ಭೀತಿ ಹುಟ್ಟಿಸಲು ಪ್ರಯತ್ನಿಸುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಹೇಳಿದ್ದಾರೆ. ಲಸಿಕೆ ಪೂರೈಕೆ ಮೇಲೆ ನಿರಂತರ ನಿಗಾ ಇದೆ. ಪೂರೈಕೆ ವಿಚಾರದಲ್ಲಿ ರಾಜ್ಯಗಳಿಗೆ ಮಾಹಿತಿಯನ್ನೂ ನೀಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಸಾಮರ್ಥ್ಯ ಹೆಚ್ಚಿಸಬೇಕಿದೆ: ಲಸಿಕೆ ತಯಾರಿಕಾ ಘಟಕಗಳ ಮೇಲೆ ಭಾರಿ ಒತ್ತಡ ಇದೆ. ತಯಾರಿಕಾ ಸಾಮರ್ಥ್ಯ ಹೆಚ್ಚಿಸಬೇಕಿದ್ದರೆ ಸರ್ಕಾರದಿಂದ ಆರ್ಥಿಕ ನೆರವು ಬೇಕು ಎಂದು ಜಗತ್ತಿನ ಅತ್ಯಂತ ದೊಡ್ಡ ಲಸಿಕೆ ತಯಾರಿಕಾ ಸಂಸ್ಥೆ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಹೇಳಿದೆ.

ಬಡ ದೇಶಗಳು ಮತ್ತು ಕೆಲವು ಶ್ರೀಮಂತ ದೇಶಗಳು ಲಸಿಕೆಗಾಗಿ ಸೀರಂ ಇನ್‌ಸ್ಟಿಟ್ಯೂಟ್ ಮೇಲೆ ಅವಲಂಬಿತವಾಗಿವೆ. ಆದರೆ, ದೇಶೀಯ ಬಳಕೆಗೆ ಲಸಿಕೆ ಲಭ್ಯವಾಗಬೇಕು ಎಂಬ ಕಾರಣಕ್ಕೆ ಲಸಿಕೆ ರಫ್ತಿನ ಮೇಲೆ ಸರ್ಕಾರವು ಕಳೆದ ತಿಂಗಳು ನಿರ್ಬಂಧ ಹೇರಿದೆ.

ಲಸಿಕೆ ಪೂರೈಕೆ ವಿಳಂಬವನ್ನು ಪ್ರಶ್ನಿಸಿ ಕೋವಿಶೀಲ್ಡ್ ಲಸಿಕೆ ಅಭಿವೃದ್ಧಿಪಡಿಸಿದ ಸಂಸ್ಥೆ ಆಸ್ಟ್ರಾಜೆನೆಕಾವು ತಮಗೆ ನೋಟಿಸ್ ನೀಡಿದೆ ಎಂದು ಸೀರಂನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆದಾರ್ ಪೂನಾವಾಲಾ ಹೇಳಿದ್ದಾರೆ. ಭಾರತದ ಪರಿಸ್ಥಿತಿ ಸುಧಾರಣೆಯಾದ ಬಳಿಕವೇ ಲಸಿಕೆ ರಫ್ತು ಸಾಧ್ಯ ಎಂದೂ ಅವರು ಹೇಳಿದ್ದಾರೆ.



ಮುಂಬೈನ ಕೋವಿಡ್ ಲಸಿಕೆ ನೀಡಿಕೆಯ ಕೇಂದ್ರದಲ್ಲಿ 'ಲಸಿಕೆ ಸಂಗ್ರಹ ಇಲ್ಲ' ಎಂಬ ಫಲಕವನ್ನು ಗುರುವಾರ ಹಾಕಲಾಗಿತ್ತು ಎಎಫ್‌ಪಿ ಚಿತ್ರ

ಮೋದಿಗೆ 2ನೇ ಡೋಸ್

ಪ್ರಧಾನಿ ನರೇಂದ್ರ ಮೋದಿ ಅವರು ಕೋವಿಡ್ ತಡೆ ಲಸಿಕೆಯ ಎರಡನೇ ಡೋಸ್ ಅನ್ನು ಗುರುವಾರ ಹಾಕಿಸಿಕೊಂಡಿದ್ದಾರೆ. 'ವೈರಸ್ ಅನ್ನು ಸೋಲಿಸುವ ಕೆಲವೇ ದಾರಿಗಳಲ್ಲಿ ಲಸಿಕೆ ಹಾಕಿಸಿಕೊಳ್ಳುವುದೂ ಒಂದು' ಎಂದು ಅವರು ಟ್ವೀಟ್ ಮಾಡಿದ್ದಾರೆ. ಲಸಿಕೆ ಹಾಕಿಸಿಕೊಳ್ಳುವ ಮೂಲಕ ಇತರರು ತಮ್ಮನ್ನು ಅನುಸರಿಸಬೇಕು ಎಂದು ಹೇಳಿದ್ದಾರೆ.

ರೆಮ್‌ಡಿಸಿವಿರ್‌ಗಾಗಿ ಸರತಿ ಸಾಲು

ಕೋವಿಡ್‌–19ರ ಚಿಕಿತ್ಸೆಯಲ್ಲಿ ಬಳಕೆಯಾಗುವ ರೆಮ್‌ಡಿಸಿವಿರ್ ಔಷಧದ ದರದ ಮೇಲೆ ನಿಯಂತ್ರಣ ಹೇರಲು ಮಹಾರಾಷ್ಟ್ರ ಸರ್ಕಾರ ಸಜ್ಜಾಗಿದೆ. ಈ ಔಷಧವನ್ನು ಜಾಗರೂಕತೆಯಿಂದ ಬಳಸಿ ಎಂದು ವೈದ್ಯರನ್ನು ಕೋರಲಾಗಿದೆ. ಕಾಳಸಂತೆಯಲ್ಲಿ ಮಾರಾಟ ಆಗುವುದನ್ನು ತಡೆಯುವ ದಿಸೆಯಲ್ಲಿಯೂ ಕೆಲಸ ಮಾಡಲು ಸರ್ಕಾರ ಮುಂದಾಗಿದೆ.

ಮಹಾರಾಷ್ಟ್ರದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆಯು ಸುಮಾರು ಐದು ಲಕ್ಷ ಇದೆ. ಹಾಗಾಗಿ, ರಾಜ್ಯದಲ್ಲಿ ರೆಮ್‌ಡಿಸಿವಿರ್‌ಗೆ ಬೇಡಿಕೆ ಹೆಚ್ಚಿದೆ. ಔಷಧ ಅಂಗಡಿಗಳ ಮುಂದೆ ಭಾರಿ ಉದ್ದದ ಸಾಲುಗಳು ಕಾಣಿಸಿವೆ. ಈ ಸಾಲುಗಳ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಬಿಕ್ಕಟ್ಟು ನಿರ್ವಹಣೆಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ರಾಜೇಶ್ ಟೋಪೆ, ವೈದ್ಯಕೀಯ ಶಿಕ್ಷಣ ಸಚಿವ ಅಮಿತ್ ದೇಶಮುಖ್ ಮತ್ತು ಆಹಾರ ಮತ್ತು ಔಷಧ ನಿರ್ವಹಣೆ ಸಚಿವ ಡಾ.ರಾಜೇಂದ್ರ ಶಿಂಗ್ನೆ ಅವರು ಸಭೆ ನಡೆಸಿದ್ದಾರೆ. ರೆಮ್‌ಡಿಸಿವಿವ್ ಇಂಜೆಕ್ಷನ್‌ಗಳು ಕಾಳಸಂತೆಯಲ್ಲಿ ₹3,000ದಿಂದ ₹5,000ಕ್ಕೆ ಮಾರಾಟ ಆಗುತ್ತಿವೆ ಎಂದು ಶಿಂಗ್ನೆ ಹೇಳಿದ್ದಾರೆ.

5 ಲಕ್ಷ ಡೋಸ್ ಪೋಲು: ಜಾವಡೇಕರ್

ನವದೆಹಲಿ (ಪಿಟಿಐ): ರಾಜ್ಯ ಸರ್ಕಾರವು ಲಸಿಕೆ ಅಭಿಯಾನವನ್ನು ಸರಿಯಾಗಿ ಯೋಜಿಸದ ಕಾರಣ ಐದು ಲಕ್ಷ ಡೋಸ್‌ಗೂ ಅಧಿಕ ಲಸಿಕೆ ಪೋಲಾಗಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಗುರುವಾರ ಆರೋಪಿಸಿದ್ದಾರೆ.

ಲಸಿಕೆಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಲಾಗಿದೆ. ಮಹಾರಾಷ್ಟ್ರದಲ್ಲಿ 23 ಲಕ್ಷ ಡೋಸ್ ಲಸಿಕೆ ಇದೆ ಎಂದು ಮಹಾರಾಷ್ಟ್ರದವರೇ ಆದ ಜಾವಡೇಕರ್ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದ್ದಾರೆ. ಮಹಾರಾಷ್ಟ್ರದ ಬಳಿ ಈಗ ಇರುವ ಲಸಿಕೆಯು ಐದರಿಂದ ಆರು ದಿನಗಳಿಗೆ ಸಾಕು. ಜಿಲ್ಲೆ ಮತ್ತು ಗ್ರಾಮಗಳಿಗೆ ಲಸಿಕೆ ಹಂಚಿಕೆಯು ರಾಜ್ಯ ಸರ್ಕಾರದ ಹೊಣೆ ಎಂದು ಅವರು ಹೇಳಿದ್ದಾರೆ.

> **ಲಸಿಕೆಯಲ್ಲಿ ಕೇಂದ್ರ ತಾರತಮ್ಯ ಮಾಡುತ್ತಿದೆ ಎಂಬುದು ಬರೇ ಪ್ರಹಸನ. ಅತಿ ಹೆಚ್ಚು ಲಸಿಕೆ ಹಂಚಿಕೆ ಮಾಡಲಾದ ಮೂರು ರಾಜ್ಯಗಳಲ್ಲಿ ಮಹಾರಾಷ್ಟ್ರ ಮತ್ತು ರಾಜಸ್ಥಾನ ಇವೆ**
> **ಹರ್ಷವರ್ಧನ್,** ಕೇಂದ್ರ ಆರೋಗ್ಯ ಸಚಿವ

ಕೇರಳ ಸಿಎಂ ಪಿಣರಾಯಿ ವಿಜಯನ್‌ಗೆ ಕೋವಿಡ್

ಸುದ್ದಿ 2 ನಿಮಿಷ

ತಿರುವನಂತಪುರಂ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಕೊರೊನಾ ವೈರಸ್ ಸೋಂಕು ತಗುಲಿರುವುದು ದೃಢಪಟ್ಟಿರುವುದಾಗಿ ಮುಖ್ಯಮಂತ್ರಿ ಕಾರ್ಯಾಲಯ ಗುರುವಾರ ಪ್ರಕಟಣೆಯಲ್ಲಿ ತಿಳಿಸಿದೆ.



ಕಣ್ಣೂರ್‌ನ ಸ್ವಗ್ರಾಮದಲ್ಲಿ ಪಿಣರಾಯಿ ವಿಜಯನ್ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ಅವರಿಗೆ ಸೋಂಕು ಲಕ್ಷಣಗಳು ಕಂಡು ಬಂದಿಲ್ಲ, ಅವರನ್ನು ಕೋಯಿಕೋಡ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಕರೆತರಲಾಗುತ್ತದೆ ಎಂದು ಸಿಎಂ ಕಾರ್ಯಾಲಯ ಪ್ರಕಟಿಸಿದೆ. ಮಾರ್ಚ್ 3ರಂದು ಸಿಎಂ ಪಿಣರಾಯಿ ವಿಜಯನ್ ಕೋವಿಡ್ ಲಸಿಕೆಯ ಮೊದಲ ಡೋಸ್ ತೆಗೆದುಕೊಂಡಿದ್ದರು.

'ನನಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇತ್ತೀಚೆಗೆ ನನ್ನ ಸಂಪರ್ಕಕ್ಕೆ ಬಂದಿದ್ದವರು ಪರೀಕ್ಷೆಗೆ ಒಳಗಾಗಿ' ಎಂದು ಪಿಣರಾಯಿ ವಿಜಯನ್ ಕೋರಿದ್ದಾರೆ.

'ಲಾಕ್‌ಡೌನ್: ಆರ್ಥಿಕತೆಗೆ ಮಾರಕ'

ಅಹಮದಾಬಾದ್ (ಪಿಟಿಐ): 'ದೇಶದಲ್ಲಿ ಕೋವಿಡ್‌ನ ಎರಡನೇ ಅಲೆ ತೀವ್ರವಾಗುತ್ತಿರುವ ಸಂದರ್ಭದಲ್ಲಿ ಎರಡನೇ ಲಾಕ್‌ಡೌನ್ ಹೇರುವ ಬಗ್ಗೆ ಚರ್ಚೆ ನಡೆಯುತ್ತಿದೆ. ಎರಡನೇ ಲಾಕ್‌ಡೌನ್ ಹೇರಿದರೆ, ದೇಶದ ಉದ್ಯಮ ವಲಯ ಕುಸಿಯುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಇದು ದೇಶದ ಆರ್ಥಿಕತೆಗೆ ಮಾರಕವಾಗಲಿದೆ' ಎಂದು ನಿಪ್ಪಾನ್ ಪೇಂಟ್ಸ್ ಇಂಡಿಯಾದ ಅಧ್ಯಕ್ಷ ಶರದ್ ಮಲ್ಹೋತ್ರಾ ಕಳವಳ ವ್ಯಕ್ತಪಡಿಸಿದ್ದಾರೆ.

'ಮೊದಲ ಲಾಕ್‌ಡೌನ್ ಸಂದರ್ಭದಲ್ಲಿ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ವಾಪಸಾಗಲು ಬಹಳ ಕಷ್ಟಪಟ್ಟಿದ್ದರು. ಈಗ ಮತ್ತೆ ಲಾಕ್‌ಡೌನ್ ಭೀತಿ ಎದುರಾಗಿರುವ ಕಾರಣ, ವಲಸೆ ಕಾರ್ಮಿಕರು ಈಗಾಗಲೇ ತಮ್ಮ ಊರುಗಳಿಗೆ ವಾಪಸಾಗಲು ಆರಂಭಿಸಿದ್ದಾರೆ' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

'ಮೊದಲ ಲಾಕ್‌ಡೌನ್‌ನಿಂದ ನಿರ್ಮಾಣ ವಲಯದ ಉದ್ಯಮಗಳು ಇನ್ನೂ ಚೇತರಿಸಿಕೊಂಡಿಲ್ಲ. ಈ ತ್ರೈಮಾಸಿಕದ ವಹಿವಾಟು ಉತ್ತೇಜನಕಾರಿಯಾಗಿಲ್ಲ. ಈಗ ಮತ್ತೊಮ್ಮೆ ಲಾಕ್‌ಡೌನ್ ಹೇರಿದರೆ, ಇವೆಲ್ಲವುಗಳಿಂದ ಚೇತರಿಸಿಕೊಳ್ಳಲು ಇನ್ನೂ 6-9 ತಿಂಗಳು ಅಥವಾ ವರ್ಷವೇ ಬೇಕಾಗಬಹುದು' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಸೀರಂ ಮನವಿ ತಿರಸ್ಕೃತ

ನವದೆಹಲಿ (ಪಿಟಿಐ): ಆಸ್ಟ್ರಾಜೆನೆಕಾ ಕಂಪನಿಯ ಕೋವಿಡ್‌-19 ಲಸಿಕೆ ಕೋವಿಶೀಲ್ಡ್‌ನ ಬಳಕೆ ಯೋಗ್ಯ ಅವಧಿಯನ್ನು 6 ತಿಂಗಳಿನಿಂದ 9 ತಿಂಗಳಿಗೆ ಹೆಚ್ಚಿಸಬೇಕು ಎಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸಲ್ಲಿಸಿದ್ದ ಮನವಿಯನ್ನು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ತಿರಸ್ಕರಿಸಿದೆ.

ಆಸ್ಟ್ರಾಜೆನೆಕಾ ಕಂಪನಿಯ ಕೋವಿಶೀಲ್ಡ್ ಲಸಿಕೆಯ ಬಳಕೆ ಅವಧಿ ಆರು ತಿಂಗಳು ಮಾತ್ರ. ಇದನ್ನು 9 ತಿಂಗಳಿಗೆ ಹೆಚ್ಚಿಸಬೇಕು ಎಂದು ಮನವಿ ಸಲ್ಲಿಸಲಾಗಿದೆ. ಆದರೆ ಇದಕ್ಕೆ ಪೂರಕವಾಗಿ ಯಾವುದೇ ದತ್ತಾಂಶಗಳನ್ನು ಒದಗಿಸಿಲ್ಲ. ಹೀಗಾಗಿ ಅವಧಿ ಏರಿಕೆ ಮಾಡಲು ಸಾಧ್ಯವಿಲ್ಲ ಎಂದು ಡಬ್ಲ್ಯುಎಚ್‌ಒ ಹೇಳಿದೆ. ಈ ಬಗ್ಗೆ ಭಾರತದ ಪ್ರಧಾನ ಔಷಧ ನಿಯಂತ್ರಕರ (ಡಿಸಿಜಿಐ) ಜತೆ ಚರ್ಚೆ ನಡೆಸುವುದಾಗಿಯೂ ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಕೋಬ್ರಾ ಕಮಾಂಡೊ ರಾಕೇಶ್ವರ ಸಿಂಗ್ ಬಿಡುಗಡೆ

ರಾಯಪುರ: ನಕ್ಸಲರು ಅಪಹರಿಸಿದ್ದ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಕೋಬ್ರಾ ಕಮಾಂಡೊ ರಾಕೇಶ್ವರ್ ಸಿಂಗ್ ಮಿನ್ಹಾಸ್ ಅವರನ್ನು ಗುರುವಾರ ಬಿಡುಗಡೆಗೊಳಿಸಲಾಗಿದೆ.


ರಾಕೇಶ್ವರ್ ಸಿಂಗ್ ಮಿನ್ಹಾಸ್

ಪೊಲೀಸರು ಈ ಮಾಹಿತಿಯನ್ನು ದೃಢಪಡಿಸಿದ್ದಾರೆ. ಮಿನ್ಹಾಸ್ ಅವರು 210ನೇ ಕೋಬ್ರಾ ತುಕಡಿಯ ಸದಸ್ಯರಾಗಿದ್ದಾರೆ. 'ಕೋಬ್ರಾ' ಎಂಬುದು ಸಿಆರ್‌ಪಿಎಫ್‌ನ ಮುಂಚೂಣಿ ಘಟಕವಾಗಿದೆ.

ಏಪ್ರಿಲ್ 3ರಂದು ರಾಯಪುರ ಮತ್ತು ಬಿಜಾಪುರ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಭದ್ರತಾ ಸಿಬ್ಬಂದಿ ಮೇಲೆ ಮಾವೋವಾದಿಗಳು ಗುಂಡಿನ ದಾಳಿ ನಡೆಸಿದ್ದರು. ಅದೇ ದಿನದಿಂದ ಮಿನ್ಹಾಸ್ ನಾಪತ್ತೆಯಾಗಿದ್ದರು. ಬಳಿಕ ಇವರನ್ನು ಅಪಹರಿಸಲಾಗಿದೆ ಎಂದು ನಕ್ಸಲರು ಹೇಳಿಕೊಂಡಿದ್ದರು.

ಅಹಮದಾಬಾದ್, ಸೂರತ್, ಮುಂಬೈ ತೊರೆಯುತ್ತಿರುವ ವಲಸೆ ಕಾರ್ಮಿಕರು

ಲಾಕ್‌ಡೌನ್ ಭೀತಿ: ಮತ್ತೆ ಮರುವಲಸೆ

ಅಹಮದಾಬಾದ್ (ಪಿಟಿಐ): ಗುಜರಾತ್‌ನಲ್ಲಿ ಮತ್ತೆ ಲಾಕ್‌ಡೌನ್ ಹೇರಬಹುದು ಎಂಬ ಭೀತಿಯಿಂದ ವಲಸೆ ಕಾರ್ಮಿಕರು ರಾಜ್ಯದಿಂದ ಹೊರನಡೆಯುತ್ತಿದ್ದಾರೆ. ಅಹಮದಾಬಾದ್ ಮತ್ತು ಸೂರತ್‌ನಲ್ಲಿ ನೆಲೆಸಿರುವ ಉತ್ತರ ಪ್ರದೇಶ ಮತ್ತು ಬಿಹಾರದ ವಲಸೆ ಕಾರ್ಮಿಕರು, ತಮ್ಮ ಊರುಗಳಿಗೆ ವಾಪಸಾಗುತ್ತಿದ್ದಾರೆ.

ಎರಡೂ ನಗರಗಳಲ್ಲಿ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆ ತೀವ್ರಮಟ್ಟದಲ್ಲಿ ಏರಿಕೆಯಾದ ಕಾರಣ, ಲಾಕ್‌ಡೌನ್ ಏಕೆ ಹೇರಬಾರದು ಎಂದು ಗುಜರಾತ್ ಹೈಕೋರ್ಟ್ ಈಚೆಗೆ ಸರ್ಕಾರವನ್ನು ಕೇಳಿತ್ತು. ಇದರ ಬೆನ್ನಲ್ಲೇ ಲಾಕ್‌ಡೌನ್ ಹೇರಿಕೆಯಾಗುವ ಭೀತಿ ಎದುರಾಗಿದೆ. ಒಮ್ಮೆ ಲಾಕ್‌ಡೌನ್ ಜಾರಿಯಾದರೆ, ಪ್ರಯಾಣವನ್ನು ನಿರ್ಬಂಧಿಸಲಾಗುತ್ತದೆ. ಉದ್ಯೋಗವೂ ಇಲ್ಲದಾಗುತ್ತದೆ. ಹೀಗಾಗಿ ಲಾಕ್‌ಡೌನ್ ಹೇರಿಕೆಯಾಗುವ ಮುನ್ನವೇ ತಮ್ಮ ಊರುಗಳನ್ನು ಸೇರಿಕೊಳ್ಳಲು ವಲಸೆ ಕಾರ್ಮಿಕರು ಮುಂದಾಗಿದ್ದಾರೆ.

'ಕಾರ್ಮಿಕರ ಮರುವಲಸೆ ದೊಡ್ಡಮಟ್ಟದಲ್ಲಿ ನಡೆಯುತ್ತಿಲ್ಲ. ಕೆಲವು ಕಾರ್ಮಿಕರು ಊರು ಬಿಡುತ್ತಿದ್ದಾರೆ ಅಷ್ಟೇ. ಹೀಗಾಗಿ ಅಂತಹ ದೊಡ್ಡ ಸಮಸ್ಯೆ ಇಲ್ಲ. ಹೀಗೆ ಹೊರಟಿರುವ ಕಾರ್ಮಿಕರಿಗೆ ಎಲ್ಲಿಯೂ ತೊಂದರೆ ಆಗಬಾರದು ಎಂದು ಎಲ್ಲಾ ಜಿಲ್ಲಾಡಳಿತಗಳಿಗೆ ಸೂಚನೆ ನೀಡಿದ್ದೇವೆ. ರೈಲು ಮತ್ತು ಬಸ್ ಸೇವೆ ಜಾರಿಯಲ್ಲಿರುವ ಕಾರಣ ಪ್ರಯಾಣಕ್ಕೆ ತೊಂದರೆ ಆಗಲಾರದು' ಎಂದು ಗುಜರಾತ್ ಕಾರ್ಮಿಕ ಇಲಾಖೆಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ವಿಪುಲ್ ಮಿತ್ರಾ ಮಾಹಿತಿ ನೀಡಿದ್ದಾರೆ.


ಅಹಮದಾಬಾದ್‌ನ ಕಾಲುಪುರ ರೈಲು ನಿಲ್ದಾಣದಲ್ಲಿ ಉತ್ತರ ಪ್ರದೇಶ ಮತ್ತು ಬಿಹಾರದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ಖರೀದಿಸುತ್ತಿದ್ದಾರೆ ಎಂದು ಪಶ್ಚಿಮ ವಲಯ ರೈಲ್ವೆ ಬಳಕೆದಾರರ ಸಮಿತಿ ಹೇಳಿದೆ.

'ಸೂರತ್‌ನಲ್ಲಿರುವ ವಲಸೆ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ನಗರವನ್ನು ತೊರೆಯುತ್ತಿದ್ದಾರೆ. ಬಹಳ ಮಂದಿ ಬಸ್‌ಗಳಲ್ಲಿ ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್‌ಗಳಿಗೆ ಟಿಕೆಟ್ ಖರೀದಿಸಿದ್ದಾರೆ. ಲಾಕ್‌ಡೌನ್ ಭೀತಿಯಿಂದ ಕಾರ್ಮಿಕರು ಸೂರತ್ ತೊರೆಯುತ್ತಿದ್ದಾರೆ' ಎಂದು ಸೂರತ್ ಐಷಾರಾಮಿ ಬಸ್ ಆಪರೇಟರ್‌ಗಳ ಸಂಘಟನೆ ಅಧ್ಯಕ್ಷ ದಿನೇಶ್ ಅಂಧಾನ್ ಮಾಹಿತಿ ನೀಡಿದ್ದಾರೆ.


ಮುಂಬೈನಿಂದ ಲಖನೌಗೆ ರೈಲಿನ ಮೂಲಕ ಬಂದಿಳಿದ ವಲಸೆ ಕಾರ್ಮಿಕರ ಕುಟುಂಬಗಳು –ಪಿಟಿಐ ಚಿತ್ರ

ಕರ್ಫ್ಯೂ, ನಿರ್ಬಂಧ ಸಡಿಲಿಸಲು ಮನವಿ

- ದೆಹಲಿ ಗಡಿಗೆ ಹೊಂದಿಕೊಂಡಿರುವ ಉತ್ತರ ಪ್ರದೇಶದ ನೋಯ್ಡಾ, ಗಾಜಿಯಾಬಾದ್‌ನಲ್ಲಿ ಗುರುವಾರ ರಾತ್ರಿಯಿಂದ ಅನ್ವಯವಾಗುವಂತೆ ಏಪ್ರಿಲ್ 17ರವರೆಗೆ ರಾತ್ರಿ ಕರ್ಫ್ಯೂ ಹೇರಲಾಗಿದೆ. ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ ಜಾರಿಯಲ್ಲಿ ಇರಲಿದೆ
- ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಏರುತ್ತಲೇ ಇರುವ ಕಾರಣ ಲಖನೌನಲ್ಲಿ ರಾತ್ರಿ ಕರ್ಫ್ಯೂ ಹೇರಲಾಗಿದೆ. ಏಪ್ರಿಲ್ 30ರವರೆಗೆ ಕರ್ಫ್ಯೂ ಜಾರಿಯಲ್ಲಿ ಇರಲಿದೆ
- ಅಸ್ಸಾಂನಲ್ಲಿ ಲಾಕ್‌ಡೌನ್ ಅಥವಾ ರಾತ್ರಿ ಕರ್ಫ್ಯೂ ವಿಧಿಸುವ ಯಾವುದೇ ಚಿಂತನೆ ಇಲ್ಲ ಎಂದು ಅಸ್ಸಾಂ ಸರ್ಕಾರ ಹೇಳಿದೆ
- ಮಹಾರಾಷ್ಟ್ರದಲ್ಲಿ ಮರಾಠಿಗರ ನೂತನ ವರ್ಷ ಗುಡಿ ಪಾಡ್ವಾ ಸಮೀಪಿಸುತ್ತಿದೆ. ಹಬ್ಬದ ಈ ಋತುವಿನಲ್ಲಿ ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಬೇಕು ಎಂದು ಮಹಾರಾಷ್ಟ್ರ ಆಭರಣ ವ್ಯಾಪಾರಿಗಳ ಸಂಘಟನೆ ಸರ್ಕಾರಕ್ಕೆ ಮನವಿ ಸಲ್ಲಿಸಿದೆ



ತಾರತಮ್ಯದ ಆರೋಪ

ಮುಂಬೈ/ದೆಹಲಿ: ವಿವಿಧ ರಾಜ್ಯಗಳಿಗೆ ಕೋವಿಡ್‌-19 ಲಸಿಕೆ ಹಂಚಿಕೆ ಬಗ್ಗೆ ಮಹಾರಾಷ್ಟ್ರ ಸರ್ಕಾರವು, ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಿಗೆ ಲಸಿಕೆಯನ್ನು ಸರಿಯಾಗಿ ಪೂರೈಸಲಾಗುತ್ತಿದೆ. ಮಹಾರಾಷ್ಟ್ರಕ್ಕೆ ಪೂರೈಸುವಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಮಹಾರಾಷ್ಟ್ರ ಸರ್ಕಾರವು ಆರೋಪಿಸಿದೆ.

'6 ಕೋಟಿ ಜನಸಂಖ್ಯೆ ಇರುವ ಗುಜರಾತ್‌ಗೆ ಈವರೆಗೆ 1 ಕೋಟಿ ಡೋಸ್ ಲಸಿಕೆ ಪೂರೈಸಲಾಗಿದೆ. ಆದರೆ 12 ಕೋಟಿ ಜನರಿರುವ ಮಹಾರಾಷ್ಟ್ರಕ್ಕೆ 1.04 ಕೋಟಿ ಡೋಸ್‌ನಷ್ಟು ಲಸಿಕೆ ಪೂರೈಕೆ ಮಾಡಲಾಗಿದೆ. ಈ ತಾರತಮ್ಯ ಏಕೆ' ಎಂದು ಮಹಾರಾಷ್ಟ್ರ ಆರೋಗ್ಯ ಸಚಿವ ರಾಜೇಶ್ ಟೋಪೆ ಪ್ರಶ್ನಿಸಿದ್ದಾರೆ. ಕೇಂದ್ರ ಸರ್ಕಾರದ ಜತೆ ನಡೆದ ವಿಡಿಯೊ ಸಂವಾದದ ನಂತರ ಅವರು ಮಾಧ್ಯಮ ಪ್ರತಿನಿಧಿಗಳ ಎದುರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ರಾಜ್ಯದ ಹಲವು ಲಸಿಕಾ ಕೇಂದ್ರಗಳು, ಲಸಿಕೆಯ ಡೋಸ್ ಇಲ್ಲದೆ ಬಾಗಿಲು ಹಾಕಿವೆ. ಈಗ ಕೇಂದ್ರ ಸರ್ಕಾರವು ನಮಗೆ 7.5 ಲಕ್ಷ ಡೋಸ್ ಲಸಿಕೆ ಪೂರೈಸಿದೆ. ಆದರೆ ಇದೇ ಅವಧಿಯಲ್ಲಿ ಉತ್ತರ ಪ್ರದೇಶಕ್ಕೆ 48 ಲಕ್ಷ ಡೋಸ್, ಮಧ್ಯಪ್ರದೇಶಕ್ಕೆ 40 ಲಕ್ಷ ಡೋಸ್, ಗುಜರಾತ್‌ಗೆ 30 ಲಕ್ಷ ಡೋಸ್ ಮತ್ತು ಹರಿಯಾಣಕ್ಕೆ 24 ಲಕ್ಷ ಡೋಸ್ ಲಸಿಕೆ ಪೂರೈಸಿದೆ' ಎಂದು ಅವರು ಹೇಳಿದ್ದಾರೆ.

ಐಐಟಿ ವಿದ್ಯಾರ್ಥಿಗಳಿಗೆ ಲಸಿಕೆ, ಆಕ್ಷೇಪ

ಗುಜರಾತ್‌ನ ಐಐಟಿ ಗಾಂಧಿನಗರದ 1,000 ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆ ಹಾಕಲಾಗಿದೆ. ಲಸಿಕೆ ಹಾಕಲು ಗುರುತಿಸಲಾದ ವಯೋಮಾನದ ವರ್ಗದಲ್ಲಿ ವಿದ್ಯಾರ್ಥಿಗಳು ಬರುವುದಿಲ್ಲವಾದರೂ, ಅವರಿಗೆ ಲಸಿಕೆ ನೀಡಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಏಪ್ರಿಲ್ 2 ಮತ್ತು 3ರಂದು ಐಐಟಿ ಗಾಂಧಿನಗರದ ಕ್ಯಾಂಪಸ್‌ನಲ್ಲಿಯೇ ಲಸಿಕೆ ನೀಡಲಾಗಿದೆ. ಲಸಿಕೆಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕಳುಹಿಸಲಾಗಿರುವ ಇ-ಮೇಲ್ ಸೋರಿಕೆಯಾಗಿದೆ. ಆನಂತರವೇ ಈ ವಿಷಯ ಬಹಿರಂಗವಾಗಿದೆ.

ಲಂಡನ್: ಕಚೇರಿಗೆ ತೆರಳದಂತೆ ಮ್ಯಾನ್ಮಾರ್ ರಾಯಭಾರಿಗೆ ನಿರ್ಬಂಧ

ಲಂಡನ್ (ಪಿಟಿಐ): ಮ್ಯಾನ್ಮಾರ್‌ನ ರಾಯಭಾರಿ ಯಾವ್ ಜ್ವಾರ್ ಮಿನ್ ಅವರನ್ನು ಇಲ್ಲಿನ ಕಚೇರಿಗೂ ಪ್ರವೇಶಿಸಲು ಬಿಡದೇ ರಾತ್ರಿಯಿಡೀ ಕಾರಿನಲ್ಲೇ ಕಳೆಯುವಂತೆ ಮಾಡಿದ ಸಿಬ್ಬಂದಿ ವರ್ತನೆಯನ್ನು ಬ್ರಿಟನ್ ಸರ್ಕಾರ ತೀವ್ರವಾಗಿ ಖಂಡಿಸಿದೆ.

ಮ್ಯಾನ್ಮಾರ್‌ನಲ್ಲಿನ ಸೇನಾ ದಂಗೆಯನ್ನು ಮಿನ್ ಅವರು ಕಟುವಾಗಿ ಟೀಕಿಸುತ್ತಿದ್ದಾರೆ. ಅಲ್ಲದೆ, ಬಂಧನದಲ್ಲಿ ಇಟ್ಟಿರುವ ನಾಯಕಿ ಆಂಗ್ ಸನ್ ಸೂಕಿ ಅವರನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸುತ್ತಿದ್ದಾರೆ. ದೇಶದ ಪ್ರತಿನಿಧಿ ಸ್ಥಾನದಿಂದ ಮಿನ್ ಅವರನ್ನು ಪದಚ್ಯುತಗೊಳಿಸಿದ ಬಳಿಕ ರಾಯಭಾರ ಕಚೇರಿಯ ಸಿಬ್ಬಂದಿಯು, ತಕ್ಷಣವೇ ಕಟ್ಟಡದಿಂದ ನಿರ್ಗಮಿಸಬೇಕು ಎಂದು ಸೂಚಿಸಿದ್ದರು.


ಯಾವ್ ಜ್ವಾರ್

ಮ್ಯಾನ್ಮಾರ್ ಸೇನಾ ಸಿಬ್ಬಂದಿಯ ವರ್ತನೆ ಖಂಡನಾರ್ಹ ಎಂದು ಯು.ಕೆಯ ವಿದೇಶಾಂಗ ಕಾರ್ಯದರ್ಶಿ ಡಾಮಿನಿಕ್ ರಾಬ್ ಅವರು ತಿಳಿಸಿದ್ದಾರೆ.

ಭಾರತೀಯರಿಗೆ ನಿರ್ಬಂಧ

ಮೆಲ್ಬರ್ನ್/ವೆಲ್ಲಿಂಗ್ಟನ್ (ಪಿಟಿಐ): ಭಾರತದಲ್ಲಿ ಕೋವಿಡ್ ಪ್ರಕರಣಗಳ ಹೆಚ್ಚಾಗುತ್ತಿರುವುದರಿಂದ ಭಾರತದಿಂದ ಬರುವವರಿಗೆ ನ್ಯೂಜಿಲೆಂಡ್ ಎರಡು ವಾರಗಳ ಕಾಲ ನಿರ್ಬಂಧ ಹೇರಿದೆ.

ನ್ಯೂಜಿಲೆಂಡ್‌ನ ಪ್ರಧಾನಿ ಜೆಸಿಂದಾ ಆರ್ಡರ್ನ್ ಅವರು ಗುರುವಾರ ಈ ಆದೇಶ ಹೊರಡಿಸಿದ್ದಾರೆ. 'ಭಾನುವಾರ (ಏ.11)ರಿಂದ ಏಪ್ರಿಲ್ 28ರವರೆಗೆ ಈ ನಿರ್ಬಂಧವಿರಲಿದೆ. ಭಾರತದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಭಾರತದಿಂದ ಆಗಮಿಸುವ ಎಲ್ಲಾ ಪ್ರಯಾಣಿಕರಿಗೂ ನ್ಯೂಜಿಲೆಂಡ್ ಪ್ರವೇಶಿಸಿದಂತೆ ನಿರ್ಬಂಧ ಹೇರಲಾಗಿದೆ' ಎಂದು ಪ್ರಧಾನಿ ಜೆಸಿಂಡ ತಿಳಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ: ಕಾರ್ಯಸೂಚಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿ ಶಿಕ್ಷಣದ ಗುಣಮಟ್ಟ ಮತ್ತು ನಿರ್ವಹಣೆಯಲ್ಲಿ ಏಕರೂಪತೆಗೆ ಒತ್ತುನೀಡುವ ಗುರಿಯುಳ್ಳ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನುಷ್ಠಾನದ ಕಾರ್ಯಸೂಚಿಯನ್ನು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ಅವರು ಗುರುವಾರ ಬಿಡುಗಡೆ ಮಾಡಿದರು.

'ಗುಣಮಟ್ಟದ ಶಿಕ್ಷಣದ ಮೂಲಕ ವಿದ್ಯಾರ್ಥಿಗಳು ಮತ್ತು ಶಿಕ್ಷಕರಲ್ಲಿ ಆಮೂಲಾಗ್ರ ಬದಲಾವಣೆ' (ಸಾರ್ಥಕ್) ಶೀರ್ಷಿಕೆಯನ್ನು ಈ ಕಾರ್ಯಸೂಚಿಯು ಒಳಗೊಂಡಿದೆ. ಹಾಲಿ ವ್ಯವಸ್ಥೆಯನ್ನೇ ಆಧರಿಸಿ ರೂಪಿಸಲಾದ ವಿಭಿನ್ನ 297 ಕಾರ್ಯ ಚಟುವಟಿಕೆಗಳ ಮೂಲಕ ಒಟ್ಟು 304 ಭಿನ್ನ ಗುರಿಗಳನ್ನು ಸಾಧಿಸುವುದು ಕಾರ್ಯಸೂಚಿಯ ಉದ್ದೇಶವಾಗಿದೆ.

ಅನುಷ್ಠಾನ ಕ್ರಮದಲ್ಲಿ ಸ್ಥಳೀಯ ಅಗತ್ಯವನ್ನು ಆಧರಿಸಿ ಅಗತ್ಯ ಬದಲಾವಣೆಯನ್ನು ಮಾಡಿಕೊಳ್ಳುವ ಅವಕಾಶವನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಈ ಮೂಲಕ ನೀಡಲಾಗಿದೆ ಎಂದು ಈ ಕುರಿತು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

'ಸಾರ್ಥಕ್' ನೀತಿಯು ಹೊಸ ರಾಷ್ಟ್ರೀಯ ಮತ್ತು ರಾಜ್ಯ ಪಠ್ಯಕ್ರಮದ ಅನುಸಾರ ಪಠ್ಯದ ಸುಧಾರಣೆ, ಬಾಲ್ಯ ಹಕ್ಕುಗಳ ರಕ್ಷಣೆ ಮತ್ತು ಶಿಕ್ಷಣಕ್ಕೆ ಆದ್ಯತೆ ನೀಡುವ ಗುರಿ ಹೊಂದಿದೆ. ಒಟ್ಟು ಹಾಜರಿ (ಜಿಇಆರ್), ನಿವ್ವಳ ಹಾಜರಿ ಅನುಪಾತ (ಎನ್‌ಇಆರ್), ಎಲ್ಲ ಹಂತದಲ್ಲಿ ಹಾಜರಿ, ಉಳಿಕೆ ಪ್ರಮಾಣ ಏರಿಕೆ, ಶಾಲೆಯಿಂದ ಹೊರಗುಳಿಯುವವರ ಸಂಖ್ಯೆ ಕುಗ್ಗಿಸುವ ಗುರಿ ಇದೆ.

3ನೇ ತರಗತಿವರೆಗಿನ ಪ್ರಾಥಮಿಕ ಹಂತದಲ್ಲಿ ಗುಣಮಟ್ಟದ ಶಿಕ್ಷಣ, ಎಲ್ಲ ಹಂತದಲ್ಲಿ ಕಲಿಕೆಯ ಗುಣಮಟ್ಟ ಉತ್ತಮಪಡಿಸುವುದು, ಆರಂಭಿಕ ಹಂತದಲ್ಲಿ ಸ್ಥಳೀಯ, ಮಾತೃಭಾಷೆ, ಪ್ರಾದೇಶಿಕ ಭಾಷೆಯಲ್ಲಿಯೇ ಶಿಕ್ಷಣ ನೀಡಲು ಆದ್ಯತೆ ನೀಡಲಾಗಿದೆ.

ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, ಸ್ವಾಯತ್ತ ಸಂಸ್ಥೆಗಳು ಸೇರಿ ಎಲ್ಲ ಭಾಗಿದಾರರ ಜೊತೆ ನಡೆಸಿದ ವಿಸ್ತೃತ ಚರ್ಚೆ ಮತ್ತು ಸಲಹೆಗಳನ್ನು ಆಧರಿಸಿ ಕಾರ್ಯಸೂಚಿ ರೂಪಿಸಿದ್ದು, 7,177 ಸಲಹೆಗಳು ಬಂದಿದ್ದವು ಎಂದು ಹೇಳಿಕೆ ವಿವರಿಸಿದೆ.

ಭ್ರಷ್ಟಾಚಾರ ಪ್ರಕರಣ: ಮಹಾರಾಷ್ಟ್ರ ಸರ್ಕಾರದ ಅರ್ಜಿ ತಿರಸ್ಕಾರ

ಸ್ವತಂತ್ರ ಸಂಸ್ಥೆಯಿಂದ ತನಿಖೆ ಅಗತ್ಯ–ಸುಪ್ರೀಂ

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಮಾಜಿ ಗೃಹ ಸಚಿವರ ವಿರುದ್ಧ ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಗಂಭೀರ ಸ್ವರೂಪ ಮಾಡಿರುವುದರಿಂದ ಸ್ವತಂತ್ರ ಸಂಸ್ಥೆಯಿಂದ ತನಿಖೆ ಅಗತ್ಯ ಎಂದು ಸುಪ್ರಿಂ ಕೋರ್ಟ್ ಪೀಠ ಹೇಳಿದೆ.

ಹಿರಿಯ ಐಪಿಎಸ್ ಅಧಿಕಾರಿ ಪರಮ್ ವೀರ್ ಸಿಂಗ್ ಅವರು ಮಾಜಿ ಗೃಹ ಸಚಿವ ಅನಿಲ್ ದೇಶ್‌ಮುಖ್ ವಿರುದ್ಧ ಮಾಡಿರುವ ಆರೋಪ ಕುರಿತಂತೆ ಈ ಹಿಂದೆ ಬಾಂಬೆ ಹೈಕೋರ್ಟ್ ಸಿಬಿಐ ತನಿಖೆಗೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಮತ್ತು ಅನಿಲ್ ದೇಶ್‌ಮುಖ್ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

'ಇದು, ಕೇವಲ ಪ್ರಾಥಮಿಕ ತನಿಖೆಯಷ್ಟೇ. ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು, ಹಿರಿಯ ಸಚಿವರೊಬ್ಬರ ವಿರುದ್ಧ ಆರೋಪ ಮಾಡಿರುವಾಗ ತನಿಖೆಯಲ್ಲಿ ತಪ್ಪೇನೂ ಇಲ್ಲ' ಎಂದು ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಮತ್ತು ಹೇಮಂತ್ ಗುಪ್ತಾ ಅವರಿದ್ದ ನ್ಯಾಯಪೀಠವು ಅಭಿಪ್ರಾಯಪಟ್ಟಿತು.

ಪೂರಕವಾದ ಸಮರ್ಥನೆಗಳಿಲ್ಲದೇ ಕೇವಲ ಮೌಖಿಕವಾಗಿ ಆರೋಪಿಸಲಾಗಿದೆ. ಅಲ್ಲದೆ, ಕಕ್ಷಿದಾರರ ಅಭಿಪ್ರಾಯವನ್ನು ಆಲಿಸದೇ ಸಿಬಿಐ ತನಿಖೆಗೆ ಹೈಕೋರ್ಟ್ ಆದೇಶಿಸಿದೆ ಎಂದು ದೇಶ್‌ಮುಖ್ ಪರ ವಕೀಲ ಪ್ರತಿಪಾದಿಸಿದರು.

ಮಹಾರಾಷ್ಟ್ರ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಎ.ಎಂ. ಸಿಂಘ್ವಿ ಅವರು, ಮಹಾರಾಷ್ಟ್ರ ಸರ್ಕಾರ ಸಮ್ಮತಿಯನ್ನು ಹಿಂತೆಗೆದುಕೊಂಡಿದೆ. ಸಿಬಿಐ ತನಿಖೆಗೆ ಬಗ್ಗೆ ಬೇಸರವಿದೆ' ಎಂದು ಹೇಳಿದರು.

ನ್ಯಾಯಪೀಠವು ಇದಕ್ಕೆ, ಪ್ರಕರಣದಲ್ಲಿ ಭಾಗಿಯಾಗಿರುವವರು ಗೃಹ ಸಚಿವ ಮತ್ತು ಪೊಲೀಸ್ ಕಮಿಷನರ್ ಆಗಿದ್ದು, ಪ್ರತ್ಯೇಕವಾಗುವವರೆಗೂ ಒಟ್ಟಾಗಿ ಕೆಲಸ ಮಾಡುತ್ತಿದ್ದರು ಎಂದು ಪ್ರತಿಕ್ರಿಯಿಸಿತು.

ಶೀಘ್ರ ಇಬ್ಬರು ಸಚಿವರ ರಾಜೀನಾಮೆ: ರಾಜ್ಯ ಬಿಜೆಪಿ ಅಧ್ಯಕ್ಷ ಪಾಟೀಲ್ ಭವಿಷ್ಯ

ಮುಂಬೈ : 'ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಲು ಪರಿಸ್ಥಿತಿ ಸೂಕ್ತವಾಗಿದೆ. 15 ದಿನದಲ್ಲಿ ಇನ್ನು ಇಬ್ಬರು ಸಚಿವರು ರಾಜೀನಾಮೆ ನೀಡಲಿದ್ದಾರೆ' ಎಂದು ಮಹಾರಾಷ್ಟ್ರ ಬಿಜೆಪಿ ಘಟಕದ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್ ಹೇಳಿದ್ದಾರೆ.

ಇಬ್ಬರು ಸಚಿವರ ವಿರುದ್ಧ ಸಚಿನ್ ವಾಜೆ ಪತ್ರ ಬರೆದ ಹಿನ್ನೆಲೆಯಲ್ಲಿ ಹೀಗೇ ಪ್ರತಿಕ್ರಿಯಿಸಿರುವ ಪಾಟೀಲ್ ಅವರು, ಭವಿಷ್ಯದಲ್ಲಿ ಏನಾಗಬಹುದು ಎಂಬುದು ಸಾಮಾನ್ಯರ ಊಹೆಗೂ ನಿಲುಕುತ್ತದೆ ಎಂದಿದ್ದಾರೆ.

'ಇಬ್ಬರು ಸಚಿವರ ವಿರುದ್ಧ ಕೆಲವರು ಕೋರ್ಟ್ ಮೆಟ್ಟಿಲು ಏರಲಿದ್ದು, ಆ ನಂತರ 15 ದಿನದಲ್ಲಿ ಇಬ್ಬರು ಸಚಿವರು ರಾಜೀನಾಮೆ ನೀಡಲೇಬೇಕಾಗುತ್ತದೆ. ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ನಾನು ಒತ್ತಡ ಹೇರುವುದಿಲ್ಲ. ಆದರೆ, ಈಗಿನ ಸ್ಥಿತಿಯಲ್ಲಿ ಏನು ಮಾರ್ಗವಿದೆ ಎಂದು ಪರಿಣತರೇ ಹೇಳಬೇಕು' ಎಂದರು.

'ಸರ್ಕಾರ ಅಸ್ಥಿರಗೊಳಿಸುವ ಯತ್ನ ಫಲಿಸದು'

ಮುಂಬೈ: 'ಮಹಾರಾಷ್ಟ್ರದ ಮಹಾವಿಕಾಸ ಆಘಾಡಿ (ಎಂವಿಎ) ಸರ್ಕಾರವನ್ನು ಅಸ್ಥಿರಗೊಳಿಸಲು ಕೆಟ್ಟ ರಾಜಕಾರಣ ನಡೆಯುತ್ತಿದೆ. ಇಂತಹ ಯತ್ನಗಳು ಫಲ ನೀಡುವುದಿಲ್ಲ' ಎಂದು ಶಿವಸೇನೆ ಸಂಸದ ಸಂಜಯ ರಾವುತ್ ಪ್ರತಿಪಾದಿಸಿದ್ದಾರೆ.



'ಆರೋಪಿಗಳು ಈಗ ಜೈಲಿನಿಂದಲೇ ಪತ್ರ ಬರೆಯುವ ಪ್ರವೃತ್ತಿ ರಾಜ್ಯದಲ್ಲಿ ಆರಂಭವಾಗಿದೆ. ರಾಜಕೀಯ ಪಕ್ಷಗಳು ಐ.ಟಿ ಸೆಲ್ ಮತ್ತು ತನಿಖಾ ಸಂಸ್ಥೆಗಳನ್ನು ಬಳಸಿ ವ್ಯಕ್ತಿತ್ವಕ್ಕೆ ಕುಂದುತರುವ ಕೆಲಸ ಮಾಡುತ್ತಿವೆ. ಇಂಥ ಕೆಟ್ಟ ರಾಜಕಾರಣವನ್ನೇ ದೇಶ ಹಿಂದೆಂದೂ ನೋಡಿರಲಿಲ್ಲ' ಎಂದು ರಾವುತ್ ಪ್ರತಿಕ್ರಿಯಿಸಿದರು.

'ಸೇವೆಯಲ್ಲಿ ಮುಂದುವರಿಸಲು ₹ 2 ಕೋಟಿ ನೀಡುವಂತೆ ಮಾಜಿ ಗೃಹ ಸಚಿವ ಕೇಳಿದ್ದರು. ಮತ್ತೊಬ್ಬ ಮಂತ್ರಿ ಅನಿಲ್ ಪರಬ್ ಗುತ್ತಿಗೆದಾರರಿಂದ ಹಣ ಸಂಗ್ರಹಿಸಿಕೊಡಲು ತಿಳಿಸಿದ್ದರು' ಎಂದು ದೂರಿ ಅಮಾನತುಗೊಂಡಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಪತ್ರ ಬರೆದಿದ್ದರು.

ಈ ಮಧ್ಯೆ ವಾಜೆ ಆರೋಪವನ್ನು ಶಿವಸೇನೆ ನಾಯಕ ಪರಬ್ ತಳ್ಳಿಹಾಕಿದ್ದು, 'ಯಾವುದೇ ಪರಿಸ್ಥಿತಿ ಎದುರಿಸಲು ಸಿದ್ಧ. ನಾನು ಬಾಬಾಸಾಹೇಬ್ ಠಾಕ್ರೆ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದ್ದೇನೆ, ಯಾವುದೇ ತಪ್ಪುಮಾಡಿಲ್ಲ' ಎಂದು ಹೇಳಿದ್ದಾರೆ.

ಮತ್ತೆ ವೈದ್ಯಕೀಯ ಪರೀಕ್ಷೆ: ಈ ಮಧ್ಯೆ, ಸಚಿನ್ ವಾಜೆ ಅವರನ್ನು ಇಲ್ಲಿನ ಜೆಜೆ ಆಸ್ಪತ್ರೆಯಲ್ಲಿ ಎನ್‌ಐಎ ಅಧಿಕಾರಿಗಳು ಗುರುವಾರ 2ನೇ ಬಾರಿಗೆ ವೈದ್ಯಕೀಯ ತಪಾಸಣೆಗೆ ಒಳಪಡಿಸಿದರು.

ಕಾಶಿ ವಿಶ್ವನಾಥ ದೇಗುಲ –ಗ್ಯಾನವಾಪಿ ಮಸೀದಿ ಸ್ಥಳದ ಸರ್ವೆ: ಎಎಸ್‌ಐಗೆ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಲಖನೌ: ಗಮನಾರ್ಹ ಬೆಳವಣಿಗೆಯಲ್ಲಿ ವಾರಣಸಿಯ ಸ್ಥಳೀಯ ನ್ಯಾಯಾಲಯವು ಕಾಶಿ ವಿಶ್ವನಾಥ ದೇವಸ್ಥಾನ –ಗ್ಯಾನವಾಪಿ ಮಸೀದಿ ಭೂಮಿ ಇರುವ ಭೂಮಿಯ ಸರ್ವೆ ನಡೆಸಬೇಕು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಗೆ (ಎಎಸ್‌ಐ) ಆದೇಶಿಸಿದೆ.

ವಿಜಯ ಶಂಕರ್ ರಸ್ತೋಗಿ ಎಂಬುವವರು 1991ರಲ್ಲಿ ಸಲ್ಲಿಸಿದ್ದ ಅರ್ಜಿ ಆಧರಿಸಿ ಹಿರಿಯ ವಿಭಾಗೀಯ ಫಾಸ್ಟ್‌ಟ್ರ್ಯಾಕ್ ನ್ಯಾಯಾಲಯ ಈ ಕುರಿತು ಆದೇಶ ಹೊರಡಿಸಿದೆ. ಇಡೀ ಭೂಮಿಯೂ ಕಾಶಿ ವಿಶ್ವನಾಥ ದೇಗುಲಕ್ಕೆ ಸೇರಬೇಕು. ಅಲ್ಲಿರುವ ಗ್ಯಾನವಾಪಿ ಮಸೀದಿಯು ಭೂಮಿಯ ಒಂದು ಭಾಗವಷ್ಟೇ ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು.

ನ್ಯಾಯಾಧೀಶರಾದ ಅಶುತೋಷ್ ತಿವಾರಿ ಅವರು ಆದೇಶವನ್ನು ಕಳೆದ ವಾರ ಕಾಯ್ದಿರಿಸಿದ್ದರು. ಸಮೀಕ್ಷೆಗಾಗಿ ಐವರು ಸದಸ್ಯರ ತಂಡವನ್ನು ಎಎಸ್‌ಐ ರಚಿಸಬೇಕು. ಇಡೀ ಪ್ರದೇಶದ ಸರ್ವೆ ನಡೆಸಬೇಕು. ಈ ಪ್ರಕ್ರಿಯೆಗೆ ತಗುಲುವ ವೆಚ್ಚವನ್ನು ಸರ್ಕಾರ ಭರಿಸಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಭೂವಿವಾದ ಇತ್ಯರ್ಥಪಡಿಸಲು ಸ್ಥಳದ ಸರ್ವೆಗೆ ನಡೆಸಲು ಪುರಾತತ್ವ ಇಲಾಖೆಗೆ ಆದೇಶಿಸಬೇಕು. ಹಿಂದೆ ಇದ್ದ ದೇವಸ್ಥಾನವನ್ನು ನೆಲಸಮಗೊಳಿಸಿದ ನಂತರ ಅಲ್ಲಿ ಮಸೀದಿ ಕಟ್ಟಲಾಗಿತ್ತು ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು. ತಮ್ಮ ವಾದಕ್ಕೆ ಸಮರ್ಥನೆಯಾಗಿ ರಾಮಜನ್ಮಭೂಮಿ–ಬಾಬರಿ ಮಸೀದಿ ಪ್ರಕರಣವನ್ನು ಉಲ್ಲೇಖಿಸಿದ್ದರು.

ಪ್ರತಿಯಾಗಿ ವಾದ ಮಂಡಿಸಿದ್ದ ಮುಸಲ್ಮಾನರ ಕಡೆಯವರು, ಆಗಸ್ಟ್ 15, 1947ರಲ್ಲಿ ಇದ್ದ ಸ್ಥಿತಿಯನ್ನೇ ಯಥಾವತ್ ಮುಂದುವರಿಸಲು ಅವಕಾಶ ಕಲ್ಪಿಸಬೇಕು ಎಂದು ಕೋರಿದ್ದರು. ಪ್ರತಿವಾದಿಯಾಗಿರುವ ಕೇಂದ್ರ ಸುನ್ನಿ ವಕ್ಫ್ ಮಂಡಳಿ, ಈ ಆದೇಶವನ್ನು ಮೇಲಿನ ಉನ್ನತ ಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದು ತಿಳಿಸಿದೆ.

'ಪರೀಕ್ಷೆ ರದ್ದು, ಇಲ್ಲವೇ ಆನ್‌ಲೈನ್ ಮೂಲಕ ನಡೆಸಿ'

ನವದೆಹಲಿ (ಪಿಟಿಐ): 'ಮೇ ತಿಂಗಳಿನಲ್ಲಿ ನಡೆಯಲಿರುವ ಬೋರ್ಡ್ ಪರೀಕ್ಷೆಗಳನ್ನು ರದ್ದುಗೊಳಿಸಬೇಕು. ಇಲ್ಲವೇ ಪರೀಕ್ಷೆಗಳನ್ನು ಆನ್‌ಲೈನ್ ಮೂಲಕ ನಡೆಸಬೇಕು' ಎಂದು ಕೋರಿ 10 ಹಾಗೂ 12ನೇ ತರಗತಿಯ ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.

ಈ ಸಂಬಂಧ ಸಿದ್ಧಪಡಿಸಿರುವ ಅರ್ಜಿಗೆ ವಿದ್ಯಾರ್ಥಿಗಳು ಸಹಿ ಹಾಕಿದ್ದಾರೆ. ಅಲ್ಲದೇ, ಟ್ವಿಟರ್‌ನಲ್ಲಿ #cancelboardexams2021 ಜನಪ್ರಿಯವಾಗಿದೆ.

'10 ಮತ್ತು 12 ನೇ ತರಗತಿಯ ಬೋರ್ಡ್ ಪರೀಕ್ಷೆಗಳ ವೇಳೆ ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸಲಾಗುವುದು. ವಿದ್ಯಾರ್ಥಿಗಳ ಸುರಕ್ಷತೆಗಾಗಿ ಬೇಕಾಗಿರುವ ಕ್ರಮಗಳನ್ನು ಕೈಗೊಳ್ಳಲಾಗುವುದು' ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಮತ್ತು ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್ (ಸಿಐಎಸ್‌ಸಿಇ) ಹೇಳಿವೆ.

ಬಾಲನಟಿ ಇದೀಗ 'ಬರ್ಕ್ಲಿ' ನಾಯಕಿ

ಹಲವು ವರ್ಷಗಳ ಹಿಂದೆ ಚಿತ್ರಮಂದಿರಗಳಲ್ಲಿ ಪ್ರತಿ ಸಿನಿಮಾಗೂ ಮುನ್ನ ಪ್ರಸಾರವಾಗುತ್ತಿದ್ದ ಧೂಮಪಾನ ನಿಷೇಧ ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದ ಮುಂಬೈ ಮೂಲದ ಬಾಲನಟಿ ಸಿಮ್ರನ್ ನಾಟೇಕರ್ ಇದೀಗ 'ಬರ್ಕ್ಲಿ' ಚಿತ್ರದ ಮುಖಾಂತರ ನಾಯಕಿಯಾಗಿ ಚಂದನವನಕ್ಕೆ ಕಾಲಿಟ್ಟಿದ್ದಾರೆ.




ಕಸ್ತೂರ್‌ಬಾ ಬದುಕು ತೆರೆಗೆ


ಬರಗೂರು ರಾಮಚಂದ್ರಪ್ಪ

ಕಸ್ತೂರ್‌ಬಾ ಗಾಂಧಿಯವರ ಜೀವನದ ಮುಖ್ಯ ಘಟನೆಗಳನ್ನು ಆಧರಿಸಿದ ಕಥೆಯನ್ನು ತೆರೆಗೆ ತರಲು ಹಿರಿಯ ಸಾಹಿತಿ, ಚಿತ್ರ ನಿರ್ದೇಶಕ ಪ್ರೊ.ಬರಗೂರು ರಾಮಚಂದ್ರಪ್ಪ ಅವರು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

ಬರಗೂರು ಅವರೇ 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬರೆದ 'ಕಸ್ತೂರ್ ಬಾ Vs ಗಾಂಧಿ' ಕಾದಂಬರಿಯನ್ನು ಆಧರಿಸಿ 'ತಾಯಿ ಕಸ್ತೂರ್ ಗಾಂಧಿ' ಎಂಬ ಹೆಸರಿನ ಈ ಚಿತ್ರವು ನಿರ್ಮಾಣಗೊಳ್ಳುತ್ತಿದೆ. ಈ ಚಿತ್ರದ ನಿರ್ದೇಶನ, ಚಿತ್ರಕಥೆ, ಗೀತೆ ರಚನೆ ಮತ್ತು ಸಂಭಾಷಣೆಯೂ ಬರಗೂರು ಅವರದ್ದೇ. ಕಸ್ತೂರ್‌ಬಾ ಪಾತ್ರದಲ್ಲಿ ಖ್ಯಾತ ನಟಿ ಹರಿಪ್ರಿಯಾ ಹಾಗೂ ಗಾಂಧಿ ಪಾತ್ರದಲ್ಲಿ ಬಹುಭಾಷಾ ನಟ ಕಿಶೋರ್ ಅಭಿನಯಿಸಲಿದ್ದಾರೆ.


ಹರಿಪ್ರಿಯಾ


ಕಿಶೋರ್

ಜನಮಿತ್ರ ಮೂವೀಸ್ ಬ್ಯಾನರ್ ಅಡಿ ಗೀತಾ ಅವರು ಈ ಚಿತ್ರ ನಿರ್ಮಿಸುತ್ತಿದ್ದಾರೆ. 'ಗಾಂಧೀಜಿಯವರ ಬದುಕಿನಲ್ಲಷ್ಟೇ ಅಲ್ಲ, ಭಾರತದ ಬದುಕಿನಲ್ಲಿ ಕಸ್ತೂರ್‌ಬಾ ಅವರು ವಹಿಸಿದ ಪಾತ್ರ ಮಹತ್ವದ್ದು. ಈ ಚಿತ್ರವು ಕಸ್ತೂರ್‌ಬಾ ಅವರ ಬದುಕನ್ನು ಗಾಂಧೀಜಿಯವರ ಬದುಕಿನ ಸಮೇತ ಕಟ್ಟಿಕೊಡುತ್ತದೆ. ಗಾಂಧೀಜಿಯವರ ಆದರ್ಶವಾದಿ ನಿಲುವು ಮತ್ತು ಹೋರಾಟಗಳ ಹಾದಿಯಲ್ಲಿ ಕಸ್ತೂರ್‌ಬಾ ಅವರು ಎದುರಾಗುವ ಮತ್ತು ಒಂದಾಗುವ ವಿಶಿಷ್ಟ ನಿರೂಪಣೆಯಿಂದ, ಈ ಚಿತ್ರವು ಕೇವಲ ಜೀವನ ಚರಿತ್ರೆಯಾಗದೆ ನಿರ್ದಿಷ್ಟ ನಿಲುವುಗಳ ಮುಖಾಮುಖಿ ಮತ್ತು ಅನುಸಂಧಾನದ ತಾತ್ವಿಕ ನೆಲೆಯನ್ನು ಒಳಗೊಂಡಿರುತ್ತದೆ' ಎನ್ನುತ್ತಾರೆ ಬರಗೂರು ರಾಮಚಂದ್ರಪ್ಪ.

ಡಾ. ಅಂಬೇಡ್ಕರ್ ಪಾತ್ರದಲ್ಲಿ ಕನ್ನಡದ ಹಿರಿಯ ಕಲಾವಿದರೊಬ್ಬರು ಅಭಿನಯಿಸುವ ಸಾಧ್ಯತೆಯಿದೆ. ಉಳಿದ ಕಲಾವಿದರ ಆಯ್ಕೆ ಪ್ರಕ್ರಿಯೆ ನಡೆದಿದೆ. ಚಿತ್ರಕ್ಕೆ ನಾಗರಾಜ್ ಆದವಾನಿ ಛಾಯಾಗ್ರಹಣ, ಶಮಿತಾ ಮಲ್ನಾಡ್ ಸಂಗೀತ, ಸುರೇಶ್ ಅರಸು ಅವರ ಸಂಕಲನ, ಮೈತ್ರಿ ಬರಗೂರು ಅವರ ಕಲಾ ನಿರ್ದೇಶನ ಇದೆ.

ಚಿತ್ರದ ಕೆಲವು ಮುಖ್ಯ ದೃಶ್ಯಗಳನ್ನು ಗುಜರಾತ್‌ನ ಸಾಬರಮತಿ ಆಶ್ರಮ, ಮಹಾರಾಷ್ಟ್ರದ ವಾರ್ಧಾ ಆಶ್ರಮ, ಪುಣೆಯ ಆಗಾಖಾನ್ ಬಂಗಲೆಯಲ್ಲಿ ಚಿತ್ರೀಕರಣ ನಡೆಸಲು ತಂಡವು ಉದ್ದೇಶಿಸಿದೆ. ಕೋವಿಡ್ ತೀವ್ರತೆ ಕಡಿಮೆಯಾದ ಕೂಡಲೇ ಚಿತ್ರ ಸೆಟ್ಟೇರಲಿದೆ ಎಂದು ಬರಗೂರು ಹೇಳುತ್ತಾರೆ.

ದೊಡ್ಮನೆ ಹೆಣ್ಮಕ್ಕಳಿಗೆ ಮಾದರಿಯಾದೆ!

ದೊಡ್ಮನೆಯಿಂದ ಮೊದಲ ಬಾರಿಗೆ ಹೆಣ್ಣುಮಗಳೊಬ್ಬಳು ನಾಯಕಿಯಾಗಿ ಚಂದನವನ ಪ್ರವೇಶಿಸಿದ್ದಾರೆ. ತೆರೆಯ ಮೇಲೆ ಬರಲು ಸಜ್ಜಾಗಿರುವ ಡಾ.ರಾಜ್‌ಕುಮಾರ್ ಅವರ ಮೊಮ್ಮಗಳಾದ (ಪೂರ್ಣಿಮಾ ಹಾಗೂ ನಟ ರಾಮ್‌ಕುಮಾರ್ ಅವರ ಪುತ್ರಿ) ಧನ್ಯಾ ರಾಮ್‌ಕುಮಾರ್ 'ಸಿನಿಮಾ ಪುರವಣಿ'ಯ ಜೊತೆ ಮಾತಿಗಿಳಿದರು...



ಸಂದರ್ಶನ

ಅಭಿಲಾಷ್ ಪಿ.ಎಸ್.

• ದೊಡ್ಮನೆಯಿಂದ ಮೊದಲ ಬಾರಿ ನಟಿಯೊಬ್ಬರ ಚಂದನವನ ಪ್ರವೇಶ...ಹೇಗೆನಿಸುತ್ತಿದೆ?

ಒಂದು ಜವಾಬ್ದಾರಿ ಇದೆ. ಆದರೆ ಅದು ನನ್ನ ಮೇಲೆ ಒತ್ತಡ ಬರದ ಹಾಗೆ ನೋಡಿಕೊಂಡಿದ್ದೇನೆ. ದೊಡ್ಮನೆ ಕುಟುಂಬದಲ್ಲಿ ಇಲ್ಲಿಯವರೆಗೂ ಯಾರೂ ಪ್ರಯತ್ನ ಮಾಡದೇ ಇರುವುದನ್ನು ನಾನು ಮಾಡಿದ್ದೇನೆ. ನನ್ನನ್ನು ನೋಡಿ ನನ್ನ ಕುಟುಂಬದಲ್ಲಿ ಇರುವ ಇತರೆ ಹೆಣ್ಣುಮಕ್ಕಳೂ ಚಿತ್ರರಂಗಕ್ಕೆ ಬರಲಿ ಎನ್ನುವ ಅಭಿಲಾಷೆ ನನ್ನದು. ದೊಡ್ಮನೆ ಕುಟುಂಬದ ಹೆಣ್ಣುಮಕ್ಕಳಿಗೆ ಚಿತ್ರರಂಗಕ್ಕೆ ಪ್ರವೇಶಿಸಲು ಇದೀಗ ನಾನು ದಾರಿಮಾಡಿಕೊಟ್ಟಂತಾಗಿದೆ. ಈ ಕ್ಷೇತ್ರಕ್ಕೆ ಹೆಜ್ಜೆ ಇಡಲು ಅವರಿಗೆ ದಾರಿ ಸುಗಮವಾಗಿದೆ. ಅವರು ಎರಡು ಬಾರಿ ಯೋಚನೆ ಮಾಡಬೇಕಾದ ಅವಶ್ಯಕತೆಯೇ ಇಲ್ಲ.

• ಕುಟುಂಬದ ಪ್ರತಿಕ್ರಿಯೆ ಹೇಗಿತ್ತು?

ನಿರೀಕ್ಷೆಗೂ ಮೀರಿದ ಬೆಂಬಲ ಕುಟುಂಬದಿಂದ ನನಗೆ ಸಿಗುತ್ತಿದೆ. ಇದಕ್ಕೆ ನಾನು ಆಭಾರಿ. ಹೆಣ್ಣುಮಕ್ಕಳಲ್ಲಿ ಯಾರಾದರೊಬ್ಬರು ಈ ರೀತಿ ಮುಂದೆ ಬರಬೇಕು ಎಂದು ಅವರೂ ಕಾಯುತ್ತಿದ್ದರು. ಅದು ನಾನೇ ಆದ ಕಾರಣ ಹೆಚ್ಚಿನ ಬೆಂಬಲ ನೀಡುತ್ತಿದ್ದಾರೆ. ಅಪ್ಪ, ಮೊದಲೇ ಈ ಚಿತ್ರರಂಗವನ್ನು ನೋಡಿದ್ದ ಕಾರಣ, ನಾನು ಇದೇ ಕ್ಷೇತ್ರಕ್ಕೆ ಪ್ರವೇಶಿಸುವುದರ ಕುರಿತು ಅವರಲ್ಲಿ ಭಯವಿತ್ತು. ಈ ಕುರಿತು ನನ್ನನ್ನು ಪ್ರಶ್ನಿಸಿದ್ದರೂ ಕೂಡ. ಮುಂದೆ ನನ್ನ ಆಸಕ್ತಿಯನ್ನು ನೋಡಿದ ನಂತರ ಒಪ್ಪಿಕೊಂಡರು.

• ನಟಿ ಆಗಬೇಕು ಎಂಬ ಕನಸು ಚಿಗುರಿದ್ದು ಯಾವಾಗ?

ನಟನೆ ಎನ್ನುವುದು ರಕ್ತದಲ್ಲೇ ಇದೆ. ನನಗೆ ಮೊದಲಿನಿಂದಲೂ ನೃತ್ಯ, ನಟನೆಯಲ್ಲಿ ಆಸಕ್ತಿ ಇದೆ. ಶಾಲಾ–ಕಾಲೇಜು ದಿನಗಳಲ್ಲಿ ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ನಾನು ಮುಂಚೂಣಿಯಲ್ಲಿದ್ದೆ. ಇದು ಹವ್ಯಾಸವಾಗಿತ್ತೇ ವಿನಾ ಪ್ರೊಫೆಷನಲ್ ಆಗಿ ಮಾಡುತ್ತೇನೆ ಎಂದು ಅಂದುಕೊಂಡಿರಲಿಲ್ಲ. ಆದರೆ, ಚಿತ್ರರಂಗಕ್ಕೆ ಹೋಗುವ ಆಸಕ್ತಿ ಇತ್ತು, ಇದನ್ನು ಯಾರ ಬಳಿಯೂ ಹೇಳಿಕೊಂಡಿರಲಿಲ್ಲ. ಪತ್ರಿಕೋದ್ಯಮ ಪದವಿ ಬಳಿಕ ಒಂದು ವರ್ಷ ಪಿ.ಆರ್‌ನಲ್ಲಿ ಕೆಲಸ ಮಾಡಿದೆ. ಆದರೆ ಅದು ನನ್ನ ವೃತ್ತಿಕ್ಷೇತ್ರ ಅಲ್ಲ ಎಂದೆನಿಸಿತು. ಅಮ್ಮನೂ, ನನ್ನಲ್ಲಿ ಸಂತೋಷವನ್ನು ಕಂಡಿರಲಿಲ್ಲ. ಈ ಸಂದರ್ಭದಲ್ಲಿ ಸಿನಿಮಾಗೆ ಕಾಲಿಡುವುದು ಇಷ್ಟವಿದ್ದರೆ ಮುಂದಕ್ಕೆ ಹೆಜ್ಜೆ ಇಡು ಎಂದು ಅಪ್ಪ, ಅಮ್ಮ ಹೇಳಿದರು.

• 'ನಿನ್ನ ಸನಿಹಕೆ' ಚಿತ್ರಕ್ಕೆ ನಿಮ್ಮ ತಯಾರಿ ಹೇಗಿತ್ತು?

ಆರು ತಿಂಗಳು ಅಭಿನಯ ತರಂಗದಲ್ಲಿ ಗೌರಿ ದತ್ ಅವರಡಿ ನಟನೆಯ ತರಬೇತಿ ಪಡೆದೆ. ನಿನ್ನ ಸನಿಹಕೆ ಚಿತ್ರದಲ್ಲಿ ಅಮೃತ ಎನ್ನುವ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ನಿಜ ಜೀವನದಲ್ಲಿ ಹುಡುಗಿಯರು ಯಾವ ರೀತಿ ಇರುತ್ತಾರೆ, ಅವರಿಗಿರುವ ಸಮಸ್ಯೆ, ಅದಕ್ಕೆ ಅವರ ಪ್ರತಿಕ್ರಿಯೆ ಹೇಗಿರುತ್ತದೆ ಎನ್ನುವುದು ಈ ಪಾತ್ರಕ್ಕೆ ಮಾದರಿ. ನಾಯಕ ನಟ ಸೂರಜ್ ಗೌಡ ಹಾಗೂ ನಾನು ಉತ್ತಮ ಸ್ನೇಹಿತರಾಗಿದ್ದೇವೆ. ಸೆಟ್‌ನಲ್ಲಿ, ಇದು ನನ್ನ ಮೊದಲ ಚಿತ್ರ ಎನ್ನುವ ಭಾವನೆಯನ್ನು ಅವರು ನೀಡಲಿಲ್ಲ. ನನ್ನ ನಟನೆಗೆ ಅವರು ಬೆಂಬಲವಾಗಿ ನಿಂತರು.

• ಮಳೆ ಮಳೆ..ಹಾಡು ಸಖತ್ ಹಿಟ್ ಆಗಿದೆ...

ರಘು ದೀಕ್ಷಿತ್ ಅವರ ಬಗ್ಗೆ ಏನು ಹೇಳಲು ಸಾಧ್ಯ. ಅವರು ಮ್ಯೂಜಿಷಿಯನ್ ಅಲ್ಲ ಮ್ಯಾಜಿಷಿಯನ್. ಪ್ರೇಮಕಥೆ ಎಂದು ಬಂದರೆ ಮೊದಲು ಮನಸ್ಸಿಗೆ ಬರುವುದು ರಘು ದೀಕ್ಷಿತ್ ಅವರ ಸಂಗೀತ. ಪ್ರತಿ ದೃಶ್ಯದಲ್ಲೂ ಅವರ ಸಂಗೀತ ಒಂದು ಪಾತ್ರವಾಗಿರುತ್ತದೆ. ಅದೇ ರೀತಿ, ವಾಸುಕಿ ವೈಭವ್ ಅವರು ಬರೆದ ಹಾಡಿನ ಸಾಹಿತ್ಯವನ್ನು ಅಪ್ಪ ತುಂಬಾ ಮೆಚ್ಚಿಕೊಂಡರು. ನಮ್ಮ ಕಾಲದಲ್ಲಿ ಇಂತಹ ಸಾಹಿತ್ಯವಿತ್ತು, ಯಾರು ಇದನ್ನು ಬರೆದವರು ಎಂದು ಕೇಳಿ ಖುಷಿಪಟ್ಟರು.

• ಚಿತ್ರದ ಮೇಲಿನ ನಿರೀಕ್ಷೆ ಹೇಗಿದೆ?

ಪ್ರೇಕ್ಷಕರ ಸಂಖ್ಯೆ ನಿರ್ಬಂಧ ಹಾಕಿರುವ ಸಂದರ್ಭದಲ್ಲಿ ಚಿತ್ರ ಬಿಡುಗಡೆ ಮಾಡುವುದಿಲ್ಲ ಎಂದು ನಿರ್ಧಾರ ಮಾಡಿದ್ದಾರೆ. ಈ ನಿರ್ಬಂಧ ಸಡಿಲ ಆದ ಕೂಡಲೇ ಚಿತ್ರವು ಬಿಡುಗಡೆಯಾಗಲಿದೆ. ನಾನೂ ಕೂಡಾ ನನ್ನನ್ನು ತೆರೆಯ ಮೇಲೆ ನೋಡಲು ಕಾಯುತ್ತಿದ್ದೇನೆ.

ತೆರೆ ಮೇಲೆ ಸದ್ಯಕ್ಕಿಲ್ಲ ಬಿಗ್ ಬಜೆಟ್ ಸಿನಿಮಾ

> **"ಚಿತ್ರಮಂದಿರಗಳಲ್ಲಿ ಎಲ್ಲ ಮಾದರಿಯ ಮುಂಜಾಗೃತಾ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಬೇರೆ ಯಾವ ರಾಜ್ಯಗಳಲ್ಲೂ ಶೇ 50ರಷ್ಟು ಮಾತ್ರ ಸೀಟು ಭರ್ತಿ ಆದೇಶವನ್ನು ಹೊರಡಿಸಿಲ್ಲ. ಆದರೆ, ನಮ್ಮ ರಾಜ್ಯದಲ್ಲೇಕೆ ಈ ಮಲತಾಯಿ ಧೋರಣೆ. ನಿರ್ಬಂಧ ಆದೇಶವನ್ನು ಸರ್ಕಾರ ಹಿಂಪಡೆಯಬೇಕು"**
> **ಡಿ.ಕೆ.ರಾಮಕೃಷ್ಣ,** ನಿರ್ಮಾಪಕರ ಸಂಘದ ಅಧ್ಯಕ್ಷ


ದುನಿಯಾ ವಿಜಯ್


ಸುದೀಪ್

ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದ ಎಂಟು ಜಿಲ್ಲೆಗಳ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಸಂಖ್ಯೆಯನ್ನು ಸರ್ಕಾರವು ಶೇ 50 ನಿರ್ಬಂಧಿಸಿದ ಕಾರಣ, ಬಿಡುಗಡೆಗೆ ಸಜ್ಜಾಗಿದ್ದ ಕೆಲ ಬಿಗ್‌ಬಜೆಟ್ ಸಿನಿಮಾಗಳು ಮುಂದಕ್ಕೆ ಹೋಗಿವೆ.

ಚಿತ್ರಪ್ರದರ್ಶನದ ಮೇಲಿದ್ದ ನಿರ್ಬಂಧ ಸಡಿಲಿಕೆಯಾದ ಬಳಿಕ, ಫೆ. 5ಕ್ಕೆ ಇನ್‌ಸ್ಪೆಕ್ಟರ್ ವಿಕ್ರಂ, ಫೆ. 19ರಂದು ಧ್ರುವ ಸರ್ಜಾ ನಟನೆಯ 'ಪೊಗರು', ಮಾರ್ಚ್ 11ರಂದು ದರ್ಶನ್ ಅಭಿನಯದ 'ರಾಬರ್ಟ್' ಹಾಗೂ ಏ.1ರಂದು ಪುನೀತ್ ರಾಜ್‌ಕುಮಾರ್ ನಟನೆಯ 'ಯುವರತ್ನ', ಹೀಗೆ ಎರಡು ವಾರಕ್ಕೊಮ್ಮೆ ಬಿಗ್ ಬಜೆಟ್ ಸಿನಿಮಾಗಳು ತೆರೆಕಂಡವು. ಇದರ ಬೆನ್ನಲ್ಲೇ ಪ್ರೇಕ್ಷಕರ ಸಂಖ್ಯೆ ನಿರ್ಬಂಧ ಆದೇಶ ಹೊರಬಿದ್ದಿತು. ಹೀಗಾಗಿ, ಇದೇ ತಿಂಗಳು ಬಿಡುಗಡೆಗೆ ಸಜ್ಜಾಗಿದ್ದ ದುನಿಯಾ ವಿಜಯ್ ನಟಿಸಿ ನಿರ್ದೇಶಿಸಿರುವ ಮೊದಲ ಸಿನಿಮಾ 'ಸಲಗ' ಹಾಗೂ ಕಿಚ್ಚ ಸುದೀಪ್ ನಟನೆಯ 'ಕೋಟಿಗೊಬ್ಬ–3' ಚಿತ್ರ ಇದೀಗ ಮುಂದಕ್ಕೆ ಹೋಗಿವೆ.

'ಸಿನಿಮಾ ಪ್ರದರ್ಶನದ ಮೇಲಿನ ನಿರ್ಬಂಧ ಸಡಿಲವಾದ ಬಳಿಕ ನಿರ್ಮಾಪಕರು ಸೇರಿಕೊಂಡು ಯಾರಿಗೂ ಸಮಸ್ಯೆಯಾಗದಂತೆ ಚಿತ್ರಗಳ ಬಿಡುಗಡೆಗೆ ನಿರ್ಧರಿಸಿದ್ದೆವು. ಅದರಂತೆ ಸಿನಿಮಾಗಳು ಬಿಡುಗಡೆಯಾಗಿವೆ. ಇದೀಗ ಮತ್ತೆ ಪ್ರೇಕ್ಷಕರ ಸಂಖ್ಯೆಯ ನಿರ್ಬಂಧ ಹೇರಿರುವ ಕಾರಣ ಕೋಟಿಗೊಬ್ಬ–3 ಸದ್ಯಕ್ಕೆ ಬಿಡುಗಡೆ ಮಾಡುವುದಿಲ್ಲ. ಚಿತ್ರಮಂದಿರಗಳಲ್ಲಿ ಶೇ 100ರಷ್ಟು ಪ್ರೇಕ್ಷಕರ ಪ್ರವೇಶಕ್ಕೆ ಸರ್ಕಾರ ಅನುಮತಿ ನೀಡಿದ ಬಳಿಕವಷ್ಟೇ ಬಿಡುಗಡೆ ಮಾಡುತ್ತೇವೆ' ಎಂದು ನಿರ್ಮಾಪಕ ಸೂರಪ್ಪ ಬಾಬು ಹೇಳಿದರು.

ಪ್ರೇಕ್ಷಕರ ಸಂಖ್ಯೆ ನಿರ್ಬಂಧ ಸಡಿಲಿಕೆಯಾದಲ್ಲಿ ಸಲಗ ಹಾಗೂ ಕೋಟಿಗೊಬ್ಬ–3 ಚಿತ್ರಗಳು ಮೇ ತಿಂಗಳಲ್ಲಿ ಬಿಡುಗಡೆಯಾಗಲಿವೆ. ಹೀಗಾದಲ್ಲಿ ಮೇ ತಿಂಗಳಲ್ಲಿ ಬಿಡುಗಡೆಯಾಗಬೇಕಿತ್ತು. ಈ ಚಿತ್ರದ ಬಿಡುಗಡೆಯೂ ಇದೀಗ ಮುಂದಕ್ಕೆ ಹೋಗಿದೆ. 'ರಾಜ್ಯದಲ್ಲಿ ಮತ್ತೆ ಕೊರೊನಾ ಮಹಾಮಾರಿ ತನ್ನ ಅಟ್ಟಹಾಸ ತೋರಿಸುತ್ತಿದೆ. ಆ ಕಾರಣದಿಂದ ಚಿತ್ರವನ್ನು ಈ ವೈರಸ್ ಅರ್ಭಟ ಕಡಿಮೆಯಾಗುವವರೆಗೂ ಬಿಡುಗಡೆ ಮಾಡುವುದಿಲ್ಲ' ಎಂದು 'ಮೋಕ್ಷ' ಚಿತ್ರದ ನಿರ್ಮಾಪಕ ಹಾಗೂ ನಿರ್ದೇಶಕ ಸಮರ್ಥ್ ನಾಯಕ್ ಹೇಳಿದ್ದಾರೆ.

ಅಮೆಜಾನ್ ಪ್ರೈಂನಲ್ಲಿ 'ಯುವರತ್ನ'


ಒಟಿಟಿ

ಬಿಡುಗಡೆಯಾದ ಮೊದಲ ವಾರದಲ್ಲೇ ಪುನೀತ್ ರಾಜ್‌ಕುಮಾರ್ ನಟನೆಯ 'ಯುವರತ್ನ' ಚಿತ್ರವು ಒಟಿಟಿ ವೇದಿಕೆಗೆ ಲಗ್ಗೆ ಇಟ್ಟಿದೆ. ಏಪ್ರಿಲ್ 9 ರಿಂದ ಅಮೆಜಾನ್ ಪ್ರೈಂನಲ್ಲಿ ಈ ಚಿತ್ರವು ವೀಕ್ಷಣೆಗೆ ದೊರೆಯಲಿದೆ.

ಈ ಕುರಿತು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಚಿತ್ರದ ನಿರ್ದೇಶಕ ಸಂತೋಷ್ ಆನಂದರಾಮ್, 'ಏ.9ರಿಂದ ಚಿತ್ರವು ಅಮೆಜಾನ್ ಪ್ರೈಂನಲ್ಲಿ ಬರಲಿದೆ. ರಾಜ್ಯದಲ್ಲಿ ಪ್ರಸ್ತುತ ಇರುವ ಪರಿಸ್ಥಿತಿ, ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ನಿರ್ಬಂಧದ ಕಾರಣ ನಾವು ಒಮ್ಮತದಿಂದ ಒಟಿಟಿ ವೇದಿಕೆಯಲ್ಲಿ ಚಿತ್ರ ಬಿಡುಗಡೆ ನಿರ್ಧಾರ ಮಾಡಿದೆವು. ಸರ್ಕಾರದ ಆದೇಶ ಪಾಲಿಸುವುದು ನಮ್ಮ ಸಾಮಾಜಿಕ ಜವಾಬ್ದಾರಿ. ಜೊತೆಗೆ ಸಿನಿಮಾವನ್ನು ಜನರಿಗೆ ತಲುಪಿಸುವುದೂ ನಮ್ಮ ಆದ್ಯತೆ. ಚಿತ್ರಮಂದಿರದ ಮಾಲೀಕರು ಚಿತ್ರದ ಕಲೆಕ್ಷನ್‌ನಿಂದ ಖುಷಿಯಾಗಿದ್ದಾರೆ. ಚಿತ್ರಮಂದಿರಗಳಲ್ಲೂ ಚಿತ್ರ ಪ್ರದರ್ಶನ ಮುಂದುವರಿಯಲಿದ್ದು, ಪ್ರೈಂನಲ್ಲೂ ಇದು ಬರಲಿದೆ' ಎಂದು ಮಾಹಿತಿ ನೀಡಿದರು.

'ಈ ನಿರ್ಧಾರ ನಮಗೂ ಆಶ್ಚರ್ಯತರಿಸಿದೆ. ಇಂತಹ ಸ್ಥಿತಿ ಬರಬಹುದು ಎನ್ನುವ ಯೋಚನೆ ಮಾಡಿರಲಿಲ್ಲ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ಜನರು ಸಿನಿಮಾದ ಕುರಿತು ನೀಡುತ್ತಿರುವ ಅಭಿಪ್ರಾಯವನ್ನು ಪರಿಗಣಿಸಿ, ತಂಡವಾಗಿ ಈ ನಿರ್ಧಾರ ಕೈಗೊಂಡೆವು' ಎಂದು ಹೇಳಿದರು.

'ಅಮೆಜಾನ್‌ನಲ್ಲಿ ಪ್ರಸಾರವಾಗುತ್ತಿರುವ ನನ್ನ ಮೊದಲ ಸಿನಿಮಾ ಇದು. ಎರಡು ತಿಂಗಳ ಹಿಂದೆಯಷ್ಟೇ ಚಿತ್ರದ ಚಿತ್ರೀಕರಣ ಮುಗಿದಿತ್ತು. ಚಿತ್ರ ಬಿಡುಗಡೆಯಾದ ಮೊದಲ ದಿನವೇ ಜನರ ಪ್ರತಿಕ್ರಿಯೆ ಅದ್ಭುತವಾಗಿತ್ತು. ಇದರಿಂದ ಬಹಳ ಖುಷಿಪಟ್ಟಿದೆ. ಆದರೆ ನಂತರ ಬದಲಾದ ಸ್ಥಿತಿಯಿಂದ ಬೇಜಾರಾಗಿತ್ತು. ಸಿನಿಮಾದಲ್ಲಿ ಒಳ್ಳೆಯ ವಿಷಯ ಇದ್ದರೆ, ಭಾಷೆ ಅಡ್ಡಿಯಾಗುವುದಿಲ್ಲ. ಅಮೆಜಾನ್‌ನಲ್ಲಿ ಹಿಂದಿ, ತಮಿಳು ಹಾಗೂ ಇತರೆ ಭಾಷೆಗಳಲ್ಲೂ ಡಬ್ ಆಗಿ ಚಿತ್ರ ಪ್ರಸಾರಗೊಳ್ಳಲಿದೆ' ಎಂದು ನಟ ಪುನೀತ್ ರಾಜ್‌ಕುಮಾರ್ ತಿಳಿಸಿದರು. 'ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಚಿತ್ರಮಂದಿರಗಳಿಗೆ ಬರಲು ಆಗುತ್ತಿಲ್ಲ ಎಂದು ಹಲವರು ಹೇಳಿದರು. ಹೀಗಾಗಿ, ಇಂತಹ ಒಳ್ಳೆಯ ಸಂದೇಶ ಇರುವ ಸಿನಿಮಾವನ್ನು ಎಲ್ಲರಿಗೂ ತಲುಪಿಸಬೇಕು ಎನ್ನುವ ಕಾರಣದಿಂದ ಅಮೆಜಾನ್ ಪ್ರೈಂನಲ್ಲಿ ಪ್ರಸಾರ ಮಾಡುತ್ತಿದ್ದೇವೆ' ಎಂದು ನಿರ್ಮಾಪಕ ವಿಜಯ್ ಕಿರಗಂದೂರು ಹೇಳಿದರು.


ಯುವರತ್ನ
ಪುನೀತ್ ರಾಜ್‌ಕುಮಾರ್

ರಿಯಲ್ ಆಗಿತ್ತು 'ರೀಲ್' ಆರತಕ್ಷತೆ!


ತ್ರಿಶೂಲ್ – ಶಿವಾನಿ 'ಆರತಕ್ಷತೆ'ಯಲ್ಲಿ ಅಭಿಮಾನಿಗಳ ಸೆಲ್ಫಿ ಸಂಭ್ರಮ

ಕಿರುತೆರೆ

'ಝೀ ಕನ್ನಡ' ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ನಾಗಿಣಿ–2 ಧಾರಾವಾಹಿಯ ಜೋಡಿ ತ್ರಿಶೂಲ್ ಹಾಗೂ ಶಿವಾನಿ ಅವರ ಮದುವೆ ವೀಕ್ಷಕರ ಅಪೇಕ್ಷೆಯಂತೆಯೇ ತೆರೆಯ ಮೇಲೆ ನಡೆಯಿತು.

ಆದರೆ, ಈ ಜೋಡಿ ಬಗ್ಗೆ ವೀಕ್ಷಕರ ಮನದಲ್ಲೇನಿದೆ ಎಂದು ವಾಹಿನಿಗೆ ಹಾಗೂ ಧಾರಾವಾಹಿ ತಂಡಕ್ಕೆ (ಅರ್ಜುನ್ ಆರ್ಟ್ಸ್) ತಿಳಿಯಬೇಕಿತ್ತು. ಅದಕ್ಕೆಂದೇ ಮಾಡಿದ ಪ್ರಯೋಗ ಈ ಧಾರಾವಾಹಿಯ ತ್ರಿಶೂಲ್–ಶಿವಾನಿಯ 'ಆರತಕ್ಷತೆ'.

'ಧಾರಾವಾಹಿಯ ಪ್ರಚಾರಕ್ಕೆ ತಂತ್ರಗಳೇನೋ ಹೊಸತಲ್ಲ. ಆದರೆ, ಪೂರ್ಣ ಪ್ರಮಾಣದ ಮದುವೆಯ ಆರತಕ್ಷತೆಯ ರೀತಿಯಲ್ಲೇ ಆಯೋಜಿಸಿ ವೀಕ್ಷಕರಿಗೆ ಇನ್ನಷ್ಟು ಹತ್ತಿರವಾಗುವ ಪ್ರಯೋಗ ಮಾಡಿದೆವು' ಎಂದರು ತಂಡದ ಮೇಲುಸ್ತುವಾರಿ ಮಹೇಶ್‌ರಾವ್.

ಧಾರಾವಾಹಿಯ ನಿರಂತರ ವೀಕ್ಷಕರನ್ನೇ 'ಆರತಕ್ಷತೆ'ಗೆ ಆಮಂತ್ರಿಸಲಾಗಿತ್ತು. ವಿವಾಹ ಮಂಟಪದ ಅದ್ದೂರಿ ಅಲಂಕಾರ, ಸಾಲಾಗಿ ಬಂದು ಶುಭಹಾರೈಸಿ ಸೆಲ್ಫಿ ತೆಗೆಸಿಕೊಳ್ಳುವವರ ದಂಡು ಸೇರಿತ್ತು. ಸಾಲದ್ದಕ್ಕೆ ಮದುವೆಯ ಭೋಜನವೂ ಇತ್ತು. 'ಮದುಮಕ್ಕಳ' ಪೋಷಕರು ಊಟದ ಹಾಲ್‌ಗೆ ಬಂದು ಅತಿಥಿಗಳನ್ನು ವಿಚಾರಿಸುವ ಪರಿಯಂತೂ ಇದು ನೈಜ ಮದುವೆಯೇ ಇರಬೇಕು ಅಂದುಕೊಳ್ಳುವವರೆಗೆ ನಡೆಯಿತು.

ಬಂದವರೆಲ್ಲಾ ಜೋಡಿ ಪಕ್ಕ ನಿಂತ ಫೋಟೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡರು. ನೂರಾರು ಜನರು ಶುಭಹಾರೈಸಿದ್ದೂ ಆಯಿತು. ಕೊನೆಗೆ ಆ ಪಾತ್ರಧಾರಿ ಜೋಡಿ ತ್ರಿಶೂಲ್ (ನಿನಾದ್ ಹರಿತ್ಸ), ಶಿವಾನಿ (ನಮ್ರತಾ ಗೌಡ) ಯುಟ್ಯೂಬ್‌ನಲ್ಲಿ ಬಂದು 'ನಮ್ಮದು ನಟನೆ ಅಷ್ಟೇ' ಎಂದು ಹೇಳಿಕೊಳ್ಳಬೇಕಾಯಿತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ




ಸುಭಾಷಿತ

ನಿಮಗೆ ತಿಳಿದಿರುವುದನ್ನು ಮಾಡಲು ಸ್ವಯಂ ಶಿಸ್ತು ಅಳವಡಿಸಿಕೊಳ್ಳುವುದು ಸರಿಯಾದ ಮತ್ತು ಮುಖ್ಯವಾದ ಕ್ರಮ.

–ಮಾರ್ಗರೇಟ್ ಥ್ಯಾಚರ್

ಆರ್‌ಬಿಐ: ರೆಪೊ ದರದಲ್ಲಿ ಯಥಾಸ್ಥಿತಿ ಎದುರಾಗಬಹುದು ದೊಡ್ಡ ಸವಾಲು

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯ (ಎಂಪಿಸಿ) ಹೊಸ ಹಣಕಾಸು ವರ್ಷದ ಮೊದಲ ಸಭೆಯು ರೆಪೊ ದರಗಳಲ್ಲಿ ಯಾವ ಬದಲಾವಣೆಯನ್ನೂ ಮಾಡದಿರುವ ತೀರ್ಮಾನ ಕೈಗೊಂಡಿದೆ. ಅಲ್ಲದೆ, ಹಣಕಾಸಿನ ಹೊಂದಾಣಿಕೆಯ ನಿಲುವನ್ನು ಮುಂದುವರಿಸುವ ತೀರ್ಮಾನವನ್ನೂ ಕೈಗೊಂಡಿದೆ. ವ್ಯವಸ್ಥೆಯಲ್ಲಿ ನಗದು ಲಭ್ಯತೆ ಹೆಚ್ಚಿಸಲು ಪೂರಕವಾಗುವ ಕೆಲವು ಕ್ರಮಗಳನ್ನು ಜಾರಿಗೆ ತರಲು ಕೂಡ ಅದು ತೀರ್ಮಾನಿಸಿದೆ. ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ತೀರ್ಮಾನಿಸಿದ್ದರಲ್ಲಿ ಅಚ್ಚರಿಗೆ ಕಾರಣವಾಗುವಂಥದ್ದು ಏನೂ ಇಲ್ಲ. 'ಪೆಟ್ರೋಲ್ ಮತ್ತು ಡೀಸೆಲ್‌ನ ಮಾರುಕಟ್ಟೆ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯನ್ನು ತಗ್ಗಿಸುವುದರಿಂದ ಬೆಲೆ ಹೆಚ್ಚಳದ ಒತ್ತಡ ತುಸು ತಗ್ಗಬಹುದು. ಹಣದುಬ್ಬರ ದರವು ಹೆಚ್ಚಿನ ಅವಧಿಗೆ ಕಡಿಮೆ ಮಟ್ಟದಲ್ಲಿ ಇರುವಂತಹ ಪರಿಸ್ಥಿತಿ ಸೃಷ್ಟಿಯಾಗಬೇಕಿರುವುದು ಈ ಸಂದರ್ಭದ ಅಗತ್ಯ' ಎಂಬ ಅಭಿಪ್ರಾಯವು ಫೆಬ್ರುವರಿಯಲ್ಲಿ ನಡೆದಿದ್ದ ಎಂಪಿಸಿ ಸಭೆಯಲ್ಲಿ ವ್ಯಕ್ತವಾಗಿತ್ತು. ಆದರೆ, ದೇಶದ ಬಹುತೇಕ ಕಡೆಗಳಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯು ಗರಿಷ್ಠ ಮಟ್ಟದಲ್ಲಿಯೇ ಇದೆ. ಈ ವರ್ಷದ ಫೆಬ್ರುವರಿಯಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇಕಡ 5.03ಕ್ಕೆ ತಲುಪಿದೆ. ತೈಲ ಬೆಲೆಯನ್ನು ತಗ್ಗಿಸುವ ವಿಚಾರದಲ್ಲಿ ಕೇಂದ್ರ ಮೊದಲ ಹೆಜ್ಜೆ ಇರಿಸಬೇಕೋ ರಾಜ್ಯಗಳು ಮೊದಲ ಹೆಜ್ಜೆ ಇರಿಸಬೇಕೋ ಎಂಬ ರಾಜಕೀಯ ಚರ್ಚೆಯೇ ಇನ್ನೂ ಮುಂದುವರಿದಿದೆ. ತೈಲ ಬೆಲೆ ತಗ್ಗಿಸುವ ವಿಚಾರದಲ್ಲಿ ಸಹಮತ ಇನ್ನೂ ಮೂಡಿಲ್ಲ; ತೈಲ ಬೆಲೆ ತಗ್ಗಿಲ್ಲ. ಹಣದುಬ್ಬರ ಕಡಿಮೆ ಆಗದಿರುವುದಕ್ಕೆ ಇದೂ ಒಂದು ಕಾರಣ. ಈ ಹಂತದಲ್ಲಿ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳದೆ ಅನ್ಯ ಮಾರ್ಗ ಆರ್‌ಬಿಐಗೆ ಇರಲಿಲ್ಲ ಅನಿಸುತ್ತದೆ. ಹೊಸ ಹಣಕಾಸು ವರ್ಷದ ಮೊದಲ ಆರು ತಿಂಗಳ ಅವಧಿಯಲ್ಲಿ ಹಣದುಬ್ಬರವು ಶೇ 5ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.



ತೈಲ ದರವನ್ನು ತಗ್ಗಿಸಿ, ಹಣದುಬ್ಬರವನ್ನು ನಿಯಂತ್ರಿಸಲು ಆರ್‌ಬಿಐಗೆ ನೆರವಾಗಲು ಆಡಳಿತಾರೂಢರು ಮುಂದಾಗುವುದು ಈ ಸಂದರ್ಭದಲ್ಲಿ ಹೆಚ್ಚು ಅಪೇಕ್ಷಣೀಯ

ಕೊರೊನಾ ಎರಡನೆಯ ಅಲೆಯು ಆರ್ಥಿಕ ಪರಿಸ್ಥಿತಿಯ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರ ಮಾತಿನಲ್ಲಿ ಕೆಲವು ಕಳವಳಗಳು ವ್ಯಕ್ತವಾಗಿವೆ. ಎರಡನೆಯ ಅಲೆಯನ್ನು ತಡೆಯಲು ದೇಶದ ಅಲ್ಲಲ್ಲಿ ಲಾಕ್‌ಡೌನ್ ಜಾರಿಗೆ ಬಂದಿದೆ. ಇನ್ನು ಕೆಲವೆಡೆ ಜನರ ಮುಕ್ತ ಸಂಚಾರದ ಮೇಲೆ ನಿರ್ಬಂಧ ವಿಧಿಸಲಾಗುತ್ತಿದೆ. ಕೆಲವು ವಾಣಿಜ್ಯ ಚಟುವಟಿಕೆಗಳ ಮೇಲೆ ಕೂಡ ನಿರ್ಬಂಧಗಳು ಜಾರಿಯಾಗಿವೆ. ಇಂತಹ ನಿರ್ಬಂಧಗಳ ಉದ್ದೇಶ ಏನೇ ಇರಲಿ, ಇವೆಲ್ಲವೂ ಅರ್ಥ ವ್ಯವಸ್ಥೆಗೆ ಬೀಳುವ ಏಟುಗಳು ಎಂಬುದರಲ್ಲಿ ಅನುಮಾನ ಇಲ್ಲ. ಮೊದಲ ಲಾಕ್‌ಡೌನ್ ತಂದಿತ್ತ ವಿಷಮ ಪರಿಸ್ಥಿತಿ ಇನ್ನೂ ಪೂರ್ತಿಯಾಗಿ ತಿಳಿಯಾಗಿಲ್ಲ. ಉದ್ಯಮಗಳ, ಜನರ ಆದಾಯ ಪೂರ್ತಿಯಾಗಿ ಮೊದಲಿನ ಸ್ಥಿತಿಗೆ ಬಂದ ವರದಿಗಳು ಇಲ್ಲ. ಆರ್‌ಬಿಐ ತಾನಾಗಿಯೇ ಅಂದಾಜಿಸಿರುವಂತೆ ಹಣದುಬ್ಬರ ದರ ಹೆಚ್ಚಿನ ಮಟ್ಟದಲ್ಲಿ ಇದೆ. ತೈಲ ಬೆಲೆ ಗರಿಷ್ಠ ಮಟ್ಟದಲ್ಲಿರುವ ಕಾರಣ ಹಣದುಬ್ಬರವು ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಕೋವಿಡ್ ತಡೆಯಲು ಜಾರಿಯಾಗಿರುವ ಹೊಸ ನಿರ್ಬಂಧಗಳು ಜನರ ಆದಾಯಕ್ಕೆ ಏಟು ಕೊಡಬಹುದು. ಇವೆಲ್ಲವೂ ಈಗಾಗಲೇ ಬಸವಳಿದಿರುವ ಜನಸಾಮಾನ್ಯರ ದೈನಂದಿನ ಬದುಕಿನ ಮೇಲೆ ಇನ್ನಷ್ಟು ಒತ್ತಡಗಳನ್ನು ಹೇರುತ್ತವೆ. ಇಂತಹ ಸ್ಥಿತಿ ಎದುರಾದರೆ, ಜನರ ಬದುಕನ್ನು ಹೆಚ್ಚು ಸಹನೀಯ ಆಗಿಸುವುದು ಆಡಳಿತದಲ್ಲಿ ಇರುವವರ ಎದುರಿನ, ನೀತಿ ನಿರೂಪಕರ ಎದುರಿನ ಬಹುದೊಡ್ಡ ಸವಾಲುಗಳಲ್ಲಿ ಒಂದಾಗಲಿದೆ. ತೈಲ ದರವನ್ನು ತಗ್ಗಿಸಿ, ಹಣದುಬ್ಬರವನ್ನು ನಿಯಂತ್ರಿಸಲು ಆರ್‌ಬಿಐಗೆ ನೆರವಾಗಲು ಆಡಳಿತಾರೂಢರು ಮುಂದಾಗುವುದು ಈ ಸಂದರ್ಭದಲ್ಲಿ ಹೆಚ್ಚು ಅಪೇಕ್ಷಣೀಯ. ಹಾಗೆಯೇ, ಸಾಂಕ್ರಾಮಿಕವನ್ನು ತಡೆಯುವ ಕ್ರಮಗಳು ಆರ್ಥಿಕ ಚಟುವಟಿಕೆಗಳ ಮೇಲೆ ಅನಪೇಕ್ಷಿತ ಮಟ್ಟದಲ್ಲಿ ಅಡಚಣೆಗಳನ್ನು ಉಂಟುಮಾಡದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಆಡಳಿತಾರೂಢರ ಮೇಲೆ ಇರುತ್ತದೆ. ಆರ್‌ಬಿಐ ಕೈಗೊಳ್ಳುವ ತೀರ್ಮಾನಗಳಿಗೆ ಆಡಳಿತಾರೂಢರ ನೆರವು ದೊರೆತರೆ ಬದಲಾವಣೆಗಳು ತ್ವರಿತವಾಗಿ ಆಗಬಹುದು.

ದಿನದ ಟ್ವೀಟ್

ಕನ್ನಡದ ಸೇವೆಗೆ ನಮನ



ದೂರದ ಜರ್ಮನಿಯಿಂದ ಬಂದು ಕನ್ನಡದ ನೆಲದಲ್ಲಿ ಓಡಾಡಿ, 70,000 ಕನ್ನಡ ಪದಗಳ ನಿಘಂಟು ರಚಿಸಿದ ಫರ್ಡಿನೆಂಡ್ ಕಿಟೆಲ್ ಅವರ ಜನ್ಮದಿನದ (ಏ. 8) ನಮನಗಳು...

ಜಗದೀಶ್ ನಗರಕೆರೆ, ನಾಗರಿಕ

25 ವರ್ಷಗಳ ಹಿಂದೆ

ಮಂಗಳವಾರ, 9-4-1996

● **ಬಂಡೆದ್ದ ಮಾಜಿ ಸಚಿವರಿಗೆ ಕಾಂಗ್ರೆಸ್‌ನಿಂದ ಅರ್ಧಚಂದ್ರ**

ನವದೆಹಲಿ, ಏ. 8 (ಪಿಟಿಐ, ಯುಎನ್‌ಐ)– ಪಕ್ಷದಲ್ಲಿ ಭುಗಿಲೆದ್ದಿರುವ ಬಂಡಾಯವನ್ನು ಹತ್ತಿಕ್ಕಲು ಕಾಂಗ್ರೆಸ್ (ಐ) ಪಕ್ಷ ಮಾಜಿ ಕೇಂದ್ರ ಸಚಿವರಾದ ಮಾಧವ ರಾವ್ ಸಿಂಧಿಯಾ, ಎಂ.ಅರುಣಾಚಲಂ ಮತ್ತು ಪಿ.ಚಿದಂಬರಂ ಸೇರಿದಂತೆ ಅಧಿಕೃತ ಅಭ್ಯರ್ಥಿಗಳ ವಿರುದ್ಧ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಕಣಕ್ಕಿಳಿದಿರುವ 29 ಮಂದಿ ಬಂಡಾಯ ನಾಯಕರನ್ನು ಪಕ್ಷದಿಂದ ಆರು ವರ್ಷಗಳ ಕಾಲ ಉಚ್ಚಾಟಿಸಿದೆ. ತಮಿಳು ನಾಡಿನಲ್ಲಿ ಹೊಸ ಪಕ್ಷ ರಚಿಸಿದ ಜಿ.ಕೆ. ಮೂಪನಾರ್ ಅವರನ್ನು ಅಮಾನತುಗೊಳಿಸಲಾಗಿದೆ.

ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ಗ್ವಾಲಿಯರ್ ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆಗೆ ಇಳಿದಿರುವ ಮಾಜಿ ಕೇಂದ್ರ ಸಚಿವ ಮಾಧವ ರಾವ್ ಸಿಂಧಿಯಾ ಅವರನ್ನೂ ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಪಕ್ಷದ ವಕ್ತಾರ ವಿ.ಎನ್.ಗಾಡ್ಗೀಳ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

● **ವೀರಪ್ಪನ್‌ಗೆ ರಾಜಕೀಯ ಸೇರುವ ಆಸೆ**

ಮದ್ರಾಸ್, ಏ. 8 (ಪಿಟಿಐ)– ದೇಶವನ್ನು ಕಾಡುತ್ತಿರುವ ಭ್ರಷ್ಟಾಚಾರ ವ್ಯವಸ್ಥೆಯನ್ನು ತೊಡೆಯಲು ತಾನು ರಾಜಕೀಯಕ್ಕೆ ಇಳಿಯ ಬಯಸಿರುವುದಾಗಿ ಕುಖ್ಯಾತ ಶ್ರೀಗಂಧ ಕಳ್ಳಸಾಗಣೆದಾರ, ದಂತಚೋರ ಹಾಗೂ ನರಹಂತಕ ವೀರಪ್ಪನ್ ಹೇಳಿಕೊಂಡಿದ್ದಾನೆ.

'ಸಮಾಜವಾದಿ ಪಕ್ಷದಿಂದ ಲೋಕಸಭಾ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕೆ ಧುಮುಕಿರುವ 'ಬ್ಯಾಂಡಿಟ್ ಕ್ವೀನ್' ಫೂಲನ್ ದೇವಿಯಿಂದ ನಾನು ಸ್ಫೂರ್ತಿ ಪಡೆದುಕೊಂಡಿದ್ದೇನೆ. ಭ್ರಷ್ಟ ರಾಜಕಾರಣಿಗಳು, ಪೊಲೀಸರು ಹಾಗೂ ನ್ಯಾಯಾಂಗದ ಅಧಿಕಾರಿಗಳಿಂದ ತುಂಬಿರುವ ಈ ನಾಡನ್ನು ಸ್ವಚ್ಛಗೊಳಿಸಲು ನಾನು ರಾಜಕೀಯ ಪ್ರವೇಶಿಸುವ ಆಸೆ ಹೊಂದಿದ್ದೇನೆ' ಎಂದು ತಮಿಳು ನಿಯತಕಾಲಿಕ 'ನಕ್ಕೀರನ್'ಗೆ ನೀಡಿರುವ ವಿಡಿಯೊ ಸಂದರ್ಶನದಲ್ಲಿ ತಿಳಿಸಿದ್ದಾನೆ.

50 ವರ್ಷಗಳ ಹಿಂದೆ

ಶುಕ್ರವಾರ, 9-4-1971

● **ಮನೆಗೊಬ್ಬರಿಗೆ ನೌಕರಿ ರಾಜ್ಯದಲ್ಲಿ ಯೋಜನೆ ಜಾರಿ**

ಬೆಂಗಳೂರು, ಏ. 8– 'ಮನೆಗೊಬ್ಬ ದುಡಿಮೆಗಾರ'– ಕೇಂದ್ರ ಸರ್ಕಾರದ ಈ ಯೋಜನೆ ರಾಜ್ಯದಲ್ಲಿ ಜಾರಿಗೆ ಬಂದಿದೆ. ಇದಕ್ಕಾಗಿ ವೆಚ್ಚ: ಈ ವರ್ಷ ಪ್ರತೀ ಜಿಲ್ಲೆಗೆ ಹನ್ನೆರಡೂವರೆ ಲಕ್ಷ ರೂ.

1971–72ನೇ ಸಾಲಿನಲ್ಲಿ ಗ್ರಾಮಾಂತರ ನಿರುದ್ಯೋಗ ನಿವಾರಣೆ ಕ್ಷಿಪ್ರ ಯೋಜನೆಗಾಗಿ ಮೈಸೂರು ರಾಜ್ಯಕ್ಕೆ ಕೇಂದ್ರ ಸರ್ಕಾರ 237.5 ಲಕ್ಷ ರೂ. ನೀಡಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗದ ಪ್ರದೇಶಗಳನ್ನು ಆರಿಸಿ ಪ್ರತೀ ಮನೆಯಲ್ಲಿ ಕನಿಷ್ಠ ಒಬ್ಬನಾದರೂ ಸಂಪಾದಿಸುವವನು ಇರುವಂತೆ ಮಾಡುವುದು ಯೋಜನೆಯ ಮುಖ್ಯ ಉದ್ದೇಶ.


● **ಭಾರತಕ್ಕೆ 300ಕ್ಕೂ ಹೆಚ್ಚು ನಿರಾಶ್ರಿತರು**

ನವದೆಹಲಿ, ಏ. 8– ಸಿಂದ್‌ನಿಂದ ರಾಜಸ್ಥಾನದ ಬಾರ್‌ಮೇರ್ ಜಿಲ್ಲೆಗೆ ಕಳೆದ ಎರಡು ದಿನಗಳಲ್ಲಿ 300ಕ್ಕೂ ಹೆಚ್ಚು ನಿರಾಶ್ರಿತರು ಬಂದಿದ್ದಾರೆ.

ಮಾನವೀಯ ಕಾರಣಗಳಿಗಾಗಿ ನಿರಾಶ್ರಿತರಿಗೆ ಗಡಿ ದಾಟಿ ಬರಲು ಅವಕಾಶ ಕೊಡಲು ನವದೆಹಲಿ ನಿರ್ಧರಿಸಿದೆ. ಪೂರ್ವ ಬಂಗಾಳದಲ್ಲಿ ಉಪ್ಪು, ಸಾಸಿವೆ ಎಣ್ಣೆ, ಸೀಮೆಎಣ್ಣೆ ಮತ್ತು ಔಷಧಿಗಳ ತೀವ್ರ ಕೊರತೆ ತಲೆದೋರಿದೆ.

ಜನಸಮುದಾಯಗಳ ಅನ್ಯೋನ್ಯ ಬದುಕಿನ ಪ್ರತೀಕ ನಮ್ಮ ಬಹುತ್ವದ ಪರಂಪರೆ

ಭಾಷಿಕ ಬಂಧ ಗಟ್ಟಿಗೊಳಿಸೋಣ



ವಿಶ್ಲೇಷಣೆ

ಡಿ.ಎಸ್. ಚೌಗಲೆ

ಮರಾಠಿ ವಿದ್ವಾಂಸ ಡಾ. ಹರಿ ನರಕೆ ಒಮ್ಮೆ ಬೆಳಗಾವಿಯಲ್ಲಿ ಸಿಕ್ಕಿದ್ದರು. ಭಾಷೆಗಳ ಬಗ್ಗೆ ಚರ್ಚಿಸುತ್ತ ಅವರು ಹೀಗೆ ಹೇಳಿದ್ದರು- 'ಮರಾಠಿ ಭಾಷೆಯ ಪ್ರಾಚೀನತೆಯು ಜ್ಞಾನೇಶ್ವರನ (ಜ್ಞಾನೇಶ್ವರಿ ಗ್ರಂಥ) ತನಕ ಎಂದು ಭಾವಿಸಲಾಗಿತ್ತು. ಆದರೆ ಇತ್ತೀಚೆಗಿನ ಸಂಶೋಧನೆಯ ಬೆಳವಣಿಗೆಗಳ ಪ್ರಕಾರ, ಅದು ಇನ್ನೂ ಹಿಂದಕ್ಕೆ ಹೋಗುತ್ತದೆ. ಅಷ್ಟೇ ಅಲ್ಲ, ವಿಶೇಷವೆಂದರೆ ಮರಾಠಿ ಭಾಷೆಯು ಕನ್ನಡ, ತಮಿಳು ಮತ್ತು ತೆಲುಗಿಗೆ ಯಾವತ್ತೂ ಋಣಿಯಾಗಿರಬೇಕು. ಪರಸ್ಪರ ಅಷ್ಟೊಂದು ಕೊಡುಪಡೆಯುವಿಕೆ, ಪ್ರಭಾವಗಳು ಸಾವಯವ ರೂಪದಲ್ಲಿ ನಿರಂತರವಾಗಿ ನಡೆಯುತ್ತ ಬಂದಿವೆ...'

ಅವರ ಈ ಹೇಳಿಕೆಯು ದೇಶದ ಬಹುಭಾಷಿಕ ನಾಗರಿಕತೆಯ ಒಟ್ಟು ಆದಾನ-ಪ್ರದಾನ ಅತ್ಯಂತ ಸ್ವಾಭಾವಿಕ ನೆಲೆಯಲ್ಲಿ ಜರುಗಿರುತ್ತದೆ ಎಂಬುದನ್ನು ಪುಷ್ಟೀಕರಿಸುತ್ತದೆ. ಅದು ಬೇರ್ಪಡಿಸಲಾರದಷ್ಟು ಗಟ್ಟಿಯಾಗಿರುತ್ತದೆ. ಈ ಮಾತು ಮುನ್ನೆಲೆಗೆ ಬರಲು ಕಾರಣ, ಗಡಿಯ ವಿಚಾರವಾಗಿ ಎರಡೂ ಕಡೆ ಮತ್ತೆ ನಡೆದ ವಾಗ್ವಾದಗಳು.

ಈ ವಾಗ್ವಾದಗಳನ್ನು ಮರಾಠಿಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ, ಕಾದಂಬರಿಕಾರ ಡಾ. ಭಾಲಚಂದ್ರ ನೇಮಾಡೆಯವರು ಒಂದು ರೂಪಕವಾಗಿ ವಿಶ್ಲೇಷಿಸುತ್ತಾರೆ. 'ಈ ಭಾಷೆಯ ಕುರಿತಾದ ಕದನವು ನದಿಗೆ ಪ್ರವಾಹ ಬಂದು ಉಕ್ಕಿ ಮತ್ತೆ ತಣ್ಣಗಾದಂತೆ'... (ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಂದರ್ಭದಲ್ಲಿ). ಎರಡೂ ಕಡೆಯ ಗಡಿಯ ಕನ್ನಡ-ಮರಾಠಿ ಬಂಧುಗಳಿಗೆ ಇದರ ಅರಿವಿದೆ- ಈ ಪ್ರವಾಹ ಕ್ಷಣಿಕವೆಂಬುದು. ಆದಕಾರಣ, ಎರಡೂ ಭಾಷಿಕ ಜನ ಸಮುದಾಯಗಳು ಈ ವಿಷಯದ ಕುರಿತು ಹೆಚ್ಚಿಗೆ ತಲೆಕೆಡಿಸಿಕೊಳ್ಳುವುದಿಲ್ಲ. ತಣ್ಣಗೆ ಅನ್ಯೋನ್ಯವಾಗಿಯೇ ಬದುಕು ಸಾಗಿರುತ್ತದೆ. ಆದರೆ ದೂರದವರಿಗೆ ಮಾತ್ರ ಇದೊಂದು ದೊಡ್ಡದಾದ ಭಾಷಾ ಕದನವಾಗಿ ಗೋಚರವಾಗುತ್ತದೆ.

ಮೊನ್ನೆ ಮೊನ್ನೆ ಈ ಭಾಷಿಕ ಪ್ರವಾಹವು ಒಂದಿಷ್ಟು ಕುದಿಕುದಿದು ತಣ್ಣಗಾಯಿತು. ಬೆಳಗಾವಿಯನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಬೇಕು ಎಂಬ ಆಗ್ರಹದ ನುಡಿಕಹಳೆಗಳು ಮಹಾರಾಷ್ಟ್ರದ ನಾಯಕರಿಂದ ಮೊಳಗಿದವು. ನಮ್ಮವರೂ ಅದಕ್ಕೆ ಪ್ರತ್ಯುತ್ತರ ನೀಡಿದರು. ಯಾವುದೇ ಒಂದು ಪ್ರದೇಶವನ್ನು ಭಾಷಿಕ ಹಿನ್ನೆಲೆಯಲ್ಲಿ ಹಾಗೆ ಘೋಷಿಸಲು ಸಾಧ್ಯವಿಲ್ಲ ಎಂಬುದು ಈ ಎಲ್ಲ ನಾಯಕರಿಗೂ ಗೊತ್ತಿದೆ.

ಮುಂಬೈ ನಗರವು ಮಹಾರಾಷ್ಟ್ರದಲ್ಲಿ ಉಳಿಯಲು ಹಲವರು ಹೋರಾಟ ನಡೆಸಿದ್ದಾರೆ. ಅವರಲ್ಲಿ ಮರಾಠಿಯ ಪ್ರಸಿದ್ಧ ದಲಿತ ಸಾಹಿತಿ, ಕಾದಂಬರಿಕಾರ ಅಣ್ಣಾ ಭಾವು ಸಾಠೆ ಕೂಡ ಒಬ್ಬರು. ಅವರು ಹೋರಾಟಗಾರರು ಮತ್ತು ಕಮ್ಯುನಿಸ್ಟರೂ ಹೌದು. ಸಾಠೆಯವರು ಸಂಯುಕ್ತ ಮಹಾರಾಷ್ಟ್ರ ಚಳವಳಿಯಲ್ಲಿ ಭಾಗಿಯಾದವರು. ಮುಂಬೈ ನಗರವನ್ನು ಗುಜರಾತ್ ರಾಜ್ಯಕ್ಕೆ ಸೇರಿಸಲು ಬಹುದೊಡ್ಡ ಯತ್ನ ನಡೆದಿತ್ತು. ಇದೊಂದು 'ಡಾವಪೇಚು' ಎಂದು ಮರಾಠಿ ಸಾಹಿತ್ಯದಲ್ಲಿ ಉಲ್ಲೇಖಗೊಂಡಿದೆ. ಆಗ ಮುಂಬೈ ರಾಜ್ಯದ ತತ್ಕಾಲೀನ ಮುಖ್ಯಮಂತ್ರಿ ಮೊರಾರ್ಜಿ ದೇಸಾಯಿ ಅವರಾಗಿದ್ದರು. ಅಣ್ಣಾ ಭಾವು ಸಾಠೆಯವರು ತಮ್ಮ ಲಾವಣಿ, ಪೋವಾಡಾ ಮತ್ತು ವಗನಾಟ್ಯದ 'ತಮಾಶಾ' ನಾಟಕದ ಮೂಲಕ ಮರಾಠಿ ಅಸ್ಮಿತೆಯನ್ನು ಬಡಿದೆಬ್ಬಿಸಿದರು. ಗುಜರಾತ್ ಜೊತೆ ವಿಲೀನಗೊಳಿಸಲು ಹೇಗೆ ಸಾಧ್ಯವಿಲ್ಲ ಎಂಬುದನ್ನು ತಮ್ಮ ಲೋಕನಾಟ್ಯ ಮತ್ತು ಪೋವಾಡಾಗಳ ಮೂಲಕ ಮನವರಿಕೆ ಮಾಡಿಕೊಟ್ಟರು.

ಗುಜರಾತ್ ರಾಜ್ಯಕ್ಕೆ ಮುಂಬೈ ಸೇರಬೇಕೆಂಬ ವಾದಕ್ಕೆ ಕೆಲ ಕಾರಣಗಳನ್ನು ಎದುರಿಟ್ಟಿದ್ದರು. ಅಲ್ಲಿ ಗುಜರಾತಿಗಳು ಮತ್ತು ಪಾರ್ಸಿಗಳು ಅಧಿಕ ಸಂಖ್ಯೆಯಲ್ಲಿದ್ದಾರೆ ಎಂಬುದು ಒಂದು ಪ್ರಧಾನ ಕಾರಣ. ಆದರೆ ಮುಂಬೈನ ಸುತ್ತಲಿರುವ ಬೆಟ್ಟ ಗುಡ್ಡಗಳಲ್ಲಿ ನೆಲೆಸಿದ್ದ ಮೂಲನಿವಾಸಿಗಳು ಮರಾಠಿ ಭಾಷಿಕರು. ಹೀಗಾಗಿ ಅದು ಮಹಾರಾಷ್ಟ್ರದಲ್ಲೇ ಇರಬೇಕು ಎಂಬ ವಾದವೂ ಬಲವಾಗಿ ಕೇಳಿಬಂತು. ಇರಲಿ, ಅದು ಸರಿಯೂ ಹೌದು. ಈಗ ಬೆಳಗಾವಿಯು ಕೇಂದ್ರಾಡಳಿತ ಪ್ರದೇಶವಾಗಲೆಂದು ವಾದಿಸುವವರಿಗೆ; ಮುಂಬೈನಲ್ಲಿ ನೆಲೆಸಿರುವ ಅನ್ಯಭಾಷಿಕರು ಬಹುಸಂಖ್ಯಾತರೇ ಆಗಿರಲು ಅದನ್ನು ಕೇಂದ್ರಾಡಳಿತವೆನ್ನಲು ಬರುತ್ತದೆಯೇ?! ಹಾಗೆಯೇ ಬೆಳಗಾವಿ ಮತ್ತು ಸುತ್ತಲೂ ನೆಲೆಸಿದ ಮೂಲವಾಸಿಗಳು ಕನ್ನಡ ಭಾಷಿಕರು. ಐತಿಹಾಸಿಕವಾಗಿ ಇದು ರಟ್ಟರಾಳಿದ ನೆಲ.

ಮಹಾಜನ್ ವರದಿಯೂ ಬೆಳಗಾವಿಯು ಕರ್ನಾಟಕದ್ದೆಂದು ಗಟ್ಟಿ ದನಿಯಲ್ಲಿ ಹೇಳಿದೆ. ಆದ್ದರಿಂದ ಮಹಾರಾಷ್ಟ್ರದ ಕೆಲವು ನಾಯಕರು ಹೇಳಿದರು ಎಂದು ಬೆಳಗಾವಿಯನ್ನು ಕೇಂದ್ರಾಡಳಿತವೆನ್ನಲು ಬರುತ್ತದೆಯೇ?

ಪ್ರಾಚೀನ ಕಾಲದಿಂದಲೂ ನಮ್ಮ ಹಳ್ಳಿ, ನಗರ ಪ್ರದೇಶಗಳು ಬಹುಭಾಷಿಕದವುಗಳು. ತಂಜಾವೂರಿನ ಅರಸ ಶಹಾಜಿ ರಾಜೇ ಭೋಸಲೆ ಅವರಿಗೆ ಮರಾಠಿ, ತಮಿಳು, ತೆಲುಗು ಭಾಷೆಗಳಲ್ಲಿ ಪಾಂಡಿತ್ಯವಿತ್ತು. ಪ್ರೇಮಕತೆಯಾಧರಿಸಿ ಮರಾಠಿ ನಾಟಕ ರಚಿಸಿದ್ದರಷ್ಟೇ ಅಲ್ಲ, ದಕ್ಷಿಣಾತ್ಯ ಭಾಷೆಗಳಲ್ಲಿಯೂ ನಾಟಕ, ಕಾವ್ಯ ರಚನೆಯ ಪ್ರಯೋಗ ನಡೆಸಿದ್ದರು. ಈ ಬಗೆಯ ಬಹುತ್ವದ ಪರಂಪರೆಯೇ ನಮ್ಮಲ್ಲಿದೆ.

ಮರಾಠಿ ನಾಟಕದ ಉದಯಕ್ಕೆ ನಮ್ಮ ಉತ್ತರ ಕನ್ನಡ ಜಿಲ್ಲೆಯ ಕರ್ಕಿಮೇಳದ ಕನ್ನಡ ಯಕ್ಷಗಾನವು ಪ್ರೇರಣೆ. ಸಾಂಗ್ಲಿಯ ವಿಷ್ಣುದಾಸ ಭಾವೆ ಎಂಬ ಕವಿ ಯಕ್ಷಗಾನ ಆಧರಿಸಿ 'ಸೀತಾ ಸ್ವಯಂವರ' ಬರೆದರು. ಮರಾಠಿ ಸಂಗೀತ ನಾಟಕದ ಪಿತಾಮಹ ಅಣ್ಣಾಸಾಹೇಬ ಕಿರ್ಲೋಸ್ಕರ ಅವರು ಬೆಳಗಾವಿ ಜಿಲ್ಲೆಯ ಗುರ್ಲಹೊಸೂರಿನವರು. ಮರಾಠಿ ಭಾಷಿಕ ಕಿರ್ಲೋಸ್ಕರ ಅವರಿಗೆ ಕನ್ನಡದ ಸಣ್ಣಾಟ 'ಶ್ರೀಕೃಷ್ಣ ಪಾರಿಜಾತ'ವೆಂದರೆ ಪಂಚಪ್ರಾಣ!

ಪಾರಿಜಾತದ ಕರ್ನಾಟಕ ಸಂಗೀತದ ಪಟ್ಟುಗಳನ್ನು ತಮ್ಮ ಸಾರ್ವಕಾಲಿಕ ಕ್ಲಾಸಿಕ್ 'ಸಂಗೀತ ಸೌಭದ್ರ' ಮತ್ತು 'ಸಂಗೀತ ಶಾಕುಂತಲ' ನಾಟಕಗಳಿಗೆ ಬಳಸಿ ಅಜರಾಮರಗೊಳಿಸಿದರು. ದಂತಕಥೆಯಾದ ರಂಗನಟ, ಸ್ತ್ರೀ ಪಾತ್ರಕ್ಕೆ ಹೊಸ ಇಮೇಜು ನೀಡಿದ ಬಾಲಗಂಧರ್ವರ ಬದುಕಿನ ಕೊನೆದಿನಗಳಲ್ಲಿ ನಮ್ಮ ಕನ್ನಡದ ಗೋಹರಜಾನ ಕರ್ನಾಟಕಿ ನೆರವಿಗಿದ್ದರು. ಪುಣೆಯ ಮನೆಯೊಂದರಲ್ಲಿ ನಮ್ಮ ವರಕವಿ ದ.ರಾ.ಬೇಂದ್ರೆ ವಾಸವಾಗಿದ್ದರು. ಆ ಮನೆಯನ್ನು ಅವರ ಹೆಸರಲ್ಲೇ ನಾಮಫಲಕ ತೂಗಿಸಿ ನೆನೆಯಲಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕನ್ನಡ ಕಲಿಕೆಯ 'ಕನ್ನಡ ಸ್ವಯಂಬೋಧಿನಿ' ಕೃತಿ ಅಧಿಕವಾಗಿ ಮಾರಾಟವಾದದ್ದು ಪುಣೆಯಲ್ಲಿಯೇ.

ಕನ್ನಡಗೊತ್ತಿರುವಜ್ಞಾನೇಶ್ವರ, ಮರಾಠಿಸಂಖ್ಯಾವಾಚಿ ಬಳಸಿದ ಬಸವಣ್ಣನ ಭಾಷಿಕ ಸಂಬಂಧಗಳ ಕರುಳಬಳ್ಳಿಯ ಬತ್ತೀಸರಾಗವನ್ನು ಬಾಂಧವ್ಯದ ಮೂಲಕವೇ ಬದುಕಿ ತೋರಿಸಿದವರು ನಮ್ಮ ಈ ಎರಡೂ ಭಾಷಿಕರು.

ಬೆಳಗಾವಿ ನಗರಕ್ಕೆ ಹತ್ತಿರದ ಕೆಲವು ಹಳ್ಳಿಗಳ ಹೆಸರುಗಳು ಅಚ್ಚಕನ್ನಡದವು. ಬೆನಕನಹಳ್ಳಿ, ಚೆಲುವೇನಹಟ್ಟಿ, ಮಣ್ಣೂರು, ಹಂದಿಗನೂರು ಮುಂತಾದವು. ಆದರೆ, ಈ ಗ್ರಾಮಗಳಲ್ಲಿ ಮರಾಠಿ ನುಡಿಯಾಡುವವರ ಸಂಖ್ಯೆ ಹೆಚ್ಚು. ಹಾಗೆಯೇ ಅಚ್ಚಕನ್ನಡ ಮಾತನಾಡುವವರು ಹೆಚ್ಚಾಗಿರುವ ಹಳ್ಳಿಗಳೂ ಇವೆ. ಉತ್ತರದ ಗಡಿಯಲ್ಲೂ ಇದೇ ಸ್ಥಿತಿ, ಭಿನ್ನವಿಲ್ಲ. ಒಂದು ಹಳ್ಳಿಯಲ್ಲಿ ಜನಬಳಕೆಯ ಭಾಷೆ ಪಕ್ಕಾ ಪೂರ್ತಿ ಕನ್ನಡವಿದ್ದರೆ ಮತ್ತೊಂದು ಅರ್ಧ ಕಿಲೊಮೀಟರ್‌ನಲ್ಲೇ ಪೂರ್ತಿ ಮರಾಠಿ. ಮಗದೊಂದು ಹಳ್ಳಿಯಲ್ಲಿ ಅರ್ಧರ್ಧ ಕನ್ನಡ-ಮರಾಠಿ. ಈ ಬಂಧವನ್ನು ಬೇರ್ಪಡಿಸಲಾಗುವುದಿಲ್ಲ. ತೀರ ಸಂಕೀರ್ಣವಾದ ಇದುವೇ ಈ ನೆಲದ ಭಾಷಿಕ ಸಮುದಾಯಗಳ ಸೌಂದರ್ಯ. ಆ ಜನಸಮುದಾಯಗಳು ಅನ್ಯೋನ್ಯವಾಗಿಯೇ ಬದುಕಿ ಬಾಳುತ್ತಿವೆ. ಕೆಡಿಸದೆ ಹಾಗೆಯೇ ಬದುಕಲು ಬಿಡಿ. ಎರಡೂ ರಾಜ್ಯಗಳ ಬಹುದೊಡ್ಡ ಜನಸಮುದಾಯ ಉದ್ಯೋಗ ಅರಸಿ ಅತ್ತಿತ್ತ ವಲಸೆ ಹೋಗಿದೆ. ಒಕ್ಕೂಟ ವ್ಯವಸ್ಥೆಗೆ ಗೌರವ ನೀಡುತ್ತ ಬಾಳನದಿ ತಣ್ಣಗೆ ಹರಿಯುತ್ತಿರಲಿ.



ಲೇಖಕ: ಸಹಾಯಕ ಪ್ರಾಧ್ಯಾಪಕ, ಭಾವುರಾವ ಕಾಕತಕರ ಕಾಲೇಜು, ಬೆಳಗಾವಿ

ಚುರುಮುರಿ



ಮಾನ'ದಂಡ' ಸಮಿತಿ

● ಸುಧೀಂದ್ರ

ಯೂನಿವರ್ಸಿಟಿಗಳು ಕೊಡೋ ನಾಡೋಜ ಹಾಗೂ ಗೌರವ ಡಾಕ್ಟರೇಟ್‌ಗಳ ಕುರಿತು ಪತ್ರಿಕೇಲಿ ಬಂದ ಸುದ್ದಿಗಳಿಂದ ಸರ್ಕಾರಕ್ಕೆ ಮುಜುಗರವಾಗಿತ್ತು. ಅರ್ಹರನ್ನು ಆಯ್ಕೆ ಮಾಡೋಕೆ ಬೇಕಾದ ಮಾನದಂಡಗಳನ್ನು ನಿರ್ಧರಿಸಲು ಕಮಿಟಿಯೊಂದನ್ನು ನೇಮಕ ಮಾಡಿತು.

ಸೆಕ್ರೆಟೇರಿಯಟ್ಟಲ್ಲಿ ಡಿಪಾರ್ಟ್‌ಮೆಂಟ್ ಪ್ರಮೋಷನ್‌ಗಳನ್ನು ನೋಡ್ಕೊಳ್ತಿದ್ದ ನನ್ನ ಫ್ರೆಂಡ್ ಪಾಪಣ್ಣ ಕಮಿಟಿಗೆ ಮೆಂಬರಾಗಿದ್ದ. ಅಭಿನಂದಿಸೋಕ್ಕೇಂತ ಮನೆಗೆ ಹೋದಾಗ ಅವನ ರೂಮು ಪಬ್ಲಿಕ್ ಲೈಬ್ರರಿಯಂತಾಗಿತ್ತು. ಎಲ್ಲಿ ನೋಡಿದರಲ್ಲಿ ಪತ್ರಿಕೆಗಳು, ಮ್ಯಾಗಝಿನ್‌ಗಳು, ಪುಸ್ತಕಗಳು. 'ಯೂನಿವರ್ಸಿಟಿ ವೈಸ್ ಚಾನ್ಸಲರ್‌ಗಳಿಗೆ ಸಜೆಷನ್ ಕೊಡೋ ಕಮಿಟಿ ನಿಮ್ದು. ಸೂಟು ಬೂಟು ಹಾಕ್ಕೊಂಡು ನೀಟಾಗಿ ರೆಡಿಯಾಗೋದ್ಬಿಟ್ಟು, ನೀಟ್ ಎಕ್ಸಾಮಿಗೆ ಪ್ರಿಪೇರಾಗ್ತಿರೋ ಸೆಕೆಂಡ್ ಪಿಯುಸಿ ಸ್ಟೂಡೆಂಟ್ ಥರಾ ಇದ್ದೀಯಲ್ಲೋ?' ಎಂದು ರೇಗಿಸಿದೆ.

'ಸುಮ್ನೇ ತಮಾಷೆ ಮಾಡೋದ್ಬಿಟ್ಟು ಏನಾದ್ರೂ ಸಲಹೆಗಳಿದ್ರೆ ಹೇಳು' ಎಂದ. ಹಿಂದೆ ಟೆಕ್ನಿಕಲ್ ಎಜುಕೇಷನ್ ಬೋರ್ಡಿನಲ್ಲಿ ಅವನಿದ್ದಾಗಲೇ ಎಂಜಿನಿಯರಿಂಗ್, ಮೆಡಿಕಲ್ ಸೀಟುಗಳಿಗೆ ಸಿಇಟಿ ಎಕ್ಸಾಮ್ ಜಾರಿಗೆ ಬಂದಿದ್ದು ನೆನಪಾಯಿತು.

'ಸಿಇಟಿ ಟೈಪ್ ಒಂದು ಎಕ್ಸಾಮ್ ರೆಡಿ ಮಾಡ್ಸು. ಪಾಸಾದವ್ರನ್ನು ಕೌನ್ಸೆಲಿಂಗ್ ರೌಂಡಿಗೆ ಕರೆಸಿ, ಅವರವರ ಕ್ಯಾಟೆಗರಿಗೆ ತಕ್ಕಂತೆ ಮೆರಿಟ್ಮೇಲೆ ನಾಡೋಜ, ಗೌರವ ಡಾಕ್ಟರೇಟ್‌ಗಳಿಗೆ ಸೆಲೆಕ್ಟ್ ಮಾಡಬಹುದು' ಎಂಬ ಐಡಿಯಾ ಕೊಟ್ಟೆ.

'ಕಾಂಪಿಟಿಷನ್‌ನಲ್ಲಿ ತುಂಬಾ ಜನಾ ಇರ್ತಾರೆ. ಒಂದೊಂದು ಯೂನಿವರ್ಸಿಟಿ ಮೂರಕ್ಕಿಂತ್ಲೂ ಜಾಸ್ತಿ ಜನಾನ ಶಾರ್ಟ್‌ಲಿಸ್ಟ್ ಮಾಡೋಕ್ಕಾಗಲ್ಲ' ಅಂದ.

'ಉಳಿದೋರನ್ನು ಮೆರಿಟ್‌ನಲ್ಲೇ ರಾಜ್ಯೋತ್ಸವ ಪ್ರಶಸ್ತಿಗೆ ಫಿಲ್ ಮಾಡ್ಕೊಬೋದು. ನೆಕ್ಸ್ಟ್ ಲೆವೆಲ್ಲಿನವರನ್ನು ಸರ್ಕಾರದ ಬೇರೆ ಪುರಸ್ಕಾರಗಳಿಗೆ ಕನ್ಸಿಡರ್ ಮಾಡ್ಬೋದು' ಎಂದೆ. ಖುಷಿಯಾಗಿ 'ತುಂಬಾ ಟಾಪ್ ಲೆವೆಲ್‌ನಲ್ಲಿ ಮೆರಿಟ್ಟರೋರನ್ನು ಪದ್ಮಶ್ರೀ ಪುರಸ್ಕಾರಕ್ಕೂ ರೆಕ್ಮಂಡ್ ಮಾಡ್ಬಹುದು ಅಲ್ವಾ?' ಎಂದ.

'ಅಲ್ಲಿಗೆ ಒನ್ ನೇಷನ್, ಒನ್ ಎಕ್ಸಾಮಿನೇಷನ್ ಕನಸು ಸಾರ್ಥಕವಾಯಿತು' ಅಂದೆ. ಎಫ್.ಎಂ. ರೇಡಿಯೊದಲ್ಲಿ 'ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲರೂ...' ಹಾಡು ಬರ್ತಿತ್ತು.

ಸಂಗತ

ಹದಿಹರೆಯವೆಂಬ ನಾಜೂಕು ಶೀಷೆ

ಸಕಾರಾತ್ಮಕ ಚಿಂತನೆ, ಪ್ರಶಂಸೆ, ಪ್ರೀತಿ, ಪ್ರೋತ್ಸಾಹ, ಅನುನಯದಿಂದ ಹರೆಯದವರ ವರ್ತನೆಯಲ್ಲಿ ಪವಾಡಸದೃಶ ಪರಿವರ್ತನೆ ತರಲು ಸಾಧ್ಯ

● ಡಾ. ಮುರಳೀಧರ ಕಿರಣಕೆರೆ

ಮಕ್ಕಳ ಈ ಪರಿಯ ನಡೆ ನನಗೆ ತೀರಾ ಅನಿರೀಕ್ಷಿತ. 'ಥ್ಯಾಂಕ್ಯೂ ಸರ್... ಥ್ಯಾಂಕ್ಯೂ ಸರ್' ಎನ್ನುತ್ತಾ ನನ್ನ ಕಾಲಿಗೆರಗುತ್ತಿದ್ದ ಎಳೆಯರನ್ನು ತೀರಾ ಮುಜುಗರದಿಂದಲೆ ತಡೆಯಲು ಪ್ರಯತ್ನಿಸಿದೆ. ಅವರ ಮೊಗದಲ್ಲಿ ಅಭಿಮಾನದ ಭಾವ. ಕೆಲವರ ಕಂಗಳು ತುಂಬಿದ್ದವು. ಕಾರ್ಯಕ್ರಮದ ನಂತರ ವಿದ್ಯಾರ್ಥಿಗಳು ಕರ ಮುಗಿದೊ ಇಲ್ಲಾ ಕೈಕುಲುಕಿಯೊ ಸಂತಸ ಹಂಚಿಕೊಳ್ಳುವುದು ಸಾಮಾನ್ಯ. ಆದರೆ ಹೀಗೆ ಒಬ್ಬರ ನಂತರ ಒಬ್ಬರು ಜಿದ್ದಿಗೆ ಬಿದ್ದವರಂತೆ ಪಾದ ಮುಟ್ಟಿದ್ದು ಮಾತ್ರ ಪ್ರಥಮ ಅನುಭವ. ತರಗತಿಯ ನಂತರ ವಿದ್ಯಾರ್ಥಿಗಳು, ಶಿಕ್ಷಕರಿಂದ ಬೀಳ್ಕೊಂಡು ಮೈದಾನದಲ್ಲಿ ನಿಲ್ಲಿಸಿದ್ದ ಕಾರಿನತ್ತ ಸಾಗುವಾಗ ಈ ಘಟನೆ ನಡೆದಿತ್ತು.

ಆ ಗ್ರಾಮೀಣ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಫೋನಾಯಿಸಿದ್ದರು. ಹಲವು ವರ್ಷಗಳಿಂದ ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಫಲಿತಾಂಶ ದಾಖಲಿಸುತ್ತಾ ಬಂದ ಶಾಲೆಯದು. ಕಳೆದ ವರ್ಷ ಕೋವಿಡ್ ಗೊಂದಲದ ನಡುವೆಯೂ ಶೇಕಡ 100ರ ಸಾಧನೆ ಆಗಿತ್ತು. ಆದರೆ ಈ ವರ್ಷ ಮಾತ್ರ ಪರಿಸ್ಥಿತಿ ತೀರಾ ನಿರಾಶಾದಾಯಕ ಎಂಬುದು ಅವರ ಆತಂಕ. ಆನ್‌ಲೈನ್ ಕ್ಲಾಸ್‌ಗಾಗಿ ದಿನವಿಡೀ ಮೊಬೈಲ್ ಹಿಡಿದ ಕೆಲವು ಮಕ್ಕಳು ವ್ಯಸನಕ್ಕೆ ಬಿದ್ದಿದ್ದಾರೆ. ಶಾಲೆಯಿಂದ ದೀರ್ಘವಾಗಿ ದೂರವಿದ್ದುದರಿಂದ ಕೆಲವರಿಗೆ ಕುಡಿತದಂತಹ ಚಾಳಿಗಳೂ ಅಂಟಿಕೊಂಡಿವೆ. ಈಗ ತರಗತಿಯ ಪಾಠಗಳಲ್ಲಿ ಆಸಕ್ತಿ ತೋರುತ್ತಿಲ್ಲ. ಪೋಷಕರ ಬುದ್ಧಿವಾದ ಧಿಕ್ಕರಿಸುತ್ತಿದ್ದಾರೆ. ಸರಿಯಾಗಿ ಶಾಲೆಗೂ ಬರುತ್ತಿಲ್ಲ. ಟೆಸ್ಟ್‌ಗಳಲ್ಲಿನ ಅಂಕಗಳನ್ನು ನೋಡಿದರೆ ದಿಗಿಲಾಗುತ್ತಿದೆ. ಒಮ್ಮೆ ಬಂದು ಆಪ್ತ ಸಮಾಲೋಚನೆ ಮಾಡಬಹುದಾ ಎಂಬ ಕೋರಿಕೆ ಮೇರೆಗೆ ನಾನು ಆ ಶಾಲೆಗೆ ಹೋಗಿದ್ದು.

ಇವೆಲ್ಲಾ ಕೋವಿಡ್ ಸಾಂಕ್ರಾಮಿಕ ತಂದಿತ್ತ ಗಂಭೀರ ಅಡ್ಡ ಪರಿಣಾಮಗಳು. ಸಂತ್ರಸ್ತ ಸ್ಥಾನದಲ್ಲಿರುವುದು ಇದೊಂದೇ ಶಾಲೆಯಲ್ಲ. ಇನ್ನೂ ಕೆಲವೆಡೆ ಇಂತಹ ಕಥೆ-ವ್ಯಥೆ ಇದ್ದಿರಬಹುದು! ವಿದ್ಯಾಲಯಗಳಿಂದ ಸುದೀರ್ಘವಾಗಿ ದೂರವುಳಿದ ಹಲವು ವಿದ್ಯಾರ್ಥಿಗಳ ಮನಃಸ್ಥಿತಿ ಊಹಿಸಲಾಗದಷ್ಟು ಬದಲಾಗಿದೆ. ಮರಳಿ ಸರಿದಾರಿಗೆ ತರುವ ಕಸರತ್ತುಗಳು ನಿರೀಕ್ಷಿತ ಫಲ ಕೊಡದೆ ಶಿಕ್ಷಕರು, ಪೋಷಕರು ಹೈರಾಣಾಗಿದ್ದಾರೆ.

'ಗ್ಲಾಸ್: ಹ್ಯಾಂಡಲ್ ವಿತ್ ಕೇರ್' ಎಂಬುದು ಸಾಮಾನ್ಯವಾಗಿ ಗಾಜಿನ ಉಪಕರಣಗಳ ಬಾಕ್ಸ್‌ಗಳ ಮೇಲೆ ಮುದ್ರಿತವಾಗುವ ಎಚ್ಚರಿಕೆ. ಹದಿಹರೆಯದ ಮಕ್ಕಳೂ ಗಾಜಿನ ತರಹ ತುಂಬಾ ಸೂಕ್ಷ್ಮ. ಅವರೊಟ್ಟಿಗೆ ತುಸು ಒರಟಾಗಿ, ಬಿರುಸಾಗಿ ವರ್ತಿಸಿದರೆ ಮನಸ್ಸೂ ಗ್ಲಾಸ್‌ನಂತೆ ಒಡೆದು ಅವರದ್ದಷ್ಟೇ ಅಲ್ಲ ಹೆತ್ತವರ ಕನಸು ನುಚ್ಚುನೂರಾಗಿ ಭವಿಷ್ಯ ಅಂಧಕಾರಮಯ ಆಗಬಹುದು. ಶೀಷೆಯ ಚೂರುಗಳಿಂದಾದ ಮಾನಸಿಕ ಗಾಯ ಮಾಯದೆ ವ್ರಣವಾಗಬಹುದು. ಹಾಗಾಗಿ ಹರೆಯದ ಮಕ್ಕಳನ್ನು ನಿಭಾಯಿಸುವಾಗ ಎಚ್ಚರ ಅತಿ ಮುಖ್ಯ.

ಒಂದೆಡೆ ಹಾರ್ಮೋನ್‌ಗಳ ಅಧಿಕ ಸ್ರವಿಸುವಿಕೆ ಹುಟ್ಟುಹಾಕುವ ಮನೋದೈಹಿಕ ಬದಲಾವಣೆಗಳು, ತತ್ಪರಿಣಾಮದ ಆಕರ್ಷಣೆಗಳು, ಮತ್ತೊಂದೆಡೆ ವಿವೇಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೆದುಳಿನ ನಿರ್ದಿಷ್ಟ ಭಾಗ ಪೂರ್ಣವಾಗಿ ಬೆಳವಣಿಗೆ ಆಗದಿರುವುದು. ತುಸು ಎಡವಿದರೂ ಪರಿಸ್ಥಿತಿ ಬಿಗಡಾಯಿಸಬಹುದು. ಈ ವಯೋಮಾನದವರಿಗೆ ಹೊಡೆದು, ಬೈದು ಬುದ್ಧಿ ಹೇಳುವುದರಿಂದ ಅಪಾಯಗಳೇ ಜಾಸ್ತಿ. ಹೋಲಿಕೆ, ಹೀಯಾಳಿಕೆ, ಅವಮಾನ, ಅತಿ ಉಪದೇಶಗಳನ್ನು ಸೈರಿಸರು. ಹಾಗೆ ಮಾಡಿದರೆ ಮತ್ತಷ್ಟು ಮೊಂಡರಾಗಿ ತೀವ್ರ ಪ್ರತಿರೋಧ ತೋರಬಹುದು. ಮನೆಬಿಟ್ಟು ಓಡಿಹೋಗುವುದು, ಜೀವಕ್ಕೆ ಅಪಾಯ ತಂದುಕೊಳ್ಳುವುದು ಸಹಾ ಇದೇ ಕಾರಣಕ್ಕೆ.



ತಲೆ ತುಂಬಾ ಗೊಂದಲ ತುಂಬಿಕೊಂಡು ದಿಕ್ಕೆಟ್ಟವರಂತೆ ಕಾಣುತ್ತಿದ್ದ ಮಕ್ಕಳನ್ನು ವಾತ್ಸಲ್ಯದಿಂದ ಮಾತನಾಡಿಸಿ ಆತ್ಮವಿಶ್ವಾಸ ತುಂಬಲು ಯಶಸ್ವಿಯಾಗಿದ್ದೆ. ನನ್ನ ಕೋರಿಕೆಯಂತೆ ಐಎಎಸ್, ಡಾಕ್ಟರ್, ಎಂಜಿನಿಯರ್, ಮಿಲಿಟರಿ, ಪೊಲೀಸ್ ಆಫೀಸರ್, ಶಿಕ್ಷಕಿ, ಲಾಯರ್ ಎಂದೆಲ್ಲಾ ಪ್ರತಿಯೊಬ್ಬರೂ ತಮ್ಮ ಕನಸನ್ನು ಚೀಟಿಯಲ್ಲಿ ಬರೆದುಕೊಟ್ಟಾಗ ಕೆಲಸ ಸುಲಭವಾಗಿತ್ತು. ಗುರಿ ಮುಟ್ಟಲು ಮೊಬೈಲ್, ಆಕರ್ಷಣೆಗಳು, ಲವ್, ದುರ್ವ್ಯಸನಗಳಂತಹ ಅಂಶಗಳು ಹೇಗೆ ಅಡ್ಡಿ ಬರುತ್ತವೆ ಎಂದು ವಿವರಿಸುತ್ತಿದ್ದಂತೆ ಅವುಗಳಿಂದ ದೂರವಿರಬೇಕಾದ ಅಗತ್ಯ ಮನವರಿಕೆಯಾಗಿತ್ತು. ವಿಶ್ವಾಸವೃದ್ಧಿಯ ಜೊತೆಗೆ ತಮ್ಮ ಗೊಂದಲಗಳಿಗೆ ಪರಿಹಾರ ದೊರೆತ ಖುಷಿಯೇ ಸಾಮೂಹಿಕವಾಗಿ ಹೀಗೆ ಪಾದಕ್ಕೆರಗಲು ಅವರಿಗೆ ಪ್ರೇರಣೆಯಾಗಿದ್ದು.

ತೀರ್ಥಹಳ್ಳಿ ಸಮೀಪದ ಬಿಳಲುಕೊಪ್ಪ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರು ಕಲಿಕೆ ಉತ್ತೇಜಿಸಲು ತಮ್ಮದೇ ವಿನೂತನ ಮಾರ್ಗ ಕಂಡುಕೊಂಡಿದ್ದಾರೆ. ಮಕ್ಕಳನ್ನು ಸಕಾರಾತ್ಮಕವಾಗಿ ಹುರಿದುಂಬಿಸುವ ಜೊತೆಗೆ ಹಳ್ಳಿ ಶಾಲೆಯ ಈ ಎಚ್.ಎಂ., ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣವಾಗುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಅವರು ಗಳಿಸಿದ ಅಂಕಗಳಷ್ಟು ಪ್ರೋತ್ಸಾಹಧನ ನೀಡುತ್ತಾರೆ. ಅದೂ ತಮ್ಮ ಸ್ವಂತ ಪಾಕೆಟ್‌ನಿಂದ. ಪರಿಣಾಮ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳೇ ಇರುವ ಶಾಲೆ ಕಳೆದ ಆರು ವರ್ಷಗಳಿಂದ ಶೇ 100ರಷ್ಟು ಫಲಿತಾಂಶ ದಾಖಲಿಸುತ್ತಿದೆ. ಇತರ ಶಾಲೆಗಳಂತೆ ಮಕ್ಕಳ ಕೊರತೆಯ ಸಮಸ್ಯೆಯೂ ಕಾಡುತ್ತಿಲ್ಲ.

ಹೌದು, ಸಕಾರಾತ್ಮಕ ಚಿಂತನೆ, ಆತ್ಮವಿಶ್ವಾಸ, ಪ್ರಶಂಸೆ, ಪ್ರೀತಿ, ಪ್ರೋತ್ಸಾಹ, ಮೃದುಮಾತು, ಅನುನಯದಿಂದ ಹರೆಯದವರ ವರ್ತನೆಯಲ್ಲಿ ಪವಾಡಸದೃಶ ಪರಿವರ್ತನೆ ತರಲು ಖಂಡಿತ ಸಾಧ್ಯ. ಇದನ್ನು ಸಾಧಿಸುವ ಕೌಶಲಗಳು ಕರಗತವಾಗಬೇಕಷ್ಟೆ.

ವಾಚಕರ ವಾಣಿ

ಮನಃಪರಿವರ್ತನೆಯ ಕಾರ್ಯ ಹೆಚ್ಚಾಗಲಿ

'ಕಂಬಿಗಳ ಕತ್ತಲ ಹಿಂದೆ ಕವಿಗಳಾದ ಕೈದಿಗಳು' ವರದಿ (ಪ್ರ.ವಾ., ಏ. 7) ಓದಿ ಸಂತಸವಾಯಿತು. ಅಪರಾಧಿಗಳಲ್ಲಿ ಹೆಚ್ಚಿನವರು ಯೋಜನೆ ರೂಪಿಸಿ ಅಪರಾಧ ಕೃತ್ಯ ಎಸಗಿರುವುದಿಲ್ಲ. ಆಕಸ್ಮಿಕವಾಗಿ ಕೃತ್ಯ ಎಸಗಿರುತ್ತಾರೆ. ಅಂತಹವರು ಪರಿವರ್ತನೆಯಾಗಿ ಸಮಾಜದ ಮುಖ್ಯವಾಹಿನಿ ಸೇರಬೇಕು.

ರೆಕ್ಕೆ ಮುರಿದ ಹಕ್ಕಿಗಳ ನೋವನ್ನು ಅಕ್ಷರ ರೂಪದ ಮುಖಾಂತರ 'ಬಂಧನದ ಭಾವಲಹರಿ' ಕೃತಿ ಪ್ರಕಟಣೆ ಮೂಲಕ ಹೊರಹಾಕಿಸಿ, ಅವರನ್ನು ಸೃಜನಶೀಲರನ್ನಾಗಿ ಮಾಡುವಲ್ಲಿ ಡಾ. ಕೆ.ರಂಗನಾಥ್ ಯಶಸ್ವಿಯಾಗಿದ್ದಾರೆ. ವ್ಯಕ್ತಿ ಸುಸಂಸ್ಕೃತನಾಗಲು ಬಯಸಿದರೆ, ಅವನ ಸುತ್ತಮುತ್ತಲಿನ ವಾತಾವರಣವೂ ಬದಲಾಗುತ್ತದೆ. ಅಪರಾಧಿಯ ಮನದಲ್ಲಿ ಮಾನವೀಯ ಮೌಲ್ಯಗಳು ಪಸರಿಸಿದರೆ ಸಮಾಜದಲ್ಲಿ ಆರೋಗ್ಯಕರ ವಾತಾವರಣ ಸೃಷ್ಟಿಯಾಗಲು ಸಾಧ್ಯ.

ಮಹಾದೇವ ಎಸ್. ಪಾಟೀಲ, ರಾಯಚೂರು

ಪರಿವರ್ತನೆಯ ರೂವಾರಿಗೆ ಅಭಿನಂದನೆ

'...ಕವಿಗಳಾದ ಕೈದಿಗಳು' ವರದಿ ಓದಿ ಒಂದು ಕ್ಷಣ ತಬ್ಬಿಬ್ಬಾದೆ. ಕಣ್ಣೊರೆಸಿಕೊಂಡು ನೋಡಿದೆ. ಓದಿದ್ದು ಸರಿ ಎಂದು ಸಮಾಧಾನ ಪಟ್ಟಿದ್ದಲ್ಲದೆ ಶಿವಮೊಗ್ಗ ಕೇಂದ್ರ ಕಾರಾಗೃಹದ ಸಿಬ್ಬಂದಿಗೆ ಮನದಲ್ಲಿಯೇ ಹ್ಯಾಟ್ಸಾಫ್ ಸಲ್ಲಿಸಿದೆ. ಜೈಲು ಸೇರಿದ ಅಪರಾಧಿಗಳು, ಅವರಿಗೆ ನೀಡುವ ವಿವಿಧ ಬಗೆಯ ಶಿಕ್ಷೆಗಳ ಕುರಿತಷ್ಟೇ ಓದುತ್ತಿದ್ದೆವು, ಇಲ್ಲ ಕೇಳುತ್ತಿದ್ದೆವು. ಆದರೆ ಶಿವಮೊಗ್ಗದ ಜೈಲು ಕೈದಿಗಳ ಪರಿವರ್ತನಾ ಕೇಂದ್ರವಾಗಿದೆ.

ಜೈಲು ಹಕ್ಕಿಗಳ ಅಭಿವ್ಯಕ್ತಿಗೆ ಕೊರಳಾದ ಅಧಿಕಾರಿಗಳ ಕೈಂಕರ್ಯ ಶ್ಲಾಘನೀಯವಾದುದು. ಅನಕ್ಷರಸ್ಥರೂ ಅಕ್ಷರ ಕಲಿತು ಕನ್ನಡ ಕವನ ಬರೆದಿರುವುದು ಅಭಿಮಾನದ ಸಂಗತಿ. ಈ ರೀತಿ ಜೈಲುಗಳು ಜ್ಞಾನ ಕೇಂದ್ರಗಳಾಗಿ ಬದಲಾಗುವುದು ಒಂದು ಪವಾಡ ಎನ್ನಲು ಅಡ್ಡಿಯಿಲ್ಲ.

ಬಿ.ಆರ್.ಅಣ್ಣಾಸಾಗರ, ಸೇಡಂ

ಕುಸ್ತಿ

'ಕುಸ್ತಿಗೆ ಮಹಾರಾಜರ
ಪ್ರೋತ್ಸಾಹ (ಪ್ರ.ವಾ., ಮಾರ್ಚ್
28).
ಹಿಂದಿನ ಮಾತು, ಬಿಡಿ!
ಈಗಾದರೋ
ನಾನಾ ಬಗೆಯ ಕುಸ್ತಿಗಳಿಗೆ,
ಮಾತ್ರವಲ್ಲ, ಕಾಳಗಗಳಿಗೆ (ಸಹಾ)
ರಾಜಕಾರಣಿಗಳ ಉತ್ತೇಜನ;
ಸ್ವತಃ ಪಾಲ್ಗೊಳ್ಳುವಿಕೆ!
(ಒಮ್ಮೊಮ್ಮೆ 'ಹಳ್ಳ'ಕ್ಕೆ!)

ಸಿ.ಪಿ.ಕೆ., ಮೈಸೂರು

ಮುಷ್ಕರ ನಿಲ್ಲಲಿ, ಅನನುಕೂಲ ತಪ್ಪಲಿ

ಮುಷ್ಕರದಿಂದ ಓಡಾಟಕ್ಕೆ ಸಂಚಕಾರವಾಗಿರುವ ಸುದ್ದಿಯನ್ನು (ಪ್ರ.ವಾ., ಏ. 7) ಓದಿ ಆತಂಕವಾಯಿತು. ಆರನೇ ವೇತನ ಆಯೋಗದ ಶಿಫಾರಸು ಅನ್ವಯ ಆಗಬೇಕೆಂದು ಸಾರಿಗೆ ನೌಕರರು ಮುಷ್ಕರ ನಡೆಸುತ್ತಿರುವುದೇನೊ ಸರಿ. ಆದರೆ ನಗರ ಮತ್ತು ಗ್ರಾಮೀಣ ಭಾಗದ ಬಹುತೇಕ ವಿದ್ಯಾರ್ಥಿಗಳು ತಮ್ಮ ಶಾಲಾ-ಕಾಲೇಜುಗಳಿಗೆ ತೆರಳಬೇಕಾದರೆ ಬಸ್ಸನ್ನೇ ಅವಲಂಬಿಸಿರುವುದರಿಂದ ಸಾರಿಗೆ ನೌಕರರ ಮುಷ್ಕರದಿಂದ ಗೈರುಹಾಜರಾಗಬೇಕಾಗಿರುವುದು ಬೇಸರದ ಸಂಗತಿ. ಬಸ್ ಪಾಸ್ ಶುಲ್ಕವನ್ನು ತುಂಬಿದರೂ ದುಡ್ಡು ಕೊಟ್ಟು ಖಾಸಗಿ ವಾಹನದಲ್ಲಿ ಹೋಗಬೇಕಾಗಿದೆ.

ಕಾಲೇಜು ಉಪನ್ಯಾಸಕನ ವೃತ್ತಿಯಲ್ಲಿರುವ ನಾನು ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಕಾಲೇಜಿಗೆ ಹೋಗುತ್ತಿದ್ದಾಗ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದ ಗ್ರಾಮೀಣ ಭಾಗದ ನನ್ನಿಬ್ಬರು ವಿದ್ಯಾರ್ಥಿಗಳನ್ನು ಕಂಡು ವಾಹನ ನಿಲ್ಲಿಸಿ ವಿಚಾರಿಸಿದೆ. ಪರೀಕ್ಷಾ ಸಮಯವಾದ್ದರಿಂದ ತರಗತಿಗಳನ್ನು ತಪ್ಪಿಸಿಕೊಂಡರೆ ಓದಿದ್ದು ಅರ್ಥವಾಗದೆ ಪರೀಕ್ಷೆಯಲ್ಲಿ ಸಮಸ್ಯೆ ಉಂಟಾಗುವುದರಿಂದ ನಡೆದುಕೊಂಡೇ ಹೋಗುತ್ತಿರುವುದಾಗಿ ಅವರು ತಿಳಿಸಿದರು. ಮೊದಲೇ ಕೋವಿಡ್ ಮತ್ತು ಬೇಸಿಗೆಯ ಕಾವು ಹೆಚ್ಚಾಗುತ್ತಿರುವುದರಿಂದ ಸರ್ಕಾರವು ಸಾರಿಗೆ ನೌಕರರ ಸಮಸ್ಯೆಯನ್ನು ಬಗೆಹರಿಸಿ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳ ಹಿತ ಕಾಪಾಡುವುದು ಒಳಿತು.

ಶ್ರೀಧರ ಎಸ್. ವಾಣಿ, ಕೊಪ್ಪಳ

ಐಪಿಎಲ್ ಬೆಟ್ಟಿಂಗ್ ದಂಧೆಗೆ ಕಡಿವಾಣ ಹಾಕಿ

ಐಪಿಎಲ್ ಕ್ರಿಕೆಟ್ ಹಬ್ಬ ಮತ್ತೆ ಶುರುವಾಗುತ್ತಿದೆ. ಜೊತೆಗೆ ಬೆಟ್ಟಿಂಗ್ ಎಂಬ ಭೂತವೂ ಬರುತ್ತದೆ. ಕೋವಿಡ್‌ನಿಂದಾಗಿ ಜನ ಆರ್ಥಿಕ ಸಂಕಷ್ಟದಲ್ಲಿದ್ದು ಜೀವನ ನಿರ್ವಹಣೆಗಾಗಿ ಪರದಾಡುವ ಸ್ಥಿತಿ ಇದೆ. ಪ್ರತಿವರ್ಷ ಐಪಿಎಲ್ ನಡೆದಾಗಲೆಲ್ಲ ಸಾವಿರಾರು ಕೋಟಿ ಬೆಟ್ಟಿಂಗ್ ವ್ಯವಹಾರ ನಡೆಯುತ್ತದೆ. ಇದರಿಂದ ಸಾವಿರಾರು ಕುಟುಂಬಗಳು ಮನೆಮಠ ಕಳೆದುಕೊಂಡು ಬೀದಿಗೆ ಬೀಳುತ್ತವೆ. ಪ್ರಾಣವನ್ನೇ ಕಳೆದುಕೊಂಡ ಉದಾಹರಣೆಗಳೂ ಇವೆ.

ಬೆಟ್ಟಿಂಗ್ ಆಡುವಂತಹವರು ಹೆಚ್ಚಾಗಿ ಕಾಲೇಜು ವಿದ್ಯಾರ್ಥಿಗಳು, ಯುವಕರು, ನಗರಗಳಲ್ಲಿ ಹೋಟೆಲ್, ಮಾಲ್, ಶೋರೂಂ, ಶಾಪ್‌ಗಳಲ್ಲಿ ಕೆಲಸ ಮಾಡುವಂತಹವರು. ಈಗ ನಗರ, ಪಟ್ಟಣ ಮಾತ್ರವಲ್ಲದೆ ಹಳ್ಳಿಗಳಲ್ಲೂ ಐಪಿಎಲ್ ಬೆಟ್ಟಿಂಗ್ ಮೋಹಕ್ಕೆ ಬಲಿಯಾಗುತ್ತಿದ್ದಾರೆ. ಸರ್ಕಾರ ಇದರ ಗಂಭೀರತೆಯನ್ನು ಅರಿತು ಕಠಿಣ ಕಾನೂನುಗಳನ್ನು ಜಾರಿಗೆ ತರಬೇಕಾಗಿದೆ.

ಡಾ. ಗುರುಪ್ರಸಾದ ಎಚ್.ಎಸ್., ಮರಿಯಮ್ಮನಹಳ್ಳಿ

ಪ್ರಶಸ್ತಿಗೆ ಮಾನದಂಡ ಪಾಲನೆಯಾಗಲಿ

ಎಲೆಮರೆಯ ಕಾಯಿಯಂತೆ ಕನ್ನಡ ನಾಡು ನುಡಿಗಾಗಿ ಸೇವೆ ಸಲ್ಲಿಸುತ್ತಿರುವವರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದಂತಹ ವ್ಯಕ್ತಿಗಳಿಗೆ ನಾಡೋಜ ಪ್ರಶಸ್ತಿಯನ್ನು ನೀಡುವುದು ಸೂಕ್ತ. ರಾಜಕಾರಣಿಗಳಿಗೆ ಹಾಗೂ ಆಡಳಿತಾರೂಢ ಪಕ್ಷದೊಂದಿಗೆ ನಂಟು ಹೊಂದಿದ್ದಾರೆ ಎಂಬ ಕಾರಣಕ್ಕೆ ಉದ್ಯಮಿಗಳಿಗೆ ಈ ಪ್ರಶಸ್ತಿಯನ್ನು ನೀಡುವುದು ಸೂಕ್ತವಲ್ಲ. ಪ್ರಶಸ್ತಿಗೆ ಆಯ್ಕೆ ಮಾಡಲು ಸರಿಯಾದ ಮಾನದಂಡಗಳನ್ನು ಅಳವಡಿಸಿಕೊಂಡು, ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕು. ಈ ಸಮಯದಲ್ಲಿ ಯಾವುದೇ ರಾಜಕೀಯಕ್ಕೆ ಆಸ್ಪದ ಕೊಡದೆ ಆಯ್ಕೆಯ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇದು ಪ್ರಶಸ್ತಿ ಪ್ರದಾನ ಮಾಡುವ ವಿಶ್ವವಿದ್ಯಾಲಯ ಹಾಗೂ ಸರ್ಕಾರದ ಜವಾಬ್ದಾರಿಯಾಗಿರುತ್ತದೆ.

ವಿನಾಯಕ ಎಂ.ಎಂ., ಹಂಪಸಾಗರ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333,
Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಇಂಡಿಯನ್ ಪ್ರೀಮಿಯರ್ ಲೀಗ್

ಕೋವಿಡ್‌ಗೆ ಕ್ರಿಕೆಟ್ ಸೆಡ್ಡು..



ಇಂದಿನಿಂದ ಇಂಡಿಯನ್ ಪ್ರೀಮಿಯರ್ ಲೀಗ್ ಚುಟುಕು ಕ್ರಿಕೆಟ್ ಹಬ್ಬ



'ಮನರಂಜನೆಯ ಗಣಿ' ಇಂಡಿಯನ್ ಪ್ರೀಮಿಯರ್ ಲೀಗ್ ಟ್ವಿಂಟಿ -20 ಮುಂದೆ ಈ ವರ್ಷ ಕೊರೊನಾ ವೈರಸ್ 'ಎರಡನೇ ಅಲೆ'ಯನ್ನು ಮೀರಿ ನಿಲ್ಲುವ ಸವಾಲು ಇದೆ.

ಶುಕ್ರವಾರ ಚೆನ್ನೈನಲ್ಲಿ ಆರಂಭವಾಗಲಿರುವ 14ನೇ ಆವೃತ್ತಿಯ ಐಪಿಎಲ್ ಮೇ 30ರವರೆಗೂ ಆರು ತಾಣಗಳಲ್ಲಿ ಆಯೋಜನೆಗೊಂಡಿದೆ. ದೇಶದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳ ಜೊತೆ ಜೊತೆಗೆ ಕ್ರಿಕೆಟ್ ಜ್ವರವೂ ಏರುವ ನಿರೀಕ್ಷೆ ಮೂಡಿದೆ.

ಹೋದ ವರ್ಷ ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯ ಹೆಚ್ಚಳದಿಂದಾಗಿ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಟೂರ್ನಿ ನಡೆಸಲಾಗಿತ್ತು. ಆದರೆ, ಈ ಬಾರಿ ಸ್ವದೇಶದಲ್ಲಿಯೇ ಟೂರ್ನಿಯನ್ನು ಯಶಸ್ವಿಯಾಗಿ ಸಂಘಟಿಸುವ ವಿಶ್ವಾಸದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಇದೆ.

ಕಳೆದ ಎರಡು ವಾರಗಳಲ್ಲಿ ಮುಂಬೈನ ವಾಂಖೆಡೆ ಕ್ರೀಡಾಂಗಣ ಸಿಬ್ಬಂದಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ದೇವದತ್ತ ಪಡಿಕ್ಕಲ್, ಡೆಲ್ಲಿ ಕ್ಯಾಪಿಟಲ್ಸ್‌ನ ಅಕ್ಷರ್ ಪಟೇಲ್ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿತ್ತು. ಇದರಿಂದಾಗಿ ಟೂರ್ನಿಯ ಆಯೋಜನೆ ಏರುಪೇರಾಗುವ ಆತಂಕವೂ ಮೂಡಿತ್ತು. ಆದರೆ ಪೂರ್ವನಿರ್ಧರಿತ ವೇಳಾಪಟ್ಟಿ ಮತ್ತು ತಾಣಗಳಲ್ಲಿಯೇ ಟೂರ್ನಿ ಆಯೋಜನೆ ಮಾಡಲು ಬಿಸಿಸಿಐ ನಿರ್ಧರಿಸಿದೆ.

ತಟಸ್ಥ ತಾಣ; ಪ್ರೇಕ್ಷಕರಿಗಿಲ್ಲ ಪ್ರವೇಶ: ಐಪಿಎಲ್ ಇತಿಹಾಸದಲ್ಲಿ ಇದುವರೆಗೆ ಮೂರು ಬಾರಿ ವಿದೇಶದಲ್ಲಿ ಟೂರ್ನಿ ಆಯೋಜಿಸಲಾಗಿದೆ. ಆದರೆ, ದೇಶದಲ್ಲಿ ನಡೆದ ಯಾವುದೇ ಆವೃತ್ತಿಯಲ್ಲಿಯೂ ತಟಸ್ಥ ತಾಣದಲ್ಲಿ ಪಂದ್ಯಗಳು ನಡೆದಿರಲಿಲ್ಲ. ಆದರೆ ಈ ಸಲ ಟೂರ್ನಿಯಲ್ಲಿರುವ ಎಂಟೂ ತಂಡಗಳು ತಮ್ಮ ತವರಿನ ಅಂಗಳದಲ್ಲಿ ಒಂದೂ ಪಂದ್ಯವನ್ನು ಆಡುವುದಿಲ್ಲ.

ಬಯೋಬಬಲ್ ನಿಯಮ ಜಾರಿ ಮಾಡಲು ಸುಲಭವಾಗುವಂತೆ ಹಾಗೂ ತಂಡಗಳ ಪ್ರಯಾಣದ ಹೊರೆಯನ್ನು ತಪ್ಪಿಸಲು ಈ ರೀತಿಯ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಆರು ತಂಡಗಳಲ್ಲಿ ಪಂದ್ಯಗಳನ್ನು ಹಂಚಲಾಗಿದೆ. ಫೈನಲ್ ಪಂದ್ಯವು ಅಹಮದಾಬಾದಿನಲ್ಲಿ ನಡೆಯಲಿದೆ. ಇದಲ್ಲದೇ ಯಾವುದೇ ಕ್ರೀಡಾಂಗಣಕ್ಕೂ ಪ್ರೇಕ್ಷಕರು ಮತ್ತು ಮಾಧ್ಯಮದವರಿಗೆ ಪ್ರವೇಶ ಇಲ್ಲ.

ಅತಿ ದೊಡ್ಡ ಸವಾಲು: ಹೋದ ವರ್ಷದ ಜುಲೈ ತಿಂಗಳಲ್ಲಿ ಕ್ರಿಕೆಟ್ ಚಟುವಟಿಕೆಗಳು ಮರು ಆರಂಭವಾದವು. ಇಂಗ್ಲೆಂಡ್‌ನಲ್ಲಿ ವೆಸ್ಟ್ ಇಂಡೀಸ್ ಟೆಸ್ಟ್ ಸರಣಿ ಆಡುವ ಮೂಲಕ ಕೊರೊನಾ ಕಾಲಘಟ್ಟದ ಕ್ರಿಕೆಟ್ ಆರಂಭವಾಗಿತ್ತು. ಆದರೆ, ಕೋವಿಡ್ ಪ್ರಕರಣಗಳು ಏರುಗತಿಯಲ್ಲಿದ್ದ ಕಾರಣ ಭಾರತದಲ್ಲಿ ಈ ವರ್ಷದ ಜನವರಿ ಅಂತ್ಯದವರೆಗೂ ಅಂತರರಾಷ್ಟ್ರೀಯ ಕ್ರಿಕೆಟ್ ಚಟುವಟಿಕೆಗಳು ನಡೆಯಲಿಲ್ಲ.

ಇಂಗ್ಲೆಂಡ್ ವಿರುದ್ಧದ ಟೆಸ್ಟ್, ಟಿ20 ಮತ್ತು ಏಕದಿನ ಕ್ರಿಕೆಟ್ ಸರಣಿಗಳು ಯಶಸ್ವಿಯಾಗಿ ನಡೆದವು. ಚೆನ್ನೈ, ಅಹಮದಾಬಾದ್ ಮತ್ತು ಪುಣೆಯಲ್ಲಿ ಆ ಸರಣಿಗಳ ಪಂದ್ಯಗಳು ನಡೆದವು. ಬಯೋಬಬಲ್ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವಲ್ಲಿ ಆಡಳಿತವು ಯಶಸ್ವಿಯಾಯಿತು. ಅದರಿಂದ ಆತ್ಮವಿಶ್ವಾಸದಲ್ಲಿರುವ ಮಂಡಳಿಗೆ ಆತಂಕವೂ ಇದೆ. ಏಕೆಂದರೆ 53 ದಿನಗಳ ಐಪಿಎಲ್‌ನಲ್ಲಿ 200ಕ್ಕೂ ಹೆಚ್ಚು ಆಟಗಾರರು, ಅಷ್ಟೇ ಸಂಖ್ಯೆಯ ನೆರವು ಸಿಬ್ಬಂದಿ, ಕ್ರೀಡಾಂಗಣ ಸಿಬ್ಬಂದಿ ಮತ್ತಿತರ ಅಧಿಕಾರಿಗಳನ್ನು ಬಯೋಬಬಲ್‌ನಲ್ಲಿಯೇ ನಿಭಾಯಿಸುವುದು ದೊಡ್ಡ ಸವಾಲಾಗಲಿದೆ ಎಂದು ಬಿಸಿಸಿಐನ ಕೆಲವು ಅಧಿಕಾರಿಗಳು ಹೇಳಿದ್ದಾರೆ.

'ಸೋಲು ಮತ್ತು ಗೆಲುವು ಆಟದ ಭಾಗ. ಈ ಬಾರಿ ಪ್ರಶಸ್ತಿ ಯಾರೇ ಗೆಲ್ಲಲಿ, ಯಾವುದೇ ಅವಘಡವಿಲ್ಲದೇ ಟೂರ್ನಿ ಮುಗಿದರೆ ಅದೇ ದೊಡ್ಡ ಜಯ' ಎಂದು ಐಪಿಎಲ್ ಆಡಳಿತ ಸಮಿತಿಯ ಪದಾಧಿಕಾರಿಯೊಬ್ಬರು ಹೇಳುತ್ತಾರೆ.

ಹಣದ ಹರಿವಿನ ನಿರೀಕ್ಷೆ: ಈ ಬಾರಿಯ ಐಪಿಎಲ್‌ನಿಂದ ಬಿಸಿಸಿಐಗೆ ಸುಮಾರು ನಾಲ್ಕು ಸಾವಿರ ಕೋಟಿ ರೂಪಾಯಿ ಆದಾಯ ಲಭಿಸುವ ಸಾಧ್ಯತೆ ಇದೆ. ವಿವೊ ಮೊಬೈಲ್ ಮತ್ತೆ ತನ್ನ ಪ್ರಾಯೋಜಕತ್ವದ ಹಕ್ಕುಗಳನ್ನು ಪಡೆದುಕೊಂಡಿದೆ. ಉಳಿದಂತೆ ಹೊಸ ಸಹಪ್ರಾಯೋಜಕರು ಕೂಡ ಕೈಜೋಡಿಸಿದ್ದಾರೆ. ಹೋದ ವರ್ಷಕ್ಕಿಂತ ಶೇ 25ರಷ್ಟು ಹೆಚ್ಚು ಪ್ರಮಾಣದಲ್ಲಿ ಪ್ರಾಯೋಜಕತ್ವದ ಮಟ್ಟ ಸುಧಾರಣೆಗೊಂಡಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಅಲ್ಲದೇ ಫ್ರಾಂಚೈಸಿಗಳಿಗೂ ಹೋದ ಬಾರಿಗಿಂತ ಶೇ 15-20ರಷ್ಟು ಹೆಚ್ಚು ಲಾಭವಾಗುವ ನಿರೀಕ್ಷೆ ಮೂಡಿದೆ. ಹೋದ ವರ್ಷ ಪೆಟ್ಟು ತಿಂದಿದ್ದ ಆರ್ಥಿಕತೆಯು ನಿಧಾನವಾಗಿ ಚೇತರಿಕೆಯತ್ತ ಸಾಗುತ್ತಿದೆ.

ಈ ಹಂತದಲ್ಲಿ ಮಾರುಕಟ್ಟೆಯಲ್ಲಿ ತಮ್ಮ ಉತ್ಪನ್ನಗಳಿಗೆ ಪ್ರಚಾರ ಗಿಟ್ಟಿಸಿಕೊಂಡು ವಹಿವಾಟನ್ನು ವೃದ್ಧಿಸಿಕೊಳ್ಳಲು ಉದ್ಯಮಗಳು ಕೂಡ ಐಪಿಎಲ್ ಮೇಲೆ ಕಣ್ಣಿಟ್ಟಿವೆ. ಇನ್ನೊಂದೆಡೆ ಕ್ರಿಕೆಟ್‌ಪ್ರಿಯರು ತಮ್ಮ ನೆಚ್ಚಿನ ಆಟಗಾರರನ್ನು ಒಂದೇ ವೇದಿಕೆಯಲ್ಲಿ ನೋಡಿ ಸಂತಸಪಡಲು ತುದಿಗಾಲಿನಲ್ಲಿ ನಿಂತಿದ್ದಾರೆ.

ಗಿರೀಶ್ ದೊಡ್ಡಮನಿ

ಐಪಿಎಲ್: ನಾಯಕರ ಸಾಧನೆ

ವಿರಾಟ್ ಕೊಹ್ಲಿ

ತಂಡ:ರಾಯಲ್ ಚಾಲೆಂಜರ್ಸ್ ಬೆಂಗಳೂರು

ಪಂದ್ಯ	: 192
ರನ್	: 5,878
ಗರಿಷ್ಠ	: 113
ಸ್ಟ್ರೈಕ್‌ರೇಟ್	: 130.73
ಶತಕ	: 5
ಅರ್ಧಶತಕ	: 39

ಸಂಜು ಸ್ಯಾಮ್ಸನ್

ತಂತಂಡ : ರಾಜಸ್ಥಾನ ರಾಯಲ್ಸ್

ಪಂದ್ಯ	: 107
ರನ್	: 2,584
ಗರಿಷ್ಠ	: 102*
ಸ್ಟ್ರೈಕ್‌ರೇಟ್	: 133.74
ಶತಕ	: 2
ಅರ್ಧಶತಕ	: 13

ಮಹೇಂದ್ರ ಸಿಂಗ್ ಧೋನಿ

ತಂಡ: ಚೆನ್ನೈ ಸೂಪರ್ ಕಿಂಗ್ಸ್

ಪಂದ್ಯ	: 204
ರನ್	: 4,632
ಗರಿಷ್ಠ	: 84*
ಸ್ಟ್ರೈಕ್‌ರೇಟ್	: 136.75
ಅರ್ಧಶತಕ	: 23

ಏಯಾನ್ ಮಾರ್ಗನ್

ತಂಡ : ಕೋಲ್ಕತ್ತ ನೈಟ್ ರೈಡರ್ಸ್

ಪಂದ್ಯ	: 66
ರನ್	: 1,272
ಗರಿಷ್ಠ	: 68*
ಸ್ಟ್ರೈಕ್‌ರೇಟ್	: 126.31
ಅರ್ಧಶತಕ	: 5

ರೋಹಿತ್ ಶರ್ಮಾ

ತಂಡ : ಮುಂಬೈ ಇಂಡಿಯನ್ಸ್

ಪಂದ್ಯ	: 200
ರನ್	: 5,230
ಗರಿಷ್ಠ	: 109*
ಸ್ಟ್ರೈಕ್‌ರೇಟ್	: 130.61
ಶತಕ	: 1
ಅರ್ಧಶತಕ	: 39

ಕೆ.ಎಲ್.ರಾಹುಲ್

ತಂಡ : ಪಂಜಾಬ್ ಕಿಂಗ್ಸ್

ಪಂದ್ಯ	: 81
ರನ್	: 2,647
ಗರಿಷ್ಠ	: 132*
ಸ್ಟ್ರೈಕ್‌ರೇಟ್	: 135.81
ಶತಕ	: 2
ಅರ್ಧಶತಕ	: 21

ಡೇವಿಡ್ ವಾರ್ನರ್

ತಂಡ: ಸನ್ ರೈಸರ್ಸ್ ಹೈದರಾಬಾದ್

ಪಂದ್ಯ	: 142
ರನ್	: 5,254
ಗರಿಷ್ಠ	: 126
ಸ್ಟ್ರೈಕ್‌ರೇಟ್	: 141.54
ಶತಕ	: 4
ಅರ್ಧಶತಕ	: 48

ರಿಷಭ್ ಪಂತ್

ತಂಡ : ಡೆಲ್ಲಿ ಕ್ಯಾಪಿಟಲ್ಸ್

ಪಂದ್ಯ	: 68
ರನ್	: 2,079
ಗರಿಷ್ಠ	: 128*
ಸ್ಟ್ರೈಕ್‌ರೇಟ್	: 151.97
ಶತಕ	: 1
ಅರ್ಧಶತಕ	: 12

ನಾಲ್ವರು ವಿಕೆಟ್‌ಕೀಪರ್‌ಗಳು ನಾಯಕರು!

ಈ ಬಾರಿಯ ಐಪಿಎಲ್ ವಿಶೇಷವೆಂದರೆ ನಾಲ್ಕು ತಂಡಗಳಿಗೆ ವಿಕೆಟ್‌ಕೀಪರ್-ಬ್ಯಾಟ್ಸ್‌ಮನ್‌ಗಳದ್ದೇ ಸಾರಥ್ಯ. ಈ ಮೊದಲು ಚೆನ್ನೈ ಸೂಪರ್ ಕಿಂಗ್ಸ್‌ಗೆ ಮಹೇಂದ್ರಸಿಂಗ್ ಧೋನಿ ಮತ್ತು ಪಂಜಾಬ್ ಕಿಂಗ್ಸ್‌ಗೆ ಕೆ.ಎಲ್. ರಾಹುಲ್ ನಾಯಕರಾಗಿದ್ದರು.

ಇದೀಗ ಈ ಸಾಲಿಗೆ ರಿಷಭ್ ಪಂತ್ ಮತ್ತು ಸಂಜು ಸ್ಯಾಮ್ಸನ್ ಸೇರಿದ್ದಾರೆ. ಈಚೆಗೆ ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ಗಾಯಗೊಂಡ ಶ್ರೇಯಸ್ ಅಯ್ಯರ್ ಈ ಬಾರಿ ಐಪಿಎಲ್‌ನಲ್ಲಿ ಆಡುವುದಿಲ್ಲ. ಆದ್ದರಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕತ್ವದ ಹೊಣೆಯನ್ನು ರಿಷಭ್‌ಗೆ ನೀಡಲಾಗಿದೆ.

ರಾಜಸ್ಥಾನ್ ರಾಯಲ್ಸ್ ತಂಡಕ್ಕೆ ಈ ಮೊದಲು ನಾಯಕರಾಗಿದ್ದವರು ಈ ವರ್ಷ ಬೇರೆ ತಂಡದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಆದ್ದರಿಂದ ಕೇರಳದ ಹುಡುಗ ಸಂಜು ಸ್ಯಾಮ್ಸನ್ ನಾಯಕರಾಗಿದ್ದಾರೆ.

ಕಣದಲ್ಲಿ ಕನ್ನಡಿಗರು

ಆಟಗಾರ	ತಂಡ	ಶೈಲಿ
ಕೆ.ಎಲ್.ರಾಹುಲ್	ಪಂಜಾಬ್	ವಿಕೆಟ್‌ಕೀಪರ್ ಬ್ಯಾಟ್ಸ್‌ಮನ್
ಮಯಂಕ್ ಅಗರವಾಲ್	ಪಂಜಾಬ್	ಬ್ಯಾಟ್ಸ್‌ಮನ್
ದೇವದತ್ತ ಪಡಿಕ್ಕಲ್	ಬೆಂಗಳೂರು	ಬ್ಯಾಟ್ಸ್‌ಮನ್
ಪವನ್ ದೇಶಪಾಂಡೆ	ಬೆಂಗಳೂರು	ಬ್ಯಾಟ್ಸ್‌ಮನ್
ಕೃಷ್ಣಪ್ಪ ಗೌತಮ್	ಚೆನ್ನೈ	ಆಲ್‌ರೌಂಡರ್
ರಾಬಿನ್ ಉತ್ತಪ್ಪ	ಚೆನ್ನೈ	ಬ್ಯಾಟ್ಸ್‌ಮನ್
ಕೆ.ಸಿ.ಕಾರ್ಯಪ್ಪ	ರಾಜಸ್ಥಾನ	ಬೌಲರ್
ಶ್ರೇಯಸ್ ಗೋಪಾಲ್	ರಾಜಸ್ಥಾನ	ಆಲ್‌ರೌಂಡರ್
ಪ್ರವೀಣ್ ದುಬೆ	ಡೆಲ್ಲಿ	ಬೌಲರ್
ಪ್ರಸಿದ್ಧ ಕೃಷ್ಣ	ಕೋಲ್ಕತ್ತ	ಬೌಲರ್
ಕರುಣ್ ನಾಯರ್	ಕೋಲ್ಕತ್ತ	ಬ್ಯಾಟ್ಸ್‌ಮನ್
ಮನೀಷ್ ಪಾಂಡೆ	ಹೈದರಾಬಾದ್	ಬ್ಯಾಟ್ಸ್‌ಮನ್
ಜಗದೀಶ್ ಸುಚಿತ್	ಹೈದರಾಬಾದ್	ಬೌಲರ್

ಐಪಿಎಲ್ ಪ್ರಶಸ್ತಿ ವಿಜೇತರು

ವರ್ಷ	ವಿಜೇತ ತಂಡ	ರನ್ನರ್‌ಅಪ್
2008	ರಾಜಸ್ಥಾನ	ಚೆನ್ನೈ
2009	ಡೆಕ್ಕನ್ ಚಾರ್ಜರ್ಸ್	ಬೆಂಗಳೂರು
2010	ಚೆನ್ನೈ	ಮುಂಬೈ
2011	ಚೆನ್ನೈ	ಬೆಂಗಳೂರು
2012	ಕೋಲ್ಕತ್ತ	ಚೆನ್ನೈ
2013	ಮುಂಬೈ	ಚೆನ್ನೈ
2014	ಕೋಲ್ಕತ್ತ	ಪಂಜಾಬ್
2015	ಮುಂಬೈ	ಚೆನ್ನೈ
2016	ಹೈದರಾಬಾದ್	ಬೆಂಗಳೂರು
2017	ಮುಂಬೈ	ಪುಣೆ ಸೂಪರ್‌ಜೈಂಟ್ಸ್
2018	ಚೆನ್ನೈ	ಹೈದರಾಬಾದ್
2019	ಮುಂಬೈ	ಚೆನ್ನೈ
2020	ಮುಂಬೈ	ಡೆಲ್ಲಿ

ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದವರು (ನಾಯಕರನ್ನು ಹೊರತುಪಡಿಸಿ)

ಆಟಗಾರ	ತಂಡ	ರನ್
ಸುರೇಶ್ ರೈನಾ	ಚೆನ್ನೈ	5,368
ಶಿಖರ್ ಧವನ್	ಡೆಲ್ಲಿ	5,197
ಎಬಿ ಡಿವಿಲಿಯರ್ಸ್	ಬೆಂಗಳೂರು	4,849

ಅತಿ ಹೆಚ್ಚು ಸಿಕ್ಸರ್ ಸಿಡಿಸಿದವರು

ಆಟಗಾರ	ತಂಡ	ಸಿಕ್ಸರ್
ಕ್ರಿಸ್ ಗೇಲ್	ಪಂಜಾಬ್ ಕಿಂಗ್ಸ್	349
ಎಬಿ ಡಿವಿಲಿಯರ್ಸ್	ಬೆಂಗಳೂರು	235
ಎಂ.ಎಸ್.ಧೋನಿ	ಚೆನ್ನೈ	216

ಅತಿ ಹೆಚ್ಚು ಬೌಂಡರಿ ಗಳಿಸಿದವರು

ಶಿಖರ್ ಧವನ್	ಡೆಲ್ಲಿ	591
ಡೇವಿಡ್ ವಾರ್ನರ್	ಹೈದರಾಬಾದ್	510
ವಿರಾಟ್ ಕೊಹ್ಲಿ	ಬೆಂಗಳೂರು	503

ಅತಿ ವೇಗದ ಶತಕ

ಆಟಗಾರ	ತಂಡ	ಎದುರಾಳಿ	ಎದುರಿಸಿದ ಎಸೆತ	ಸ್ಥಳ	ವರ್ಷ
ಕ್ರಿಸ್ ಗೇಲ್	ಬೆಂಗಳೂರು	ಪುಣೆ ವಾರಿಯರ್ಸ್	30	ಬೆಂಗಳೂರು	2013
ಯೂಸುಫ್ ಪಠಾಣ್	ರಾಜಸ್ಥಾನ	ಮುಂಬೈ	37	ಮುಂಬೈ	2010
ಡೇವಿಡ್ ಮಿಲ್ಲರ್	ಪಂಜಾಬ್	ಎದುರಾಳಿ	38	ಮೊಹಾಲಿ	2013

ಇನಿಂಗ್ಸ್‌ವೊಂದರಲ್ಲಿ ಗರಿಷ್ಠ ವೈಯಕ್ತಿಕ ಸ್ಕೋರ್

ಆಟಗಾರ	ರನ್	ತಂಡ	ಎದುರಾಳಿ	ವರ್ಷ	ಸ್ಥಳ
ಕ್ರಿಸ್ ಗೇಲ್	175*	ಬೆಂಗಳೂರು	ಪುಣೆ ವಾರಿಯರ್ಸ್	2013	ಬೆಂಗಳೂರು
ಬ್ರೆಂಡನ್ ಮೆಕಲಂ	158*	ಕೋಲ್ಕತ್ತ	ಬೆಂಗಳೂರು	2008	ಬೆಂಗಳೂರು
ಎಬಿ ಡಿವಿಲಿಯರ್ಸ್	133*	ಬೆಂಗಳೂರು	ಮುಂಬೈ	2015	ಮುಂಬೈ

ಕೊಹ್ಲಿ ಬಳಗಕ್ಕೆ 'ಚಾಂಪಿಯನ್' ರೋಹಿತ್ ಪಡೆ ಸವಾಲು



ಚೆನ್ನೈ (ಪಿಟಿಐ): 'ರನ್ ಯಂತ್ರ' ವಿರಾಟ್ ಕೊಹ್ಲಿ ಮತ್ತು ಯಾರ್ಕರ್ ಕಿಂಗ್ ಜಸ್‌ಪ್ರೀತ್ ಬೂಮ್ರಾ ಶುಕ್ರವಾರ ಚೆಪಾಕ್ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಲಿದ್ದಾರೆ.

ಇಲ್ಲಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿ ವಿರಾಟ್ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮತ್ತೊಂದು ಸಲ ಪ್ರಶಸ್ತಿ ಗೆಲುವಿನ ಕನಸನ್ನು ಬೆನ್ನತ್ತಲಿದೆ. ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವನ್ನು ಎದುರಿಸಲಿದೆ. ರೋಹಿತ್ ಶರ್ಮಾ ಪಡೆಯ 'ಟ್ರಂಪ್ ಕಾರ್ಡ್' ಬೂಮ್ರಾ ಈ ಹಿಂದೆಯೂ ಮುಂಬೈ ತಂಡದ ಪ್ರಶಸ್ತಿ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಸರ್ವರೀತಿಯಿಂದಲೂ ಬಲಿಷ್ಠವಾಗಿರುವ ಮುಂಬೈ ತಂಡಕ್ಕೆ ಸೆಡ್ಡು ಹೊಡೆಯಲು ವಿರಾಟ್ ಬಳಗವೂ ಸಿದ್ಧವಾಗಿದೆ. ಈಚೆಗೆ ನಡೆದಿದ್ದ ಹರಾಜು ಪ್ರಕ್ರಿಯೆಯಲ್ಲಿ ಆಸ್ಟ್ರೇಲಿಯಾದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ನ್ಯೂಜಿಲೆಂಡ್‌ನ ವೇಗಿ ಕೈಲ್ ಜೆಮಿಸನ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಇದು ಬಳಗದಲ್ಲಿ ಹೊಸ ಉತ್ಸಾಹ ಮೂಡಲು ಕಾರಣವಾಗಿದೆ. ಕೋವಿಡ್‌ನಿಂದ ಚೇತರಿಸಿಕೊಂಡು ಮರಳಿರುವ ದೇವದತ್ತ ಪಡಿಕ್ಕಲ್ ಮತ್ತು ನಾಯಕ ವಿರಾಟ್ ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ಹೋದ ವರ್ಷ ರನ್‌ಗಳ ಹೊಳೆ ಹರಿಸಿದ್ದ ದೇವದತ್ತ ಈ ಬಾರಿಯೂ ಮಿಂಚುವ ನಿರೀಕ್ಷೆ ಇದೆ.

'ಮಿಸ್ಟರ್ 360 ಡಿಗ್ರಿ' ಖ್ಯಾತಿಯ ಎಬಿ ಡಿವಿಲಿಯರ್ಸ್, ಫಿನ್ ಅಲೆನ್, ಈಚೆಗೆ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮಿಂಚಿದ್ದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ತಂಡದ ಬ್ಯಾಟಿಂಗ್ ಶಕ್ತಿಯಾಗಿದ್ದಾರೆ. ಆದರೆ ಮುಂಬೈ ತಂಡದ ಬೂಮ್ರಾ, ನೇಥನ್ ಕೌಲ್ಟರ್ ನೈಲ್ ಮತ್ತು ಟ್ರೆಂಟ್ ಬೌಲ್ಟ್ ಅವರ ಪ್ರಭಾವಿ ದಾಳಿಯನ್ನು ಮೆಟ್ಟಿನಿಲ್ಲುವ ಸವಾಲು ಕೂಡ ಬೆಂಗಳೂರು ಬ್ಯಾಟಿಂಗ್ ಪಡೆಯ ಮುಂದಿದೆ. ಮುಂಬೈ ತಂಡದ ಬ್ಯಾಟಿಂಗ್ ಬಲಿಷ್ಠವಾಗಿದೆ. ರೋಹಿತ್, ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ ಮತ್ತು ಕೀರನ್ ಪೊಲಾರ್ಡ್ ಅವರ ಅಬ್ಬರಕ್ಕೆ ತಡೆಯೊಡ್ಡಲು ವಿರಾಟ್ ಬೌಲರ್‌ಗಳು ವಿಶೇಷ ಯೋಜನೆಯೊಂದಿಗೆ ಕಣಕ್ಕಿಳಿಯುವುದು ಅನಿವಾರ್ಯ. ಜೆಮಿಸನ್, ನವದೀಪ್ ಸೈನಿ, ಮೊಹಮ್ಮದ್ ಸಿರಾಜ್ ಮತ್ತು ಅನುಭವಿ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರ ಸತ್ವಪರೀಕ್ಷೆಯಾಗುವ ಸಾಧ್ಯತೆ ಇದೆ.

ಐದು ತಿಂಗಳ ಅವಧಿಯಲ್ಲಿ ನಡೆಯುತ್ತಿರುವ ಎರಡನೇ ಐಪಿಎಲ್‌ನ ಬಯೋಬಬಲ್ ಒತ್ತಡದೊಂದಿಗೆ ಜಯದ ಆರಂಭ ಮಾಡುವ ಛಲದಲ್ಲಿ ಉಭಯ ತಂಡಗಳು ಇವೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮಾಯೆಯ ಅಂಕುಶ

ಪರಬೊಮ್ಮ ಜೀವಭೇದದಿ ನಿಜೈಕ್ಯವ ಮರೆಯೆ |
ಮರಳಿ ತನ್ನೊಟ್ಟನವನರಸಲೆಚ್ಚರಿಸಲ್ ||
ನರನಾರಿಯರ ಪರಸ್ಪರ ಮೋಹದಲಿ ಮಾಯೆ |
ನಿರವಿಸಿಹಳಂಕುಶವ – ಮಂಕುತಿಮ್ಮ || 405 ||

ಪದ-ಅರ್ಥ: ನಿಜೈಕ್ಯ = ನಿಜರೂಪ, ತನ್ನೊಟ್ಟನವನರಸಲೆಚ್ಚರಿಸುತ = ತನ್ನ + ಒಟ್ಟನ್ (ನಿಜರೂಪವನ್ನು) + ಅವನು + ಅರಸಲ್ (ಹುಡುಕಾಡಲು) + ಎಚ್ಚರಿಸಲ್, ನಿರವಿಸಿಹಳಂಕುಶವ = ನಿರವಿಸಿಹಳು (ನಿರ್ಮಿಸಿದ್ದಾಳೆ) + ಅಂಕುಶವ.

ವಾಚ್ಯಾರ್ಥ: ಪರಬ್ರಹ್ಮ, ದೇಹಭಾವದಲ್ಲಿ ಸೇರಿಕೊಂಡು ತನ್ನ ನಿಜಸ್ವರೂಪವನ್ನು ಮರೆತಾಗ, ತನ್ನ ನೈಜತೆಯನ್ನು ಅವನು ಅರಸಲೆಂದು, ಎಚ್ಚರಿಸಲು, ಮಾಯೆ ನರ-ನಾರಿಯರ ಪರಸ್ಪರ ಮೋಹದ ಅಂಕುಶವನ್ನಿಟ್ಟಿದ್ದಾಳೆ.

ವಿವರಣೆ: ಪರಬ್ರಹ್ಮ ವಸ್ತು ಎಂದಿದ್ದರೂ ಒಂದೇ, ಅದಕ್ಕೆ ಯಾವ ಮೋಹ ಮಾಯೆಯ ಜಂಜಡವಿಲ್ಲ. ಆದರೆ ಪ್ರಪಂಚದ ಸೃಷ್ಟಿಗೆ ಅದು ಕೋಟಿ, ಕೋಟಿ ರೂಪಗಳಲ್ಲಿ ಹೊಮ್ಮಿ ನಿಂತಿತು. ಹಾಗೆಯೇ ದೇಹಭಾವದಲ್ಲಿದ್ದಾಗ ಅದು ಪ್ರಪಂಚದಲ್ಲಿ ಸಂತೋಷವನ್ನು ಪಡುತ್ತಾ, ತಾನೇ ದೇಹವೆಂದು ಭಾವಿಸಿಕೊಂಡು ತನ್ನ ನೈಜಸ್ವರೂಪವನ್ನು ಮರೆಯುತ್ತದಂತೆ. ಭಗವಂತ ನಾರದರನ್ನು ಕೇಳಿದನಂತೆ, 'ಮನುಷ್ಯರಿಗೆ ಭೂಲೋಕದಲ್ಲಿ ಯಾಕೆ ಅಂಥ ಆಕರ್ಷಣೆ, ಭೂಮಿಯನ್ನು ಬಿಟ್ಟು ಬರಲು ಅಳುತ್ತಾರಲ್ಲ?'. ನಾರದ ಹೇಳಿದ, 'ಸ್ವಾಮಿ, ನೀನೊಮ್ಮೆ ಹೋಗಿ ನೋಡು', ಭಗವಂತ ಭೂಮಿಗೆ ಹಂದಿಯಾಗಿ ಬಂದ. ಅವನಿಗೊಬ್ಬ ಹೆಣ್ಣು ಹಂದಿ ಸಂಗಾತಿಯಾಗಿ ಬಂದಳು. ಆಕೆಯ ರೂಪಕ್ಕೆ, ಒಯ್ಯಾರಕ್ಕೆ ಮಣಿದ ಭಗವಂತ ಆಕೆಯೊಂದಿಗೇ ಇದ್ದ. ಅನೇಕ ಮರಿಗಳಾದವು. ವರ್ಷಗಳು ಕಳೆದವು. ಭಗವಂತನ ಅವಸ್ಥೆ ನೋಡಲು ನಾರದ ಬಂದ. ಕೊಳಚೆಯ ರಾಡಿಯಲ್ಲಿ ಆನಂದವಾಗಿ ಮಲಗಿದೆ ಹಂದಿಯ ಪರಿವಾರ. ನಾರದ ಕೂಗಿದ, 'ಭಗವಂತ ಏನು ನಿನ್ನ ಅವಸ್ಥೆ? ವೈಕುಂಠವನ್ನು ಬಿಟ್ಟು ಈ ಕೊಳಕಿನಲ್ಲಿ ಹೊರಳಾಡುತ್ತಿದ್ದೀಯಲ್ಲ. ಸಾಕು ಬಾ. ಸ್ವರ್ಗಕ್ಕೆ ಹೋಗೋಣ'. ಭಗವಂತ ಹೇಳಿದ, 'ಇದು ಎಷ್ಟು ಆನಂದವಾಗಿದೆ. ಇದಕ್ಕಿಂತ ಹೆಚ್ಚಿನ ಸುಖ ಸ್ವರ್ಗದಲ್ಲೇನು ಇದ್ದೀತು?', ನಾರದ ಭೂಲೋಕದ ಪ್ರೇಮದ ಸೆಳೆತದ ತೀವ್ರತೆಗೆ ಬೆರಗಾದ.

ಕಗ್ಗ ಈ ಕಥೆಯ ಸ್ವಾರಸ್ಯವನ್ನು ಸುಂದರವಾಗಿ ಹೇಳುತ್ತದೆ. ದೇಹ ಭಾವದಲ್ಲಿದ್ದ ಪರಬ್ರಹ್ಮ ತನ್ನ ನೈಜತೆಯನ್ನು ಮರೆದಾಗ, ಅವನನ್ನು ಎಚ್ಚರಿಸಿ, ನೆನಪಿಸಲು ಮಾಯೆ ಒಂದು ಅಂಕುಶವನ್ನು ಬಳಸುತ್ತಾಳೆ. ಆ ಅಂಕುಶವೇ ಪುರುಷ-ಸ್ತ್ರೀಯರ ಮೋಹದ ಬಲೆ. ಪ್ರಪಂಚದಲ್ಲಿ ಅತ್ಯಂತ ತೀವ್ರವಾದ ಆಕರ್ಷಣೆ ಇದು. ಇದರ ಮೋಹದಲ್ಲಿ ಬಿದ್ದ ಮನುಷ್ಯ ಒದ್ದಾಡುತ್ತಾನೆ, ಕಷ್ಟಪಡುತ್ತಾನೆ, ಏನೇನೋ ಕರ್ಮಗಳನ್ನು ಮಾಡುತ್ತಾನೆ. ಅದಕ್ಕೆ ಪಶ್ಚಾತ್ತಾಪಪಟ್ಟು ನರಳುತ್ತಾನೆ. ಆಗ ಈ ಪ್ರಪಂಚದ ನೋವು, ಏಳು-ಬೀಳು ಸಾಕೆನ್ನಿಸುತ್ತದೆ. ಆಗ ಮನಸ್ಸು ಒಳಗೆ ತಿರುಗುತ್ತದೆ, ಆತ್ಮದರ್ಶನವಾಗುತ್ತದೆ. ಇದೊಂದು ದೃಷ್ಟಿ. ಇನ್ನೊಂದು ದೃಷ್ಟಿಯಂತೆ ನರ-ನಾರಿಯರ ಪರಸ್ಪರ ಆಕರ್ಷಣೆಯಿಂದ ಆನಂದ ದೊರಕುವುದು. ಆ ಆನಂದವೂ ಬ್ರಹ್ಮಚೈತನ್ಯವೇ. ಆದ್ದರಿಂದ ಅದರಿಂದಲೂ ಐಕ್ಯತೆ ಸಾಧ್ಯವಾಗುತ್ತದೆ. ❖

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ 9 ಏಪ್ರಿಲ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೇವತಿ ತ್ರಯೋದಶೀ ಗಂ. 55-33 (ರಾ. 4-31) ಶುಕ್ರವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 60-00 (ದಿನಪೂರ್ತಿ) ಶುಕ್ಲ ನಾಮ ಯೋಗ ಗಂ 19-46 ಗರಜ ಕರಣ ಗಂ. 25-1 ವಿಷ ಗಂ. 15-33 ಅಮೃತ ಗಂ. 40-45 : ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-15 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 2 6

ಮೇಷ: ಸರ್ಕಾರಿ ನೌಕರಿಯಲ್ಲಿರುವವರು ಕಾರ್ಯನೈಪುಣ್ಯತೆಯಿಂದ ಪ್ರಶಂಸೆಗೆ ಭಾಜನರಾಗುವಿರಿ. ಒಪ್ಪಿಕೊಂಡ ಕಾರ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಿ. ಮಾನಸಿಕ ಸ್ಥಿರತೆ ಕಾಪಾಡಿಕೊಳ್ಳಿ. ದೇವತಾ ಆರಾಧನೆ ಶ್ರೇಯಸ್ಕರ.

ವೃಷಭ: ಕಚೇರಿ ಕೆಲಸಗಳಲ್ಲಿ ಜಾಗರೂಕರಾಗಿ ವ್ಯವಹರಿಸಿ. ಸಹೋದ್ಯೋಗಿಗಳಿಂದ ಸಕಾಲಿಕ ಸಲಹೆಗಳು ದೊರೆಯುವವು. ಬೇರೆಯವರ ಒತ್ತಡಕ್ಕೆ ದುಂದು ವೆಚ್ಚ ಮಾಡುವ ಸಾಧ್ಯತೆ.

ಮಿಥುನ: ಆಕಸ್ಮಿಕ ಧನ ಪ್ರಾಪ್ತಿ. ಕಳೆದು ಹೋದ ವಸ್ತುವನ್ನು ಮರಳಿ ಪಡೆಯಲಿದ್ದೀರಿ. ಮಹಿಳೆಯರಿಗೆ ಸಾಮಾಜಿಕ ಕಾರ್ಯಗಳಲ್ಲಿ ಬಿಡುವಿಲ್ಲದ ಕೆಲಸ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ನಿಖರತೆ ದೊರಕಲಿದೆ.

ಕರ್ಕಾಟಕ: ವ್ಯವಹಾರದಲ್ಲಿ ಮಿತವ್ಯಯ ಸಾಧಿಸಲಿದ್ದೀರಿ. ವದಂತಿಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ನೈಪುಣ್ಯತೆ ಕಾಯ್ದುಕೊಳ್ಳುವಿರಿ. ಕಾರ್ಯನಿಮಿತ್ತ ದೂರ ಪ್ರಯಾಣ.

ಸಿಂಹ: ಅಡ್ಡಿ ಆತಂಕಗಳಿಲ್ಲದೆ ಕಾರ್ಯಗಳು ನೆರವೇರುವವು. ಮಧ್ಯವರ್ತಿಗಳ ಸಹಾಯದಿಂದ ವಿವಾಹಾದಿ ಕಾರ್ಯಗಳು ಸುಸೂತ್ರವಾಗಿ ನೆರವೇರುವವು. ಸಂಗಾತಿಯ ಮಾತುಗಳನ್ನು ಗೌರವಿಸಿ. ಹಿರಿಯರ ಆರೋಗ್ಯದಲ್ಲಿ ಸುಧಾರಣೆ.

ಕನ್ಯಾ: ವಿಶೇಷ ಸಮಾರಂಭವೊಂದರಲ್ಲಿ ಭಾಗಿ. ವರ್ತಮಾನದ ವಿಷಯಗಳನ್ನು ಅವಲೋಕಿಸಿ ಕಾರ್ಯ ಮಗ್ನರಾಗುವುದು ಉಚಿತ. ಆರ್ಥಿಕ ಸಮೃದ್ಧಿಯ ದಿನ. ಪರರಿಂದ ಸಹಾಯ ಸಹಕಾರಗಳು ಧಾರಾಳವಾಗಿ ದೊರಕುವುದು.

ತುಲಾ: ಸೌಜನ್ಯದಿಂದ ಘನತೆ ಗೌರವಗಳನ್ನು ಪಡೆಯುವಿರಿ. ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚಿನ ಯಶಸ್ಸು. ಕಳೆದುಹೋದುದನ್ನು ಪುನಃ ಪಡೆದುಕೊಳ್ಳುವ ಸಾಧ್ಯತೆ. ಬಂಧುವರ್ಗದವರಿಂದ ಪ್ರಶಂಸೆ.

ವೃಶ್ಚಿಕ: ನೈತಿಕ ಬಲದಿಂದಾಗಿ ಸುತ್ತಮುತ್ತಲೂ ಉತ್ತಮ ವಾತಾವರಣ ಸೃಷ್ಟಿ ಮಾಡುವಿರಿ. ಸಾರ್ವಜನಿಕವಾಗಿ ಪ್ರಶಂಸೆಗಳು ಕೇಳಿಬರಲಿವೆ. ಹಿತ ಶತ್ರುಗಳಿಂದ ತೊಂದರೆ ಎದುರಿಸಬೇಕಾದೀತು.

ಧನು: ಬೇಜವಾಬ್ದಾರಿಯುತ ವರ್ತನೆಯಿಂದಾಗಿ ಇಕ್ಕಟ್ಟಿಕೆ ಸಿಲುಕುವ ಸಾಧ್ಯತೆ. ಹಣಕಾಸಿನ ವಿಚಾರದಲ್ಲಿ ಹೆಚ್ಚಿನ ಲಾಭ. ಆರೋಗ್ಯದಲ್ಲಿ ಸುಧಾರಣೆ. ಸಹೋದ್ಯೋಗಿಗಳಿಂದ ನಿಂದನೆಗೊಳಗಾಗುವ ಸಾಧ್ಯತೆ.

ಮಕರ: ತೊಗರಿ, ಕಡಲೆ ಮುಂತಾದ ಹಳದಿ ಕಾಳುಗಳ ವ್ಯಾಪಾರಿಗಳಿಗೆ ಲಾಭ. ಕಲಾವಿದರಿಗೆ ಪ್ರಶಂಸೆ. ಕೆಲಸ ಕಾರ್ಯಗಳಲ್ಲಿ ಆಸಕ್ತಿ ಕಡಿಮೆಯಾಗಿ ನಷ್ಟ ಅನುಭವಿಸುವ ಸಾಧ್ಯತೆ.

ಕುಂಭ: ಕ್ರೀಡಾಪಟುಗಳಿಗೆ ವಿಶೇಷ ಸಾಧನೆ ಮಾಡುವ ಅವಕಾಶ. ಅನುಭವಿಕರಿಂದ ಸಹಾಯ ದೊರಕಲಿದೆ. ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಅನೇಕ ಮಾರ್ಗಗಳು ಕಂಡುಬರಲಿವೆ.

ಮೀನ: ಯಾಂತ್ರಿಕ ಸಲಕರಣೆಗಳ ಮಾರಾಟ ವ್ಯವಹಾರದಿಂದಾಗಿ ಉತ್ತಮ ಲಾಭ. ದಕ್ಷತೆಯಿಂದಾಗಿ ವ್ಯವಹಾರದಲ್ಲಿ ಸುಧಾರಣೆ ಕಂಡುಕೊಳ್ಳುವಿರಿ. ಕಾರ್ಯಬಾಹುಳ್ಯದಿಂದಾಗಿ ಅತಿಯಾದ ಆಯಾಸ. ಆಪ್ತರಿಂದ ಸಮಾಧಾನ.


ನಿಮ್ಮ ಜನ್ಮದಿನ 9-ಏಪ್ರಿಲ್: ಈ ದಿನವು ಅತ್ಯಂತ ಶುಭಕರವಾಗಿದ್ದು, ಎಲ್ಲ ಕ್ಷೇತ್ರಗಳಲ್ಲಿ ಜಯ ನಿಮ್ಮದಾಗಲಿದೆ. ಕೃಷಿಯಲ್ಲಿಯ ಸಾಧನೆಗಾಗಿ ಪ್ರಶಂಸೆಗೆ ಪಾತ್ರರಾಗುವಿರಿ. ದೈಹಿಕ ಸಬಲತೆ ವೃದ್ಧಿಯಾಗುವುದರೊಂದಿಗೆ ಆತ್ಮಸ್ಥೈರ್ಯವು ಇಮ್ಮಡಿಗೊಳ್ಳಲಿದೆ. ಸದಾ ಕ್ರಿಯಾಶೀಲರಾದ ನೀವು ಸಾರ್ವಜನಿಕ ಕ್ಷೇತ್ರಗಳಲ್ಲಿ ಯಶಸ್ಸನ್ನು ಕಾಣುವಿರಿ.

ಪದಬಂಧ 4562

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹೆಂಡತಿಯ ಸಹೋದರ (5)
4.ಚಿನ್ನ ಬೆಳ್ಳಿ ಕೆಲಸ ಮಾಡುವವನು (3)
5.ಗುರುಗುಟ್ಟುತ್ತಿರುವ ಗಂಡು ಕುರಿ (3)
9.ಬಿಡಲು ಯೋಗ್ಯವಾದುದು (2)
10.ಮುಸಲ್ಮಾನ ಸಂತರ ಗೋರಿ (3)
11.ತಿರುವುಮುರುವಾಗಿರುವ ಹೆಸರು (2)
12.ಬೆಳಗಿನ ಜಾವವಿದು (3)
14.ಆತಂಕ ಹುಟ್ಟಿಸುತ್ತಿರುವ ನರಕಾಧಿಪತಿ (3)
15.ರಾಮನ ಮಗನಿಂದಾದ ಹುರುಪು (5)

ಮೇಲಿಂದ ಕೆಳಕ್ಕೆ
1.ಸ್ನೇಹವಿಲ್ಲಿ ಹಿಂದುಮುಂದಾಗಿದೆಯಲ್ಲಾ? (2)
2.ಭಾರತ ಹೊತ್ತಿರುವ ಒಜ್ಜೆ (2)
3.ಅಭಿನಯಿಸುವವ ಇಲ್ಲಿದ್ದಾನೆ (2)
4.ಅಂತ್ಯ ಅಥವಾ ಸಾವು (5)
6.ದುರಂತ ನಾಟಕವಿದು (5)
7.ಶ್ರೀಗಂಧದ ಮರ (3)
8.ತೋಳು ಬಳೆ ತೋರಿಸುತ್ತಿರುವ ವಾಲಿಯ ಮಗ (3)
13.ಕುಟಿಲನ ವಂಶ! (2)
14.ಈ ಹತೋಟಿ ಇಲ್ಲದ ಕಪಿ ಲಂಕೆಗೆ ಹಾರಿತಂತೆ ! (2)
16.ಬಾಲಬಡಿಕ ಹಿಡಿದಿರುವ ದಾರದ ಉಂಡೆ (2)



4561ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸ್ವಾದ 3.ದಹನ 5.ನರಕ 7.ಗ್ರಹಚಾರ 9.ಪ್ರಧಾನ 10.ಸಂದಣಿ 11.ಶಬ್ದಕೋಶ 13.ವಿಷಮ 15.ಭಟ್ಟಂಗಿ 16.ಸ್ತರ

ಮೇಲಿಂದ ಕೆಳಕ್ಕೆ: 2.ದಶನ 3.ದತ್ತಕ 4.ನಖಾಗ್ರ 6.ರಸನ 8.ರಹಣಿ 9.ಪ್ರವೇಶ 10.ಸಂತೋಷ 12.ಶಲಭ 13.ವಿರಾಗಿ 14.ಮಧ್ಯಸ್ತ

ಸುಡೊಕು 4948

				6				2
		6					5	
	1			5		6		4
	8			1		4		
3		4	2		7		8	
	9		4		3			6
6		5				8		
				7				1
1		8	9		6		4	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4947 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5


ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪ್ರಯಾಣಿಕ ವಾಹನ ರಿಟೇಲ್ ಮಾರಾಟ ಶೇ 28ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ರಿಟೇಲ್ ಮಾರಾಟವು 2020ರ ಮಾರ್ಚ್‌ಗೆ ಹೋಲಿಸಿದರೆ 2021ರ ಮಾರ್ಚ್‌ನಲ್ಲಿ ಶೇಕಡ 28.39ರಷ್ಟು ಹೆಚ್ಚಾಗಿದೆ ಎಂದು ಭಾರತೀಯ ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಗುರುವಾರ ತಿಳಿಸಿದೆ.

2020ರ ಮಾರ್ಚ್‌ನಲ್ಲಿ 2.17 ಲಕ್ಷ ಪ್ರಯಾಣಿಕ ವಾಹನಗಳು ಮಾರಾಟ ಆಗಿದ್ದವು. 2021ರ ಮಾರ್ಚ್‌ನಲ್ಲಿ 2.79 ಲಕ್ಷಕ್ಕೆ ತಲುಪಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,819
ಇಂದಿನ ಅಂತ್ಯ	14,874
▲	55
ದಿನದ ಗರಿಷ್ಠ	14,984

ವಿನಿಮಯ ದರ

$ ಡಾಲರ್	74.58
£ ಪೌಂಡ್	102.68
€ ಯುರೊ	88.75
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹460

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1630)
ಸೋಯಾ (ರಿಫೈನ್ಡ್)	₹1320 (1330)
ಸೂರ್ಯಕಾಂತಿ (ರಿಫೈನ್ಡ್)	₹1700 (1720)
ಪಾಮೋಲಿನ್	₹1245 (1245)

ಐದು ತಿಂಗಳ ಕನಿಷ್ಠ ಮಟ್ಟಕ್ಕೆ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯವು ಗುರುವಾರದ ವಹಿವಾಟಿನಲ್ಲಿ 11 ಪೈಸೆಯಷ್ಟು ಕಡಿಮೆ ಆಯಿತು. ಇದರ ಪರಿಣಾಮವಾಗಿ, ರೂಪಾಯಿ ಮೌಲ್ಯವು ಐದು ತಿಂಗಳ ಕನಿಷ್ಠ ಮಟ್ಟಕ್ಕೆ ತಲುಪಿದಂತಾಗಿದೆ.

ಗುರುವಾರದ ವಹಿವಾಟಿನ ಕೊನೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 74.58 ಆಗಿತ್ತು. ರೂಪಾಯಿ ಮೌಲ್ಯವು ಬುಧವಾರ 105 ಪೈಸೆಗಳಷ್ಟು ಕುಸಿತ ದಾಖಲಿಸಿತ್ತು. ಕಳೆದ ನಾಲ್ಕು ವಹಿವಾಟಿನ ದಿನಗಳಲ್ಲಿ ರೂಪಾಯಿ ಮೌಲ್ಯದಲ್ಲಿ 146 ಪೈಸೆಯಷ್ಟು ಇಳಿಕೆ ಆಗಿದೆ.

'ಕೋವಿಡ್-19 ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಲಸಿಕೆ ಮತ್ತು ಆರೋಗ್ಯ ಉತ್ಪನ್ನಗಳ ಮೇಲೆ ಸರ್ಕಾರ ಮಾಡುವ ವೆಚ್ಚಗಳು ಹೆಚ್ಚುತ್ತಲೇ ಇರಲಿವೆ. ರೂಪಾಯಿ ಮೌಲ್ಯವು ಡಾಲರ್ ಎದುರು 74.45ರಿಂದ 75.15ರ ಹಂತ ತಲುಪಬಹುದು' ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಹಿರಿಯ ಸಂಶೋಧನಾ ವಿಶ್ಲೇಷಕ ಜತಿನ್ ತ್ರಿವೇದಿ ಹೇಳಿದರು.

ಹೊಸ ಬಿಎಂಡಬ್ಲ್ಯು 6 ಸಿರೀಸ್ ಬಿಡುಗಡೆ

ನವದೆಹಲಿ (ಪಿಟಿಐ): ಐಷಾರಾಮಿ ಕಾರುಗಳನ್ನು ತಯಾರಿಸುವ ಬಿಎಂಡಬ್ಲ್ಯು ಇಂಡಿಯಾ ಕಂಪನಿಯು ತನ್ನ 6ನೇ ಸಿರೀಸ್ ಸೆಡಾನ್‌ನ ಸುಧಾರಿತ ಆವೃತ್ತಿಯನ್ನು ಗುರುವಾರ ಬಿಡುಗಡೆ ಮಾಡಿದೆ. ಇದರ ಆರಂಭಿಕ ಬೆಲೆ ₹ 67.9 ಲಕ್ಷ ಇದೆ (ಎಕ್ಸ್ ಷೋರೂಂ).

ಪೆಟ್ರೋಲ್ ಎಂಜಿನ್‌ನ 630ಐ ಎಂ ಸ್ಪೋರ್ಟ್ ಬೆಲೆ ₹ 67.9 ಲಕ್ಷ ಇದೆ. ಡೀಸೆಲ್ ಟ್ರಿಮ್ 630ಡಿ ಎಂ ಸ್ಪೋರ್ಟ್ ಬೆಲೆ ₹ 68.9 ಲಕ್ಷದಿಂದ ಆರಂಭವಾಗಲಿದೆ. 6 ಸಿರೀಸ್‌ನ ಸೆಡಾನ್ ಎಂಟು ಗಿಯರ್‌ಗಳ ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಹಾಗೂ ಏರ್ ಸಸ್ಪೆನ್ಶನ್ ಸೇರಿದಂತೆ ಹಲವು ಐಷಾರಾಮಿ ವೈಶಿಷ್ಟ್ಯಗಳನ್ನು ಹೊಂದಿದೆ ಎಂದು ಕಂಪನಿ ತಿಳಿಸಿದೆ.

ಅತ್ಯುತ್ತಮವಾದ ಐಷಾರಾಮಿ ಮತ್ತು ಆರಾಮದಾಯಕ ಸೌಕರ್ಯಗಳನ್ನು ನಿರೀಕ್ಷಿಸುವವರ ಆಯ್ಕೆಯ ವಾಹನ ಇದಾಗಿದೆ ಎಂದು ಬಿಎಂಡಬ್ಲ್ಯು ಗ್ರೂಪ್ ಇಂಡಿಯಾದ ಅಧ್ಯಕ್ಷ ವಿಕ್ರಂ ಪವ್ಹಾ ತಿಳಿಸಿದ್ದಾರೆ.

ಎಸ್‌ಆ್ಯಂಡ್‌ಪಿ ಇಂಡಿಸಸ್ ವರ್ಸಸ್ ಆ್ಯಕ್ಟಿವ್ ವರದಿ

ಲಾರ್ಜ್‌ಕ್ಯಾಪ್ ಫಂಡ್: 2020ರಲ್ಲಿ ತಗ್ಗಿದ ಗಳಿಕೆ

ಮುಂಬೈ (ಪಿಟಿಐ): 2020ರಲ್ಲಿ ಭಾರತದಲ್ಲಿನ ಶೇಕಡ 80ರಷ್ಟು ಲಾರ್ಜ್‌ಕ್ಯಾಪ್ ಮ್ಯೂಚುವಲ್ ಫಂಡ್‌ಗಳು ಬೆಂಚ್‌ಮಾರ್ಕ್ ಸೂಚ್ಯಂಕಗಳಿಗೆ ಹೋಲಿಸಿದರೆ ಕಡಿಮೆ ಲಾಭ ತಂದುಕೊಟ್ಟಿವೆ ಎಂದು ಎಸ್‌ಆ್ಯಂಡ್‌ಪಿ ಇಂಡಿಸಸ್ ವರ್ಸಸ್ ಆ್ಯಕ್ಟಿವ್ (ಎಸ್‌ಪಿಐವಿಎ) ಹೇಳಿದೆ.

ಈಕ್ವಿಟಿ ಲಿಂಕ್ಡ್ ಸೇವಿಂಗ್ಸ್ ಯೋಜನೆಗಳು (ಇಎಲ್‌ಎಸ್‌ಎಸ್), ಮಿಡ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳ ಗಳಿಕೆಯು ಕ್ರಮವಾಗಿ ಶೇ 65 ಮತ್ತು ಶೇ 67ರಷ್ಟು ಇದ್ದು, ಲಾರ್ಜ್‌ಕ್ಯಾಪ್‌ಗಳ ಗಳಿಕೆಗಿಂತ ಸ್ವಲ್ಪ ಉತ್ತಮವಾಗಿದೆ ಎಂದು ಹೇಳಿದೆ.

2020ರ ಏಪ್ರಿಲ್‌ನಲ್ಲಿ ಮಾರುಕಟ್ಟೆಯು ಕಂಡಿದ್ದ ಕುಸಿತದ ನಂತರದ ಚೇತರಿಕೆಯನ್ನು ಪರಿಗಣಿಸಿದರೆ ಫಂಡ್‌ಗಳ ಗಳಿಕೆಯು ಕಳಪೆ ಮಟ್ಟದ್ದಾಗಿದೆ ಎಂದು ಎಸ್‌ಆ್ಯಂಡ್‌ಪಿ ಡೋ ಜೋನ್ಸ್ ಇಂಡಿಸಸ್‌ನ ಸಹಾಯಕ ನಿರ್ದೇಶಕ ಆಕಾಶ್ ಜೈನ್ ಹೇಳಿದ್ದಾರೆ.

ಈಕ್ವಿಟಿ ಎಂಎಫ್: ಹೂಡಿಕೆ ಹೆಚ್ಚಳ



ನವದೆಹಲಿ (ಪಿಟಿಐ): ಮಾರ್ಚ್ ತಿಂಗಳಿನಲ್ಲಿ ಹೂಡಿಕೆದಾರರು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿರುವ ಮೊತ್ತವು, ಅವರು ಹಿಂಪಡೆದಿರುವ ಮೊತ್ತಕ್ಕಿಂತ ಹೆಚ್ಚಿದೆ.

2020ರ ಜುಲೈನಿಂದ 2021ರ ಮಾರ್ಚ್‌ವರೆಗಿನ ಅವಧಿಯಲ್ಲಿ ಬಂಡವಾಳದ ಒಳಹರಿವು ಹೆಚ್ಚಿರುವುದು ಇದೇ ಮೊದಲು.

ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಗೋಲ್ಡ್ ಇಟಿಎಫ್) ಮಾರ್ಚ್‌ನಲ್ಲಿ ₹ 662 ಕೋಟಿ ಹೂಡಿಕೆ ಆಗಿದೆ. ಫೆಬ್ರುವರಿಯಲ್ಲಿ ₹ 491 ಕೋಟಿ ಹೂಡಿಕೆ ಆಗಿತ್ತು.

2020ರ ದ್ವಿತೀಯಾರ್ಧವು ಭಾರತದ ಈಕ್ವಿಟಿ ಆ್ಯಕ್ಟಿವ್ ಫಂಡ್‌ಗಳಿಗೆ ಸವಾಲಿನ ಅವಧಿಯಾಗಿತ್ತು. ಎಲ್ಲ ಲಾರ್ಜ್‌ಕ್ಯಾಪ್ ಫಂಡ್‌ಗಳು, ಇಎಲ್‌ಎಸ್‌ಎಸ್ ಫಂಡ್‌ಗಳಲ್ಲಿ ಶೇ 80ರಷ್ಟು ಹಾಗೂ ಮಿಡ್/ಸ್ಮಾಲ್ ಕ್ಯಾಪ್ ಫಂಡ್‌ಗಳಲ್ಲಿ 53ರಷ್ಟು ಫಂಡ್‌ಗಳು ಬೆಂಚ್‌ಮಾರ್ಕ್ ಸೂಚ್ಯಂಕಗಳಿಗೆ ಹೋಲಿಸಿದರೆ ಕಡಿಮೆ ಗಳಿಕೆ ತಂದುಕೊಟ್ಟಿವೆ ಎಂದು ತಿಳಿಸಿದ್ದಾರೆ.

2020ರ ಎರಡನೇ ತ್ರೈಮಾಸಿಕದ ಆರಂಭದಲ್ಲಿ ಪ್ರಬಲವಾದ ಚೇತರಿಕೆ ಶುರುವಾಗಿ 2020ರ ದ್ವಿತೀಯಾರ್ಧದವರೆಗೂ ಮುಂದುವರಿಯಿತು. ಎಸ್‌ಆ್ಯಂಡ್‌ಪಿ ಬಿಎಸ್‌ಇ 100 ಸೂಚ್ಯಂಕವು ಶೇ 36.48ರಷ್ಟು ಗಳಿಕೆಯೊಂದಿಗೆ ಆರು ತಿಂಗಳ ಅವಧಿಯನ್ನು ಮುಕ್ತಾಯಗೊಳಿಸಿತು ಎಂದಿದ್ದಾರೆ.

ಬೆಂಗಳೂರಿನಲ್ಲಿ ಮಳಿಗೆಗೆ ಜಾಗ ಹುಡುಕುತ್ತಿರುವ ಟೆಸ್ಲಾ

ನವದೆಹಲಿ (ರಾಯಿಟರ್ಸ್): ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಲು ಸಿದ್ಧತೆ ನಡೆಸಿರುವ ಟೆಸ್ಲಾ ಕಾರು ಕಂಪನಿಯು ಬೆಂಗಳೂರು ಸೇರಿದಂತೆ ಮೂರು ಕಡೆ ಮಾರಾಟ ಮಳಿಗೆ ತೆರೆಯಲು ಸೂಕ್ತ ಸ್ಥಳದ ಹುಡುಕಾಟದಲ್ಲಿದೆ.

ವಿದ್ಯುತ್ ಚಾಲಿತ ಕಾರುಗಳನ್ನು ತಯಾರಿಸುವ ಟೆಸ್ಲಾ ಕಂಪನಿಯು ಜನವರಿಯಲ್ಲಿ ಭಾರತದಲ್ಲಿ ಕಂಪನಿಯನ್ನು ನೋಂದಾಯಿಸಿದೆ. ತನ್ನ 'ಮಾಡೆಲ್ 3' ಕಾರನ್ನು ಈ ವರ್ಷದ ಮಧ್ಯಭಾಗದಲ್ಲಿ ಭಾರತದ ಮಾರುಕಟ್ಟೆಗೆ ಬಿಡುಗಡೆ ಮಾಡುವ ಉದ್ದೇಶ ಹೊಂದಿದೆ.

20 ಸಾವಿರದಿಂದ 30 ಸಾವಿರ ಚದರ ಅಡಿ ವಿಸ್ತೀರ್ಣದ ಸ್ಥಳವನ್ನು ಮಳಿಗೆ ಆರಂಭಿಸಲು ಕಂಪನಿ ಹುಡುಕುತ್ತಿದೆ ಎಂದು ಮೂಲಗಳು ತಿಳಿಸಿವೆ. ನವದೆಹಲಿ ಮತ್ತು ಮುಂಬೈನಲ್ಲಿಯೂ ಟೆಸ್ಲಾ ಸ್ಥಳ ಶೋಧ ನಡೆಸಿದೆ.

ಟೆಸ್ಲಾ ಕಂಪನಿಯು ಭಾರತದಲ್ಲಿ ತನ್ನ ವಾಣಿಜ್ಯ ಚಟುವಟಿಕೆಗಳನ್ನು ಬೆಳೆಸಲು ಮನುಜ್ ಖುರಾನಾ ಅವರನ್ನು ನೇಮಕ ಮಾಡಿಕೊಂಡಿದೆ. ಮನುಜ್ ಅವರು ಈ ಹಿಂದೆ ಇನ್ವೆಸ್ಟ್ ಇಂಡಿಯಾ ಸಂಸ್ಥೆಯಲ್ಲಿ ಕೆಲಸ ಮಾಡಿದ್ದವರು. ಈ ವಿಚಾರವಾಗಿ ಟೆಸ್ಲಾ ಕಡೆಯಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.



ಅಮೆರಿಕದಲ್ಲಿ ಬಳಕೆಯಲ್ಲಿರುವ 'ಮಾಡೆಲ್ 3' ಕಾರು (ಚಿತ್ರ: ರಾಯಿಟರ್ಸ್)

ಷೋರೂಂ ತೆರೆಯಲು ಕಂಪನಿಯು ಸಿಬಿಆರ್‌ಇ ಸಮೂಹದ ನೆರವು ಪಡೆದಿದೆ. ಈ ಸಮೂಹವು, ಶ್ರೀಮಂತ ಗ್ರಾಹಕರನ್ನು ಸುಲಭವಾಗಿ ಸೆಳೆಯಲು ನೆರವಾಗುವ ಕಡೆಗಳಲ್ಲಿ ಮಳಿಗೆಗೆ ಸೂಕ್ತ ಜಾಗ ಎಲ್ಲಿದೆ ಎಂಬ ಹುಡುಕಾಟದಲ್ಲಿ ತೊಡಗಿದೆ ಎಂದು ಗೊತ್ತಾಗಿದೆ.

ಭಾರತದಲ್ಲಿ ಟೆಸ್ಲಾ ಕಂಪನಿಗೆ ಮಾರುಕಟ್ಟೆ ಸೃಷ್ಟಿಸಿಕೊಳ್ಳುವುದು ಸುಲಭದ ಕೆಲಸ ಆಗಲಿಕ್ಕಿಲ್ಲ ಎಂಬ ವಾದ ಇದೆ. ಭಾರತದಲ್ಲಿ ವಿದ್ಯುತ್ ಚಾಲಿತ ವಾಹನಗಳನ್ನು ಚಾರ್ಜ್ ಮಾಡಿಕೊಳ್ಳುವ ಸೌಲಭ್ಯ ಇರುವುದು ನಗಣ್ಯ ಪ್ರಮಾಣದಲ್ಲಿ. ಅಲ್ಲದೆ, ಆಮದು ಮಾಡಿಕೊಂಡ ಕಾರುಗಳ ಮೇಲೆ ಇಲ್ಲಿ ಭಾರಿ ತೆರಿಗೆ ವಿಧಿಸಲಾಗುತ್ತದೆ.

ಹಿಂದಿನ ವರ್ಷ ಭಾರತದಲ್ಲಿ ಒಟ್ಟು 24 ಲಕ್ಷ ಕಾರುಗಳು ಮಾರಾಟವಾಗಿದ್ದವು. ಈ ಪೈಕಿ ವಿದ್ಯುತ್ ಚಾಲಿತ ಕಾರುಗಳ ಸಂಖ್ಯೆ ಐದು ಸಾವಿರ ಮಾತ್ರ. ಭಾರತದಲ್ಲಿ ವಿದ್ಯುತ್ ಚಾಲಿತ ವಾಹನಗಳನ್ನು ಜನ ಖರೀದಿ ಮಾಡುವುದು ಕಡಿಮೆ ಪ್ರಮಾಣದಲ್ಲಿದೆ. 'ಆದರೆ, ಭಾರತದಲ್ಲಿ ಶ್ರೀಮಂತ ಗ್ರಾಹಕರ ಸಂಖ್ಯೆ ಹೆಚ್ಚಾಗುತ್ತಿರುವ ಕಾರಣ, ಸರ್ಕಾರವು ವಿದ್ಯುತ್ ಚಾಲಿತ ಕಾರುಗಳ ಬಳಕೆಗೆ ಉತ್ತೇಜನ ನೀಡುತ್ತಿರುವ ಕಾರಣ ಭಾರತದ ಮಾರುಕಟ್ಟೆಯನ್ನು ಟೆಸ್ಲಾ ನಿರ್ಲಕ್ಷಿಸುವಂತೆ ಇಲ್ಲ' ಎಂದು ಮಾರುಕಟ್ಟೆ ತಜ್ಞರು ಹೇಳುತ್ತಾರೆ.

ಮುಂಬೈ ಧಾರಣೆ

ಶೇಂಗಾ

8-4-2021

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	10000-11100
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1640)
ಒಂದು ವಾರದ ಡೆಲಿವರಿ	1605 (1635)
ಸೋಯಾ ಕಚ್ಚಾ	1302 (1300)
ಪಾಮ್ ವಾರದ ಡೆಲಿವರಿ	1243 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1670)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,350 (45,800)
ಬೆಳ್ಳಿ ಕೆ.ಜಿ 67,400 (66,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೃಷಿ ಹೊಂಡದಲ್ಲಿ ಮುಳುಗಿ ಮೂವರು ಬಾಲಕರ ಸಾವು

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ): ತಾಲ್ಲೂಕಿನ ಬಳೇಹತ್ತಿಗುಪ್ಪೆಯಲ್ಲಿ ಒಂದೇ ಕುಟುಂಬದ ಇಬ್ಬರು ಸೇರಿದಂತೆ ಮೂವರು ಬಾಲಕರು ಕೃಷಿ ಹೊಂಡದಲ್ಲಿ ಮುಳುಗಿ ಗುರುವಾರ ಮೃತಪಟ್ಟಿದ್ದಾರೆ.

ಮಹದೇವಪ್ಪ-ಭಾರತಿ ದಂಪತಿ ಮಕ್ಕಳಾದ ಕಾರ್ತೀಕ್ (10), ಚಂದನ್ (11) ಹಾಗೂ ಮಲ್ಲಿಕಾರ್ಜುನ್-ಸುಮಾ ದಂಪತಿಯ ಪುತ್ರ ರಿತೇಶ್ (8) ಮೃತಪಟ್ಟವರು. ಕಾರ್ತಿಕ್ ಹಾಗೂ ಚಂದನ್ ಸೋದರರಿಬ್ಬರೂ ಪಾಂಡವಪುರದ ನಿರ್ಮಲಾ ಕಾನ್ವೆಂಟ್ ವಿದ್ಯಾರ್ಥಿಗಳಾಗಿದ್ದು, ಕ್ರಮವಾಗಿ 5, 6ನೇ ತರಗತಿಯಲ್ಲಿ ಓದುತ್ತಿದ್ದರು. ರಿತೇಶ್, ಬಳೇಹತ್ತಿಗುಪ್ಪೆಯ ಸರ್ಕಾರಿ ಶಾಲೆಯಲ್ಲಿ 3ನೇ ತರಗತಿ ಓದುತ್ತಿದ್ದ.



ಚಂದನ್



ಕಾರ್ತೀಕ್



ರಿತೇಶ್

ಶಾಲೆಗೆ ರಜೆ ಇರುವ ಕಾರಣ, ಬಾಲಕರು ಕೃಷಿ ಹೊಂಡದಲ್ಲಿ ಈಜಲು ತೆರಳಿದ್ದರು. ಹೊಂಡದಲ್ಲಿ ತುಂಬಿದ್ದ ಕೆಸರಿನಲ್ಲಿ ಸಿಲುಕಿ ಮೃತಪಟ್ಟಿದ್ದಾರೆ. ಪಾಂಡವಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರ್‌ಟಿಇ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ಆರ್‌ಟಿಇ ಕಾಯ್ದೆಯಡಿ 2021-22ನೇ ಸಾಲಿಗೆ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆ ಅವಧಿಯನ್ನು ಏಪ್ರಿಲ್ 20ರ ವರೆಗೆ ವಿಸ್ತರಿಸಲಾಗಿದೆ.

ಪೋಷಕರು http://www.schooleducation.kar.nic.in ರಲ್ಲಿಅರ್ಜಿ ಸಲ್ಲಿಸಬಹುದು ಎಂದು ಪ್ರಾಥಮಿಕ ಶಿಕ್ಷಣ ಇಲಾಖೆ ನಿರ್ದೇಶಕರು ತಿಳಿಸಿದ್ದಾರೆ.

ನಟಿ ಚೈತ್ರಾ ಕೋಟೂರು ಆತ್ಮಹತ್ಯೆ ಯತ್ನ

ಪ್ರಜಾವಾಣಿ ವಾರ್ತೆ



ಕೋಲಾರ: ಬಿಗ್‌ಬಾಸ್ ಏಳನೇ ಆವೃತ್ತಿಯ ಸ್ಪರ್ಧಿ ಹಾಗೂ ನಟಿ ಚೈತ್ರಾ ಕೋಟೂರು ಅವರು ಗುರುವಾರ ಫಿನಾಯಿಲ್ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಕೌಟುಂಬಿಕ ಕಲಹದಿಂದ ಮನನೊಂದಿದ್ದ ಅವರು ಬೆಳಗಿನ ಜಾವ ಮನೆಯಲ್ಲಿ ಫಿನಾಯಿಲ್ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಕೂಡಲೇ ಅವರನ್ನು ನಗರದ ಇಟಿಸಿಎಂ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಗಿದೆ. ಚಿಕಿತ್ಸೆಗೆ ಸ್ಪಂದಿಸುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮದುವೆ ತಂದ ಬಿರುಗಾಳಿ: ಕುಟುಂಬ ಸದಸ್ಯರೊಂದಿಗೆ ನಗರದ ಕುರುಬರಪೇಟೆಯಲ್ಲಿ ವಾಸವಾಗಿರುವ ಚೈತ್ರಾ ಕೋಟೂರು ಅವರು ಮಂಡ್ಯ ಮೂಲದ ಉದ್ಯಮಿ ನಾಗಾರ್ಜುನ್ ಎಂಬುವರನ್ನು ಮಾರ್ಚ್ 28ರಂದು ಬೆಂಗಳೂರಿನಲ್ಲಿ ಮದುವೆಯಾಗಿದ್ದರು.

ಆದರೆ, ಅದೇ ದಿನ ಅವರ ದಾಂಪತ್ಯದಲ್ಲಿ ಬಿರುಕು ಮೂಡಿತ್ತು. ನವದಂಪತಿ ಕೋಲಾರ ಮಹಿಳಾ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದರು.

ನಾಗಾರ್ಜುನ್ ಪೋಷಕರು ಚೈತ್ರಾ ಅವರ ಕೋಲಾರದ ಮನೆ ಬಳಿಗೆ ಬಂದು ಜಗಳವಾಡಿದ್ದರು. ಮತ್ತೊಂದೆಡೆ ಚೈತ್ರಾ ಅವರನ್ನು ಮದುವೆಯಾಗಲು ತನಗೆ ಇಷ್ಟವಿರಲಿಲ್ಲ ಎಂದು ಅವರ ಪತಿ ನಾಗಾರ್ಜುನ್ ಹೇಳಿದ್ದರು. ಕೆಲವು ಸಂಘಟನೆಗಳ ಸದಸ್ಯರು ತನ್ನನ್ನು ಗೃಹಬಂಧನದಲ್ಲಿಟ್ಟು ಬಲವಂತವಾಗಿ ಈ ಮದುವೆ ಮಾಡಿಸಿದ್ದಾರೆ ಎಂದು ಅವರು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದರು.

ರಾಜಿ ಸಂಧಾನದ ಮೂಲಕ ವಿವಾದ ಬಗೆಹರಿಸಿಕೊಳ್ಳುವುದಾಗಿ ಹೇಳಿ ನಾಗಾರ್ಜುನ್ ಪೋಷಕರು ತಮ್ಮ ಮಗನನ್ನು ಜತೆಯಲ್ಲಿ ಕರೆದೊಯ್ದಿದ್ದರು. ಅದಾದ ನಂತರ ನಾಗಾರ್ಜುನ್ ಅವರು ಚೈತ್ರಾ ಸಂಪರ್ಕ ಕಡಿದುಕೊಂಡಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಕುಮಟ	
ಚಿಪ್ಪು	27069-32488
ಕೋಕ	20119-28299
ಹಳೆಚಾಲಿ	38769-41669
ಹೊಸಚಾಲಿ	35319-38405
ಸಿದ್ದಾಪುರ	
ಬಿಳಿಗೋಟು	24929-32099
ಚಾಲಿ	34409-37199
ಕೋಕ	18699-30119
ಕೆಂಪುಗೋಟು	24099-29289
ರಾಶಿ	39969-41599
ತಟ್ಟಿಬೆಟ್ಟೆ	30711-40489
ಯಲ್ಲಾಪುರ	
ಬಿಳಿಗೋಟು	24626-31480
ಚಾಲಿ	31899-38389
ಕೋಕ	18899-29299
ಕೆಂಪುಗೋಟು	27299-32411
ರಾಶಿ	39899-44509
ತಟ್ಟಿಬೆಟ್ಟೆ	33769-39699
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	41509-44369
ಗೊರಬಲು	16200-31550
ರಾಶಿ	38600-42689
ಸರಕು	47000-73400

ಕೋಲ್ಕತ್ತದ ಜಾಧವಪುರದಲ್ಲಿ ಟಿಎಂಸಿ, ಬಿಜೆಪಿ, ಸಿಪಿಎಂ ಈಗ ತ್ರಿಕೋನ ಸ್ಪರ್ಧೆ

ಭದ್ರಕೋಟೆ ಮರಳುವುದೇ ಸಿಪಿಎಂ ಮಡಿಲಿಗೆ?

• ಶೋಮು ದಾಸ್

ಏಪ್ರಿಲ್ 10ರಂದು ಇಲ್ಲಿ ಮತದಾನ ನಡೆಯಲಿದೆ

2.99 ಲಕ್ಷ ಒಟ್ಟು ಮತದಾರರು

1.44 ಲಕ್ಷ ಪುರುಷ ಮತದಾರರು

1.54 ಲಕ್ಷ ಮಹಿಳಾ ಮತದಾರರು

ಕೋಲ್ಕತ್ತ: ಕೋಲ್ಕತ್ತದ ಜಾಧವಪುರ ವಿಧಾನಸಭಾ ಕ್ಷೇತ್ರವು ಈ ಚುನಾವಣೆಯಲ್ಲಿ ಹೆಚ್ಚು ಕುತೂಹಲ ಹುಟ್ಟಿಸಿರುವ ಕ್ಷೇತ್ರಗಳಲ್ಲಿ ಒಂದು. ಸಿಪಿಎಂನ ಭದ್ರಕೋಟೆಯಾಗಿರುವ ಈ ಕ್ಷೇತ್ರದಲ್ಲಿ ಟಿಎಂಸಿ ಮತ್ತು ಬಿಜೆಪಿ ಈಗ ಗಟ್ಟಿಯಾಗಿ ನೆಲೆಯೂರುತ್ತಿವೆ. ಕೋಲ್ಕತ್ತ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಿಪಿಎಂ ತೆಕ್ಕೆಯಲ್ಲಿರುವ ಏಕೈಕ ಕ್ಷೇತ್ರವಿದು. ಈ ಕ್ಷೇತ್ರವನ್ನು ಉಳಿಸಿಕೊಳ್ಳುವುದು, ಸಿಪಿಎಂನ ಅಸ್ತಿತ್ವದ ಪ್ರಶ್ನೆಯೂ ಆಗಿದೆ.

1967ರಿಂದ 2006ರ ಚುನಾವಣೆವರೆಗೂ ಸಿಪಿಎಂ ಜಾಧವಪುರ ಕ್ಷೇತ್ರವನ್ನು ಗೆದ್ದಿತ್ತು. 2011ರಲ್ಲಿ ಸಿಪಿಎಂನ ಬುದ್ಧದೇವ ಭಟ್ಟಾಚಾರ್ಯ ಅವರು (ಪಶ್ಚಿಮ ಬಂಗಾಳದ ಆಗಿನ ಮುಖ್ಯಮಂತ್ರಿ) ಟಿಎಂಸಿಯ ಮನೀಷ್ ಗುಪ್ತಾ ಎದುರು ಸೋತಿದ್ದರು. ರಾಜ್ಯದಾದ್ಯಂತ ಟಿಎಂಸಿ ಪರ ಅಲೆ ಜೋರಾಗಿದ್ದ ಸಂದರ್ಭದಲ್ಲಿ ಸಿಪಿಎಂ ತನ್ನ ಭದ್ರಕೋಟೆಯನ್ನೇ ಕಳೆದುಕೊಂಡಿತ್ತು. ಆದರೆ 2016ರ ಚುನಾವಣೆಯಲ್ಲಿ ಸಿಪಿಎಂ ಈ ಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು.

ಸಿಪಿಎಂನ ಸುಜನ್ ಚಕ್ರವರ್ತಿ ಅವರು 14,000ಕ್ಕೂ ಹೆಚ್ಚು ಮತಗಳ ಅಂತರದಿಂದ ಟಿಎಂಸಿಯ ಮನೀಷ್ ಗುಪ್ತಾ ಅವರನ್ನು ಸೋಲಿಸಿದ್ದರು. ಈ ಅಂತರ ನಗಣ್ಯ ಎಂದು ವಿಶ್ಲೇಷಿಸಲಾಗಿತ್ತು. ಆದರೆ, ಈ ಕ್ಷೇತ್ರದ ಮೇಲೆ ಸಿಪಿಎಂ ಹಿಡಿತ ಸಡಿಲವಾಗುತ್ತಿರುವುದನ್ನು 2019ರ ಲೋಕಸಭಾ ಚುನಾವಣೆಯ ಫಲಿತಾಂಶವು ಎತ್ತಿಹಿಡಿದಿತ್ತು. ಲೋಕಸಭಾ ಚುನಾವಣೆಯಲ್ಲಿ ಟಿಎಂಸಿ ಗೆಲುವು ಸಾಧಿಸಿದರೆ, ಬಿಜೆಪಿ ಹೆಚ್ಚು ಮತ ಪಡೆದ ಎರಡನೇ ಪಕ್ಷ ಎನಿಸಿಕೊಂಡಿತು. ಆದರೆ ಸಿಪಿಎಂ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಈಗಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಸುಜನ್ ಚಕ್ರವರ್ತಿ ಸರಿಯಾಗಿ ಕೆಲಸ ಮಾಡಿಲ್ಲ ಎಂದು ಟಿಎಂಸಿ ಮತ್ತು ಬಿಜೆಪಿ ಪ್ರಚಾರ ನಡೆಸುತ್ತಿವೆ. 'ಸುಜನ್ ಅವರು ಜನರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಮಾಡಿಯೇ ಇಲ್ಲ. ಆದ್ದರಿಂದಲೇ ಲೋಕಸಭಾ ಚುನಾವಣೆಯಲ್ಲಿ ಜನರು ಬಿಜೆಪಿಗೆ ಹೆಚ್ಚು ಮತ ಹಾಕಿದರು. ಹೀಗಾಗಿ ಈ ಬಾರಿ ಇಲ್ಲಿ ಬಿಜೆಪಿಯೇ ಗೆಲ್ಲುತ್ತದೆ' ಎಂದು ಬಿಜೆಪಿ ವಿಶ್ವಾಸ ವ್ಯಕ್ತಪಡಿಸಿದೆ.

'ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಸಿಪಿಎಂ ಮತ್ತು ಸುಜನ್ ಚಕ್ರವರ್ತಿ ಅವರು ಜನರ ಕಷ್ಟಗಳಿಗೆ ಸ್ಪಂದಿಸಿದ್ದರು. ಸಿಪಿಎಂ ಆರಂಭಿಸಿದ್ದ ಶ್ರಮಜೀವಿ ಕ್ಯಾಂಟೀನ್ ಹೆಚ್ಚು ಜನಪ್ರಿಯತೆ ಪಡೆದಿದೆ. ಹೀಗಾಗಿ ಈ ಬಾರಿ ಇಲ್ಲಿ ಸಿಪಿಎಂ ಗೆಲ್ಲಲಿದೆ' ಎಂದು ಪಕ್ಷದ ನಾಯಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಈ ಕ್ಷೇತ್ರವನ್ನು ಉಳಿಸಿಕೊಳ್ಳಲು ಸಿಪಿಎಂ ಶತಾಯಗತಾಯ ಹೋರಾಡುತ್ತಿದೆ. ಈವರೆಗೆ ಇಲ್ಲಿ ಸಿಪಿಎಂ ಮತ್ತು ಟಿಎಂಸಿ ಮಧ್ಯೆ ಮಾತ್ರ ಸ್ಪರ್ಧೆ ಇತ್ತು. ಈಗ ಬಿಜೆಪಿ ಸಹ ಪೈಪೋಟಿಗೆ ಇಳಿದಿದೆ. ನೆರೆಯ ದೇಶಗಳಿಂದ ಭಾರತಕ್ಕೆ ವಲಸೆ ಬಂದ ಮುಸ್ಲಿಮೇತರರಿಗೆ ಪೌರತ್ವ ನೀಡುತ್ತೇವೆ ಎಂದು ಬಿಜೆಪಿ ಇಲ್ಲಿ ಪ್ರಚಾರ ನಡೆಸುತ್ತಿದೆ. ಬಾಂಗ್ಲಾದೇಶದಿಂದ ವಲಸೆ ಬಂದಿರುವ ಮತುವಾ ಹಿಂದುಗಳ ಸಂಖ್ಯೆ ಈ ಕ್ಷೇತ್ರದಲ್ಲಿ ದೊಡ್ಡದಿದೆ. ಹೀಗಾಗಿ ಈ ಕ್ಷೇತ್ರವನ್ನು ಉಳಿಸಿಕೊಳ್ಳುವ ಸಿಪಿಎಂನ ಹೋರಾಟ, ದಿನೇ ದಿನೇ ಕಠಿಣವಾಗುತ್ತಿದೆ.

ಪಕ್ಷಾಂತರದ ಬಳಿಕ ಗೆಲ್ಲುವ ಸವಾಲು

ಟಿಎಂಸಿ ಸರ್ಕಾರದಲ್ಲಿ ಸಚಿವರಾಗಿದ್ದ ರಾಜೀವ್ ಈಗ ಬಿಜೆಪಿ ಅಭ್ಯರ್ಥಿ


'ಬಂಗಾಳಕ್ಕೆ ಬೇಕು ಬಂಗಾಳದ ಮಗಳು' ಎಂಬ ಘೋಷಣೆಯ ಫಲಕಗಳನ್ನು ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಟಿಎಂಸಿ ಬೆಂಬಲಿಗರು ಗುರುವಾರ ಪ್ರದರ್ಶಿಸಿದರು

ದೊಮ್ಜುರ್ (ಪಶ್ಚಿಮ ಬಂಗಾಳ) (ಪಿಟಿಐ): ಪಕ್ಷ ಬದಲಾದರೂ ತಾವು ಹಳೆಯ ಅದೇ ವ್ಯಕ್ತಿ ಎಂಬ ಸಂದೇಶವನ್ನು ಮತದಾರರಿಗೆ ತಲುಪಿಸಲು ಪಶ್ಚಿಮ ಬಂಗಾಳದ ಮಾಜಿ ಸಚಿವ ರಾಜೀವ್ ಬ್ಯಾನರ್ಜಿ ಇನ್ನಿಲ್ಲದ ಯತ್ನ ನಡೆಸುತ್ತಿದ್ದಾರೆ. ಚುನಾವಣೆಯ ಹೊಸ್ತಿಲಲ್ಲಿ ಟಿಎಂಸಿಯಿಂದ ಬಿಜೆಪಿಗೆ ಪಕ್ಷಾಂತರ ಮಾಡಿದ ಅವರು ದೊಮ್ಜುರ್ ಕ್ಷೇತ್ರದಿಂದ ಮೂರನೇ ಬಾರಿಗೆ ಪುನರಾಯ್ಕೆ ಬಯಸಿದ್ದಾರೆ.

ಮಮತಾ ಬ್ಯಾನರ್ಜಿ ನೇತೃತ್ವದ ಪಕ್ಷಕ್ಕಿಂತ ಯಾವ ವ್ಯಕ್ತಿಯೂ ದೊಡ್ಡವರಲ್ಲ ಎಂಬ ಸಂದೇಶವನ್ನು ಜನರಿಗೆ ಮನದಟ್ಟು ಮಾಡಲು ಟಿಎಂಸಿ ನಡೆಸುತ್ತಿರುವ ಯತ್ನ ರಾಜೀವ್ ಅವರಿಗೆ ದೊಡ್ಡ ತಲೆನೋವಾಗಿದೆ.

ದೊಮ್ಜುರ್ ಕ್ಷೇತ್ರವು ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡನ್ನೂ ಹೊಂದಿದೆ. ಸಾಂಪ್ರದಾಯಿಕವಾಗಿ ಸಿಪಿಎಂ ಭದ್ರಕೋಟೆಯಾಗಿತ್ತು ಈ ಕ್ಷೇತ್ರ. 1977ರಿಂದ 2006ರವರೆಗೆ ಇಲ್ಲಿ ಸಿಪಿಎಂ ಸತತವಾಗಿ ಗೆದ್ದಿದೆ. 2011ರಲ್ಲಿ ಸಿಪಿಎಂನ ಮಹಾಂತ ಚಟರ್ಜಿ ಅವರನ್ನು ರಾಜೀವ್ ಅವರು 24 ಸಾವಿರ ಮತಗಳಿಂದ ಸೋಲಿಸಿದ್ದರು. ಕಳೆದ ಚುನಾವಣೆಯಲ್ಲಿ ಅವರ ಗೆಲುವಿನ ಅಂತರ ಒಂದು ಲಕ್ಷಕ್ಕೂ ಹೆಚ್ಚು ಮತಗಳು. ಚಲಾವಣೆಯಾದ ಮತಗಳಲ್ಲಿ ಶೇ 67ರಷ್ಟು ಅವರಿಗೆ ದೊರೆತಿತ್ತು.

ಇತ್ತೀಚೆಗೆ ಈ ಕ್ಷೇತ್ರದಲ್ಲಿ ಬಿಜೆಪಿ ಪ್ರಾಬಲ್ಯ ಹೆಚ್ಚುತ್ತಿದೆ. ಹಾಗಿದ್ದರೂ 2019ರ ಲೋಕಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಟಿಎಂಸಿಗೆ 55 ಸಾವಿರ ಮತಗಳ ಮುನ್ನಡೆ ಸಿಕ್ಕಿತ್ತು.

ಇಲ್ಲಿ ಅಲ್ಪಸಂಖ್ಯಾತರ ಮತ ಪ್ರಮಾಣ ಶೇ 35ರಿಂದ 40ರಷ್ಟಿದೆ. ಹಾಗಾಗಿ, ರಾಜೀವ್ ಅವರು ಅಲ್ಪಸಂಖ್ಯಾತರ ಮತ ಪಡೆಯುವ ಪ್ರಯತ್ನ ನಡೆಸುತ್ತಿದ್ದಾರೆ. ಕ್ಷೇತ್ರಕ್ಕೆ ಹಲವು ಅಭಿವೃದ್ಧಿ ಯೋಜನೆಗಳನ್ನು ತಂದಿದ್ದೇನೆ ಎಂದು ಅವರು ಹೇಳುತ್ತಿದ್ದಾರೆ. ಆದರೆ, ಭೇಟಿ ನೀಡಿದ ಹಲವೆಡೆ ಅವರಿಗೆ ಕಪ್ಪು ಬಾವುಟ ತೋರಲಾಗಿದೆ. ಹಾಗಿದ್ದರೂ ಮುಸ್ಲಿಮರ ಪ್ರಾಬಲ್ಯದ ಪ್ರದೇಶಗಳಿಗೆ ಅವರು ಭೇಟಿ ನೀಡುತ್ತಲೇ ಇದ್ದಾರೆ.

'ಕೆಲವು ಕಡೆಗಳಲ್ಲಿ ಸಮಸ್ಯೆ ಸೃಷ್ಟಿಸಲು ಟಿಎಂಸಿ ಯತ್ನಿಸುತ್ತಿದೆ. ಶೇ ನೂರರಷ್ಟು ಮತ ಪಡೆಯುವುದು ಇದರ ಉದ್ದೇಶ. ಅಲ್ಪಸಂಖ್ಯಾತರಿಗೆ ನನ್ನ ಬಗ್ಗೆ ಗೊತ್ತು. ಅಭಿವೃದ್ಧಿ ವಿಚಾರದಲ್ಲಿ ನಾನು ಯಾವುದೇ ತಾರತಮ್ಯ ಮಾಡುವುದಿಲ್ಲ ಎಂಬುದು ಅವರಿಗೆ ಅರಿವಿದೆ' ಎಂದು ರಾಜೀವ್ ಹೇಳುತ್ತಾರೆ.

ಆದರೆ, ಟಿಎಂಸಿಯ ಕಾರ್ಯಕರ್ತರು ರಾಜೀವ್ ಅವರ ರಾಜಕೀಯ ವಿಶ್ವಾಸಾರ್ಹತೆಯನ್ನೇ ಪ್ರಶ್ನಿಸುತ್ತಾರೆ. ಟಿಎಂಸಿ ಸರ್ಕಾರದಲ್ಲಿ ಸಚಿವರಾಗಿ ಎಲ್ಲ ಅಧಿಕಾರವನ್ನೂ ಅನುಭವಿಸಿ ಚುನಾವಣೆಗೆ ಮುನ್ನ ಪಕ್ಷ ಬಿಟ್ಟದ್ದು ಎಷ್ಟು ಸರಿ ಎಂದು ಕಾರ್ಯಕರ್ತರು ಕೇಳುತ್ತಾರೆ.

ಹೌರಾದ ಪ್ರಭಾವಿ ಮುಖಂಡ ಮತ್ತು ಸಚಿವ ಅರೂಪ್ ರಾಯ್ ಅವರ ನಿಕಟವರ್ತಿ ಕಲ್ಯಾಣ್ ಘೋಷ್ ಅವರು ಟಿಎಂಸಿಯಿಂದ ಕಣದಲ್ಲಿದ್ದಾರೆ.

'ಮಮತಾ ಬ್ಯಾನರ್ಜಿ ಅವರ ಕೆಲಸಕ್ಕೆ ಜನರು ಮತ ನೀಡಿದ್ದರಿಂದ ಅವರು (ರಾಜೀವ್) ದಾಖಲೆ ಅಂತರದಿಂದ ಗೆದ್ದರು. ಈಗ, ಅವರು ಪಕ್ಷದ ಬೆನ್ನಿಗೆ ಚೂರಿ ಹಾಕಿದ್ದಾರೆ. 2006ರ ಚುನಾವಣೆಯಲ್ಲಿ ಅವರು ಸೋತಿದ್ದರು. ಹಾಗಿರುವಾಗ ಅವರಿಗೆ ವೈಯಕ್ತಿಕ ವರ್ಚಸ್ಸು ಎಲ್ಲಿದೆ' ಎಂದು ಘೋಷ್ ಪ್ರಶ್ನಿಸುತ್ತಾರೆ.

ಕಾಂಗ್ರೆಸ್–ಐಎಸ್‌ಎಫ್–ಎಡರಂಗ ಮೈತ್ರಿಕೂಟದಿಂದ ಸಿಪಿಎಂನ ಉತ್ತಮ್ ಬೇರ ಸ್ಪರ್ಧಿಸುತ್ತಿದ್ದಾರೆ. ಟಿಎಂಸಿಯಿಂದ ಕ್ಷೇತ್ರವನ್ನು ಮತ್ತೆ ಕಸಿದುಕೊಳ್ಳುವ ಉತ್ಸಾಹದಲ್ಲಿ ಅವರು ಇದ್ದಾರೆ. ಏಪ್ರಿಲ್ 10ರಂದು ನಾಲ್ಕನೇ ಹಂತದಲ್ಲಿ ಇಲ್ಲಿ ಮತದಾನ ನಡೆಯಲಿದೆ.

ನುಡಿ–ಕಿಡಿ


ಮಮತಾ ಬ್ಯಾನರ್ಜಿ ಆರಂಭಿಸಿರುವ 'ಸ್ಥಳೀಯರು–ಹೊರಗಿನವರು' ಚರ್ಚೆಯನ್ನು ಖಂಡಿಸುತ್ತೇವೆ. ಸೋಲು ಖಚಿತ ಎಂಬುದು ಅರಿವಾದ ಬಳಿಕ ಅವರು ಹತಾಶರಾಗಿ ಹೀಗೆ ಮಾಡುತ್ತಿದ್ದಾರೆ. ಬಿಜೆಪಿ ಪರವಾಗಿ ಬೀಸುತ್ತಿರುವ ಅಲೆ ಎಷ್ಟು ಜೋರಾಗಿದೆಯೆಂದರೆ, ಅದರಲ್ಲಿ ಟಿಎಂಸಿ ಕೊಚ್ಚಿ ಹೋಗಲಿದೆ

ಜೆ.ಪಿ. ನಡ್ಡಾ, ಬಿಜೆಪಿ ಅಧ್ಯಕ್ಷ


ಪಶ್ಚಿಮ ಬಂಗಾಳವು ಮಹಿಳೆಯರಿಗೆ ಏಕೆ ಸುರಕ್ಷಿತ ಅಲ್ಲ? ಹೆಣ್ಣು ಮಕ್ಕಳಿಗೆ ಶಿಕ್ಷಣ ಮತ್ತು ಸಂಚಾರ ಸೌಲಭ್ಯವನ್ನು ಉಚಿತವಾಗಿ ಒದಗಿಸಲಾಗುವುದು. ಶಾಲೆಗಳಲ್ಲಿ ಹೆಣ್ಣು ಮಕ್ಕಳ ಸುತ್ತ ಸುಳಿದಾಡುವವರನ್ನು ನಿಯಂತ್ರಿಸಲು ಆ್ಯಂಟಿ ರೋಮಿಯೋ ದಳ ರೂಪಿಸಲಾಗುವುದು

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ


ನೀವು (ಚುನಾವಣಾ ಆಯೋಗ) ನನಗೆ ಹತ್ತು ನೋಟಿಸ್ ಬೇಕಿದ್ದರೂ ಕೊಡಿ. ನನ್ನ ಉತ್ತರ ಒಂದೇ ಆಗಿರುತ್ತದೆ. ಹಿಂದೂ, ಮುಸ್ಲಿಂ ಮತಗಳ ವಿಭಜನೆ ವಿರುದ್ಧ ಸದಾ ಮಾತಾಡುತ್ತೇನೆ. ಧರ್ಮದ ನೆಲೆಯಲ್ಲಿ ಮತ ವಿಭಜನೆಯನ್ನು ಯಾವಾಗಲೂ ವಿರೋಧಿಸುತ್ತೇನೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕಸಾಪ: ರಾಜ್ಯಾಧ್ಯಕ್ಷ ಸ್ಥಾನಕ್ಕೆ 22 ಮಂದಿ ಸ್ಪರ್ಧೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯಾಧ್ಯಕ್ಷ ಸ್ಥಾನಕ್ಕೆ ಒಟ್ಟು 22 ಮಂದಿ ಸ್ಪರ್ಧಿಸಿದ್ದು, ಎಲ್ಲರ ನಾಮಪತ್ರವೂ ಸ್ವೀಕೃತಗೊಂಡಿವೆ.

ಪರಿಷತ್ತಿನ ರಾಜ್ಯಾಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಮೇ 9ರಂದು ಚುನಾವಣೆ ನಡೆಯಲಿದೆ. ಏ.7ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ನೀಡಲಾಗಿತ್ತು. ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರ ನೇತೃತ್ವದಲ್ಲಿ ನಾಮಪತ್ರಗಳ ಪರಿಶೀಲನೆ ಗುರುವಾರ ನಡೆದಿದೆ. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸಲ್ಲಿಕೆಯಾಗಿರುವ ಎಲ್ಲ 22 ಅಭ್ಯರ್ಥಿಗಳ ನಾಮಪತ್ರವೂ ಕ್ರಮಬದ್ಧವಾಗಿವೆ ಎಂದು ಚುನಾವಣಾಧಿಕಾರಿ ಅಂಗೀಕರಿಸಿದ್ದಾರೆ.

ವ.ಚ. ಚನ್ನೇಗೌಡ, ಮಹೇಶ್ ಜೋಶಿ, ಸಂಗಮೇಶ ಬಾದವಾಡಗಿ, ಸಿ.ಕೆ. ರಾಮೇಗೌಡ, ರಾಜಶೇಖರ ಮುಲಾಲಿ, ಬಸವರಾಜ ಶಿ. ಹಳ್ಳೂರ, ಬಾಡದ ಬದ್ರಿನಾಥ್, ಶಿವರಾಜ ಪಾಟೀಲ, ಮ.ಚಿ. ಕೃಷ್ಣ, ಸರಸ್ವತಿ ಶಿವಪ್ಪ ಚಿಮ್ಮಲಗಿ, ವೈ. ರೇಣುಕಾ, ಶೇಖರಗೌಡ ಮಾಲಿ ಪಾಟೀಲ, ಕೆ. ರತ್ನಾಕರ ಶೆಟ್ಟಿ, ವಾಲ್ಮೀಕಿ ಉರ್ಫ್, ಮಾಯಣ್ಣ, ಪ್ರಮೋದ್ ಹಳಕಟ್ಟಿ, ಶಿವಪ್ಪ ಮಲ್ಲಪ್ಪ ಬಾಗಲ, ಕೆ. ರವಿ ಅಂಬೇಕರ, ಕೆ.ಎಂ. ರೇವಣ್ಣ, ನ.ಶ್ರೀ. ಸುಧೀಂದ್ರರಾವ್, ಶರಣಬಸಪ್ಪ ಕಲ್ಲಪ್ಪ ದಾನಕೈ ಹಾಗೂ ಶಿವರುದ್ರಸ್ವಾಮಿ ಅವರು ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು.

ಕೇರಳ ಗಡಿನಾಡ ಘಟಕಕ್ಕೆ ಸುಬ್ರಮಣ್ಯ ವಿ. ಭಟ್, ರಾಧಾಕೃಷ್ಣ, ಆಂಧ್ರ ಪ್ರದೇಶ ಗಡಿನಾಡ ಘಟಕಕ್ಕೆ ಕುಣೆ ಬಾಲರಾಜ್, ಎಚ್.ಬಿ. ಶಿವಕುಮಾರ್, ಅಂಜನ್ ಕುಮಾರ್, ಶಶಿಧರ್, ತಿಪ್ಪೇಸ್ವಾಮಿ ಜಿ.ಎಸ್., ಹನುಮಂತರಾಯ ಜಿ.ಕೆ., ಎಸ್.ಕೆ. ಜಯಶಂಕರ್, ಮಹಾರಾಷ್ಟ್ರ ಗಡಿನಾಡ ಘಟಕಕ್ಕೆ ಎಸ್.ಎಸ್. ಸಾಲೀಮಠ, ಸೋಮಶೇಖರ ಜಮಶೆಟ್ಟಿ, ಮಲ್ಲಿಕಾಜಪ್ಪ ಸೋಮಶೇಖರ ಮಡ್ಡೆ ಹಾಗೂ ತಮಿಳುನಾಡು ಘಟಕಕ್ಕೆ ಮಧು ಸಿ.ಸಿ., ತಮಿಳ್ ಸೆಲ್ವಿ, ಬಿ.ಎಸ್. ವಿನಯ್ ಅವರು ನಾಮಪತ್ರ ಸಲ್ಲಿಸಿದ್ದರು.

ತಮಿಳುನಾಡು, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ಗಡಿನಾಡು ಘಟಕ ಕಸಾಪ ಚುನಾವಣೆಗೆ ಸಂಬಂಧಿಸಿದಂತೆ ನಾಮಪತ್ರಗಳ ಪರಿಶೀಲನೆ ಪ್ರಗತಿ ಹಂತದಲ್ಲಿದ್ದು, ಶುಕ್ರವಾರ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗುವುದು. ಗೋವಾ ಗಡಿನಾಡ ಘಟಕಕ್ಕೆ ನಾಮಪತ್ರಗಳು ಸಲ್ಲಿಕೆಯಾಗಿರುವುದಿಲ್ಲ ಎಂದು ವಿಶೇಷ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಏ.12ರ ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಅವಕಾಶ ಇರಲಿದೆ. ಬಳಿಕ ಅಂತಿಮವಾಗಿ ಸ್ಪರ್ಧೆಯಲ್ಲಿ ಉಳಿದಿರುವ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಪ್ರಕಟಿಸಲಾಗುತ್ತದೆ.

ಬಿಜೆಪಿಗೆ ಮತ ಹಾಕುವಂತೆ ಹಣ ಹಂಚಿಕೆ; ವಿಡಿಯೊ ವೈರಲ್

ಪ್ರಜಾವಾಣಿ ವಾರ್ತೆ


ಮಸ್ಕಿ ತಾಲ್ಲೂಕಿನ ಹಾಲಾಪುರದಲ್ಲಿ ಬಿಜೆಪಿ ಕಾರ್ಯಕರ್ತರೊಬ್ಬರು ಜನರನ್ನು ಉದ್ದೇಶಿಸಿ ಮಾತನಾಡುತ್ತಿರುವುದು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3dPj4wM

ಮಸ್ಕಿ (ರಾಯಚೂರು ಜಿಲ್ಲೆ): ಮಸ್ಕಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಹರ್ವಾಪುರ ಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತರು ಜನರನ್ನು ಸರದಿಯಲ್ಲಿ ನಿಲ್ಲಿಸಿ ತಲಾ ₹200ರ ನೋಟುಗಳನ್ನು ಹಂಚುತ್ತಿರುವ ವಿಡಿಯೊ ವೈರಲ್ ಆಗಿದೆ.

'ಈಗ ಕೊಡುತ್ತಿರುವುದನ್ನು ತೆಗೆದುಕೊಳ್ಳಿ. ಮತದಾನದ ಮುನ್ನಾದಿನ ಏನು ತಲುಪಿಸಬೇಕೋ ಅದು ಕೂಡಾ ತಲುಪುತ್ತದೆ. ದಯವಿಟ್ಟು ಪ್ರತಾಪಗೌಡರಿಗೆ ಮತ ಕೊಡಿ' ಎಂದು ಮನವಿ ಮಾಡಿರುವುದು ವಿಡಿಯೊದಲ್ಲಿದೆ.

ಕರಪತ್ರವೊಂದನ್ನು ಪ್ರದರ್ಶಿಸಿ 'ಮತಪತ್ರದಲ್ಲಿ 1ನೇ ನಂಬರ್ ಪ್ರತಾಪಗೌಡರದ್ದು. ಅವರಿಗೇ ಮತಕೊಡಿ. ನಿಮಗೆ ಏನು ಬೇಕೋ ಅದು ಅಭಿವೃದ್ಧಿ ಮಾಡುತ್ತಾರೆ' ಎಂದೂ ಕಾರ್ಯಕರ್ತರೊಬ್ಬರು ಹೇಳುತ್ತಾರೆ.

'ಕಾರ್ಯಕರ್ತ ಮಾತನಾಡುವ ಭಾಷಾ ಶೈಲಿ ಗಮನಿಸಿದರೆ ಆತ ಬೆಂಗಳೂರು ಕಡೆಯವ ಎಂಬುದು ಸ್ಪಷ್ಟವಾಗಿದೆ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಕಮೆಂಟ್ ಹಾಕಿದ್ದಾರೆ.

'ವಿಡಿಯೊಗಳಲ್ಲಿ ಏನಿದೆ ಎಂಬುದರ ಸತ್ಯಾಂಶ ಗೊತ್ತಾಗಿಲ್ಲ. ಕೂಲಂಕಷ ಪರಿಶೀಲಿಸಿದ ಬಳಿಕ ಪ್ರತಿಕ್ರಿಯಿಸುವೆ' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ರಮಾನಂದ ಯಾದವ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಜೆಪಿ ಕಾರ್ಯಕರ್ತರು ರಾಜಾರೋಷವಾಗಿ ಹಣ ಹಂಚುತ್ತಿದ್ದರೂ ಚುನಾವಣಾ ಅಧಿಕಾರಿಗಳು ಬಾಯಿ, ಕಣ್ಣು ಮುಚ್ಚಿಕೊಂಡಿದ್ದಾರೆ' ಎಂದು ಕಾಂಗ್ರೆಸ್ ಮುಖಂಡರು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ.

ಹಣ ಹಂಚಿಕೆ ಆರೋಪ: ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ

ತುರ್ವಿಹಾಳ (ರಾಯಚೂರು ಜಿಲ್ಲೆ): ಮಸ್ಕಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ತುರ್ವಿಹಾಳ ಪಟ್ಟಣದ ವಾರ್ಡ್ ಸಂಖ್ಯೆ 1, 2 ಮತ್ತು 3ರಲ್ಲಿ ಹಾಸನ ಮೂಲದ ಬಿಜೆಪಿ ಕಾರ್ಯಕರ್ತರು ಜಾತಿವಾರು ಸರ್ವೆ ನಡೆಸಿ ಹಣ ಹಂಚಿಕೆ ಮಾಡಲು ಬಂದಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಪಟ್ಟಣದ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಗುರುವಾರ ಧರಣಿ ನಡೆಸಿದರು.

'ಹಾಸನ ಜಿಲ್ಲೆಯ ಒಬ್ಬ ಮಹಿಳೆ, ಇಬ್ಬರು ಯುವಕರು ಹಾಗೂ ಕುರುಕುಂದಾ ಗ್ರಾಮದ ವ್ಯಕ್ತಿಯು ತುರ್ವಿಹಾಳ ಪೊಲೀಸ್ ಠಾಣೆಯ ಸುತ್ತಮುತ್ತಲಿನ ಓಣಿಗಳಲ್ಲಿ ಯಾವ ಜಾತಿ ಜನ ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂದು ಜನರನ್ನು ಕೇಳುತ್ತಾ ಕೆಲವರಿಗೆ ಹಣ ಕೊಡುತ್ತ ಹೊರಟಿದ್ದರು' ಎಂದು ಆರೋಪಿಸಿದ ಕಾಂಗ್ರೆಸ್ ಕಾರ್ಯಕರ್ತರು, ಅವರನ್ನು ಪೊಲೀಸ್ ಠಾಣೆಗೆ ಕರೆದೊಯ್ದು, ಹಣ ಹಂಚಿಕೆ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳುವಂತೆ ಆಗ್ರಹಿಸಿದರು.

ಪಿಎಸ್‌ಐ ಯರಿಯಪ್ಪ ಅಂಗಡಿ ಅವರು, 'ಸರ್ವೆ ಎಲ್ಲರೂ ಮಾಡಬಹುದು. ಹಣ ಹಂಚಿಕೆ ಮಾಡಿದ್ದರೆ ಚುನಾವಣೆ ಆಯೋಗಕ್ಕೆ ದೂರು ಕೊಡಿ' ಎಂದರು. ಇದರಿಂದ ರೊಚ್ಚಿಗೆದ್ದ ಕಾಂಗ್ರೆಸ್ ಕಾರ್ಯಕರ್ತರು ಪಿಎಸ್‌ಐ ಬಿಜೆಪಿಗೆ ಬೆಂಬಲಿಸುತ್ತಿದ್ದಾರೆ ಎಂದು ಆರೋಪಿಸಿ ಧರಣಿ ಆರಂಭಿಸಿದರು. ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್ ಸ್ಥಳಕ್ಕೆ ಧಾವಿಸಿ ಕ್ರಮಕ್ಕೆ ಒತ್ತಾಯಿಸಿದರು. 'ಯಾವ ಜಾತಿಯ ಎಷ್ಟು ಜನರಿದ್ದಾರೆ ಎಂದು ಸಮೀಕ್ಷೆ ಮಾಡುತ್ತಿದ್ದಾಗ ಕಾಂಗ್ರೆಸ್ ಕಾರ್ಯಕರ್ತರು ಸುಳ್ಳು ಆರೋಪ ಮಾಡಿ ಹಲ್ಲೆ ನಡೆಸಿದ್ದಾರೆ. ಅವರ ವಿರುದ್ಧವೂ ಪ್ರಕರಣ ದಾಖಲಿಸಬೇಕು' ಎಂದು ಬಿಜೆಪಿಯ ಮಹಿಳಾ ಕಾರ್ಯಕರ್ತರೊಬ್ಬರು ಪಟ್ಟುಹಿಡಿದರು. ಪೊಲೀಸರು ಉಭಯ ಪಕ್ಷಗಳವರನ್ನು ಸಮಾಧಾನ ಪಡಿಸಿ ಕಳಿಸಿದರು.

'ಶಾಲೆ ಮುಂದುವರಿಸಲು ರೂಪಿಸಿರುವ ಯೋಜನೆಗಳೇನು'



ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಶಾಲಾ–ಕಾಲೇಜುಗಳ ತರಗತಿಗಳನ್ನು ಮುಂದುವರಿಸಲು ರೂಪಿಸಿರುವ ಕ್ರಿಯಾ ಯೋಜನೆ ಸಲ್ಲಿಸುವಂತೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಮುಂದುವರಿಸಲು ನಿರ್ದೇಶನ ನೀಡುವಂತೆ ಕೋರಿ ಎಂ.ರಾಧಾ ಮತ್ತು ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವಿ. ನಾಗರತ್ನ ನೇತೃತ್ವದ ವಿಭಾಗೀಯ ಪೀಠ, ಏ.22 ರೊಳಗೆ ವರದಿ ಸಲ್ಲಿಸುವಂತೆ ಸೂಚಿಸಿತು. 'ಮಕ್ಕಳು ಶಾಲೆಗಳಿಗೆ ಹೋಗದಿದ್ದರೆ ಅವರನ್ನು ಬಾಲ ಕಾರ್ಮಿಕ ಪದ್ಧತಿ ಮತ್ತು ಕಳ್ಳಸಾಗಣೆಗೆ ಬಳಸಿಕೊಳ್ಳುವ ಸಾಧ್ಯತೆ ಇದೆ' ಎಂದು ಪೀಠ ಕಳವಳ ವ್ಯಕ್ತಪಡಿಸಿತು. 'ಶಿಕ್ಷಣ ಪಡೆಯುವುದು ಮಕ್ಕಳ ಮೂಲಭೂತ ಹಕ್ಕು. ಅದನ್ನು ಕಾಪಾಡಲು ಸರ್ಕಾರ ಈ ಸವಾಲಿನ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಬೇಕಾಗುತ್ತದೆ. ಮಕ್ಕಳಿಗೆ ಶಿಕ್ಷಣದ ಹಕ್ಕು ಕೊಡಿಸುವ ಸಲುವಾಗಿಯೇ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಕರೆತರುವ ಪ್ರಯತ್ನ ನಡೆಯುತ್ತಿದೆ. ಅದು ಪರಿಪೂರ್ಣವಾಗಿ ಆಗಿದೆಯೇ' ಎಂದು ಪೀಠ ಪ್ರಶ್ನಿಸಿದೆ.

ಮಧ್ಯಾಹ್ನದ ಬಿಸಿಯೂಟದ ಬದಲಿಗೆ ಪಡಿತರವನ್ನು ವಿತರಿಸಲಾಗುತ್ತಿದೆ ಎಂದು ಸರ್ಕಾರ, ನ್ಯಾಯಾಲಯಕ್ಕೆ ಮಾಹಿತಿ ನೀಡಿತು.

'ಹಿಂದಿನ ಶೈಕ್ಷಣಿಕ ವರ್ಷಗಳಿಗೆ ಹೋಲಿಸಿದರೆ ಸುಮಾರು 9 ಸಾವಿರ ಮಕ್ಕಳ ಹಾಜರಾತಿ ಕಡಿಮೆಯಾಗಿದೆ.' ಎಂದು ಅರ್ಜಿದಾರರ ಪರ ವಕೀಲರು ಆತಂಕ ವ್ಯಕ್ತಪಡಿಸಿದರು.

ಕೇರಳ ಲಾಟರಿ: ವಾಚ್‌ಮನ್‌ಗೆ ಒಲಿದ ₹ 1 ಕೋಟಿ ಬಹುಮಾನ

ಪ್ರಜಾವಾಣಿ ವಾರ್ತೆ



ಮೊಯ್ದೀನ್ ಕುಟ್ಟಿ

ಉಳ್ಳಾಲ: ತೊಕ್ಕೊಟ್ಟು ಖಾಸಗಿ ವಾಣಿಜ್ಯ ಸಂಕೀರ್ಣದಲ್ಲಿ ವಾಚ್‌ಮೆನ್ ಆಗಿ ಮೂರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಕೇರಳದ ವ್ಯಕ್ತಿಗೆ ₹1 ಕೋಟಿ ಲಾಟರಿ ಒಲಿದಿದೆ.

ತೊಕ್ಕೊಟ್ಟು ಜಂಕ್ಷನ್‌ನಲ್ಲಿರುವ ಸ್ಮಾರ್ಟ್ ಪ್ಲಾನೆಟ್ ವಸತಿ ಸಂಕೀರ್ಣದಲ್ಲಿ ಭದ್ರತಾ ಕೆಲಸ ಮಾಡುತ್ತಿರುವ ಕೋಯಿಕ್ಕೋಡ್‌ನ ಮೊಯ್ದಿನ್ ಕುಟ್ಟಿ ಅವರಿಗೆ ಕೇರಳ ರಾಜ್ಯ ಭಾಗ್ಯಮಿತ್ರ ಲಾಟರಿಯಲ್ಲಿ ₹ 1 ಕೋಟಿ ಪ್ರಥಮ ಬಹುಮಾನ ಲಭಿಸಿದೆ.

ಮೊಯ್ದೀನ್ ಕುಟ್ಟಿ ಅವರು ಒಮೆಗಾ ಟೈಲರ್ ಅಂಗಡಿಯ ಮಾಲೀಕ ರವಿ ಅವರಿಂದ ₹ 500 ಸಾಲ ಪಡೆದು, ಉಪ್ಪಳದಲ್ಲಿ ಇದೇ 4ರಂದು ಲಾಟರಿ ಖರೀದಿಸಿದ್ದರು. ಹಲವು ದಶಕಗಳಿಂದ ಲಾಟರಿ ಖರೀದಿಸುವ ಗೀಳು ಇಟ್ಟುಕೊಂಡಿದ್ದ ಕುಟ್ಟಿಗೆ ಈ ಬಾರಿ ಭಾಗ್ಯಮಿತ್ರ ಅದೃಷ್ಟ ನೀಡಿದೆ. ಲಾಟರಿಯ ಪ್ರಥಮ ಬಹುಮಾನದ ಐದು ಮಂದಿ ಕೋಟಿ ವಿಜೇತರಲ್ಲಿ ಮೊಯ್ದಿನ್ ಒಬ್ಬರಾಗಿದ್ದಾರೆ.

ಪ್ರಚಾರದಲ್ಲಿ ಮಾಸ್ಕ್ ಕಡ್ಡಾಯ: ನೋಟಿಸ್

ನವದೆಹಲಿ (ಪಿಟಿಐ): ಚುನಾವಣಾ ಪ್ರಚಾರದಲ್ಲಿ ಭಾಗಿಯಾಗುವ ಎಲ್ಲರೂ ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡಿ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಗುರುವಾರ ವಿಚಾರಣೆಗೆ ಎತ್ತಿಕೊಂಡಿದೆ. ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗದ ಪ್ರತಿಕ್ರಿಯೆಗಾಗಿ ನೋಟಿಸ್ ನೀಡಿದೆ.

ಒಲಿಂಪಿಕ್ಸ್‌ಗೆ ಭಾರತದ ಸೇಲಿಂಗ್ ಪಟುಗು

ಗಣಪತಿ–ವರುಣ್ ಜೋಡಿ ಹಾಗೂ ವಿಷ್ಣು ಸರವಣನ್‌ಗೆ ಟೋಕಿಯೊ ಟಿಕೆಟ್



ವರುಣ್ ಅಶೋಕ್ ಠಕ್ಕರ್ ಮತ್ತು ಗಣಪತಿ ಕೇಳಪಂಡ ಚೆಂಗಪ್ಪ –ರಾಯಿಟರ್ಸ್ ಚಿತ್ರ

ನವದೆಹಲಿ (ಪಿಟಿಐ): ಭಾರತದ ಸೇಲಿಂಗ್ ಪಟುಗಳು ಗುರುವಾರ ಐತಿಹಾಸಿಕ ಸಾಧನೆ ಮಾಡಿದರು. ಒಮಾನ್‌ನಲ್ಲಿ ನಡೆದ ಏಷ್ಯನ್ ಅರ್ಹತಾ ಟೂರ್ನಿಯಲ್ಲಿ ಉತ್ತಮ ಸಾಮರ್ಥ್ಯ ತೋರಿದ ವಿಷ್ಣು ಸರವಣನ್, ಗಣಪತಿ ಕೇಳಪಂಡ ಚೆಂಗಪ್ಪ ಮತ್ತು ವರುಣ್ ಠಕ್ಕರ್ ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದರು.

ಬುಧವಾರ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವುದರೊಂದಿಗೆ ತಮಿಳುನಾಡಿನ ನೇತ್ರಾ ಕುಮನನ್ ಈ ಸಾಧನೆ ಮಾಡಿದ ದೇಶದ ಮೊದಲ ಮಹಿಳಾ ಸೇಲಿಂಗ್ ಪಟು ಎಂದೆನಿಸಿಕೊಂಡಿದ್ದರು. ಭಾರತದ ನಾಲ್ವರು ಸ್ಪರ್ಧಿಗಳು ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುತ್ತಿರುವುದು ಮತ್ತು ಮೂರು ವಿಭಿನ್ನ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿರುವುದು ಇದೇ ಮೊದಲು.

'ಸೇಲಿಂಗ್ ವಿಭಾಗದಲ್ಲಿ ಈ ವರೆಗೆ ಭಾರತ ನಾಲ್ಕು ಸಲ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದೆ. ಈ ಬಾರಿ ವಿಶಿಷ್ಟ ಸಾಧನೆ ಮಾಡಲಾಗಿದೆ' ಎಂದು ಭಾರತ ಯಾಚಿಂಗ್ ಸಂಸ್ಥೆಯ ಜಂಟಿ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ದೀಕ್ಷಿತ್ ಹೇಳಿದರು.

'ವರ್ಷಗಳ ಕಠಿಣ ಪರಿಶ್ರಮ, ಪಾಲಕರು ಮತ್ತು ಸಿಬ್ಬಂದಿಯ ಅರ್ಪಣಾ ಭಾವದಿಂದ ಈ ಸಾಧನೆ ಆಗಿದೆ' ಎಂದು ಮುಖ್ಯ ಕೋಚ್ ಥಾಮಸ್ ಜನುಸೆವ್‌ಸ್ಕಿ ಅಭಿಪ್ರಾಯಪಟ್ಟರು.

ಗುರುವಾರ ನಡೆದ ಲೇಜರ್ ಸ್ಟ್ಯಾಂಡರ್ಡ್ ಕ್ಲಾಸ್ ವಿಭಾಗದ ಸ್ಪರ್ಧೆಯಲ್ಲಿ ಅಗ್ರ ಎರಡನೇ ಸ್ಥಾನ ಗಳಿಸಿದ ಸರವಣನ್ ಈ ವಿಭಾಗದಲ್ಲಿ ಸ್ಪರ್ಧಿಸುವ ಮೊದಲ ಕ್ರೀಡಾಪಟು ಎನಿಸಿಕೊಂಡರು. ಇದರ ಬೆನ್ನಲ್ಲೇ ಚೆಂಗಪ್ಪ ಮತ್ತು ಠಕ್ಕರ್ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನ ಗಳಿಸಿದರು. ಈ ಜೋಡಿ 2018ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗಳಿಸಿತ್ತು.

1984ರ ಒಲಿಂಪಿಕ್ಸ್‌ನಲ್ಲಿ ಭಾರತದ ಫಾರೂಕ್ ತಾರಾಪುರ್ ಮತ್ತು ಧ್ರುವ ಭಂಡಾರಿ 470 ಕ್ಲಾಸ್ ವಿಭಾಗದ ಸ್ಪರ್ಧಿಸಿದ್ದರು. 1988ರಲ್ಲಿ ಫಾರೂಕ್ ತಾರಾಪುರ್ ಮತ್ತು ಕೆಲಿ ರಾವ್ ಭಾಗವಹಿಸಿದ್ದರು. 1992ರಲ್ಲಿ ಕೂಡ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಫಾರೂಕ್ 'ಹ್ಯಾಟ್ರಿಕ್' ಸಾಧನೆ ಮಾಡಿದ್ದರು. ಆ ವರ್ಷ ಸೈರಸ್ ಕಾಮಾ ಕೂಡ ಪಾಲ್ಗೊಂಡಿದ್ದರು. 2004ರ ಒಲಿಂಪಿಕ್ಸ್‌ನಲ್ಲಿ ಮಾಳವ್ ಶ್ರಾಫ್ ಮತ್ತು ಸುಮೀತ್ ಪಟೇಲ್ ಭಾಗವಹಿಸಿದ್ದರು.

ಎಎಫ್‌ಸಿ ಕಪ್ ಪ್ರಾಥಮಿಕ ಹಂತದ ಟೂರ್ನಿ: ಮುಸಾವ್‌ಗೆ ಸ್ಥಾನ

ಕಣಕ್ಕಿಳಿಯಲು ಚೆಟ್ರಿ ಸಜ್ಜು


ಸುನಿಲ್ ಚೆಟ್ರಿ

ಬ್ಯಾಂಬೊಲಿಮ್ (ಪಿಟಿಐ): ಭಾರತದ ಖ್ಯಾತ ಆಟಗಾರ ಸುನಿಲ್ ಚೆಟ್ರಿ ಇಲ್ಲಿ ನಡೆಯಲಿರುವ ಎಎಫ್‌ಸಿ ಕಪ್ ಫುಟ್‌ಬಾಲ್ ಟೂರ್ನಿಯ ಪ್ರಾಥಮಿಕ ಹಂತದ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿಯನ್ನು ಮುನ್ನಡೆಸಲಿದ್ದಾರೆ. ಕೋವಿಡ್–19ರಿಂದ ಗುಣಮುಖರಾಗಿರುವ ಅವರು ತಂಡವನ್ನು ಸೇರಿಕೊಂಡಿದ್ದಾರೆ.

ನೇಪಾಳದ ತ್ರಿಭುವನ್ ಆರ್ಮಿ ಎಫ್‌ಸಿಯನ್ನು ಬಿಎಫ್‌ಸಿ ಇದೇ 14ರಂದು ಎದುರಿಸಲಿದೆ. ಬಿಎಫ್‌ಸಿಯ ಅಭ್ಯಾಸ ನಿರತ ಮೂವರು ಆಟಗಾರರಿಗೆ ಕೋವಿಡ್ ಸೋಂಕು ಇರುವುದು ಬುಧವಾರ ದೃಢಪಟ್ಟಿತ್ತು. ತಂಡದ ಆಡಳಿತ ಗುರುವಾರ 29 ಮಂದಿಯ ಬಳಗವನ್ನು ಪ್ರಕಟಿಸಿದ್ದು ಗಾಬನ್‌ನ ಡಿಫೆಂಡರ್ ರೊಂಡು ಮುಸಾವು ಕಿಂಗ್ ಅವರಿಗೆ ಸ್ಥಾನ ನೀಡಲಾಗಿದೆ.

ಕೋಚ್ ಮಾರ್ಕೊ ಪೆಜಿಯೊಲಿ ತಂಡ ಸೇರಿದ ನಂತರ ಮೊದಲ ಪಂದ್ಯಕ್ಕೆ ಸಜ್ಜಾಗುತ್ತಿದ್ದು ಐದು ಮಂದಿ ಕಾಯ್ದಿರಿಸಿದ ಆಟಗಾರರನ್ನು ಆಯ್ಕೆ ಮಾಡಲಾಗಿದೆ. ರೊಂಡು ಮುಸಾವು ಅವರಲ್ಲದೆ ಯುವಾನನ್ ಗೊಂಜಾಲೆಸ್, ಕ್ಲೀಟನ್ ಸಿಲ್ವಾ ಮತ್ತು ಎರಿಕ್ ಪಾರ್ಟಲು ಕೂಡ ವಿದೇಶಿ ಆಟಗಾರರ ಪಟ್ಟಿಯಲ್ಲಿದ್ದಾರೆ. ಕಾಯ್ದಿರಿಸಿದ ಆಟಗಾರರ ಪಟ್ಟಿಯಲ್ಲಿ ಗೋಲ್‌ಕೀಪರ್ ಶಾರೋನ್ ಪಾಡತ್ತಿಲ್, ಮಿಡ್‌ಫೀಲ್ಡರ್ ದಮೈಫಂಗ್ ಲಿಂಗ್ದೊ, ಮೊಹಮ್ಮದ್ ಇನಾಯತ್, ಸ್ಟ್ರೈಕರ್‌ಗಳಾದ ಅಕ್ಷದೀಪ್ ಸಿಂಗ್ ಮತ್ತು ಶಿವಶಕ್ತಿ ನಾರಾಯಣನ್ ಇದ್ದಾರೆ.

ತಂಡ: ಗೋಲ್‌ಕೀಪರ್‌ಗಳು: ಗುರುಪ್ರೀತ್ ಸಿಂಗ್ ಸಂಧು, ಲಾಲ್‌ಥುವಾಮಿಯ ರಾಲ್ಟೆ, ಲಾರಾ ಶರ್ಮಾ, ಶಾರೋನ್ ಪಾಡತ್ತಿಲ್; ಡಿಫೆಂಡರ್‌ಗಳು: ರಾಹುಲ್ ಭೆಕೆ, ಪ್ರತೀಕ್ ಚೌಧರಿ, ಜುವಾನ್ ಗೊಂಜಾಲೆಸ್, ಮುಯಿರಂಗ್, ಅಜಿತ್ ಕುಮಾರ್, ಆಶಿಕ್ ಕುರುಣಿಯನ್, ಜೋ ಜೊಹೆರಿಯಾನ, ಪರಾಗ್ ಶ್ರೀವಸ್, ರೊಂಡು ಮುಸಾವು ಕಿಂಗ್, ಬಿಸ್ವ ದಾರ್ಜಿ; ಮಿಡ್‌ಫೀಲ್ಡರ್‌ಗಳು: ಎರಿಕ್ ಪಾರ್ಟಲು, ಸುರೇಶ್ ವಾಂಗ್ಜಂ, ಹರ್ಮನ್‌ಜೋತ್ ಖಾಬ್ರಾ, ನಂಗ್ಯಾಲ್ ಭೂಟಿಯಾ, ಇಮಾನ್ಯುಯೆಲ್, ದಮೈಫಂಗ್ ಲಿಂಗ್ದೊ, ಮೊಹಮ್ಮದ್ ಇನಾಯತ್; ಫಾರ್ವರ್ಡ್: ಸುನಿಲ್ ಚೆಟ್ರಿ, ಎಡ್ಮಂಡ್ ಲಾಲ್‌ರಿಂಡಿಕಾ, ಉದಾಂತ ಸಿಂಗ್, ಕ್ಲೀಟನ್ ಸಿಲ್ವಾ, ಲಿಯಾನ್ ಆಗಸ್ಟಿನ್, ನೈರೇಮ್ ರೋಷನ್ ಸಿಂಗ್, ಶಿವಶಕ್ತಿ ನಾರಾಯಣನ್, ಅಕ್ಷದೀಪ್ ಸಿಂಗ್.

ಎಎಫ್‌ಸಿ ಚಾಂಪಿಯನ್ಸ್ ಲೀಗ್‌ಗೆ ಗೋವಾ ತಂಡ ಪ್ರಕಟ

ರಾಜ್ಯದ 11 ಆಟಗಾರರು ಒಳಗೊಂಡಂತೆ 28 ಮಂದಿಯ ತಂಡವನ್ನು ಎಎಫ್‌ಸಿ ಚಾಂಪಿಯನ್ಸ್ ಲೀಗ್ ಟೂರ್ನಿಗಾಗಿ ಎಫ್‌ಸಿ ಗೋವಾ ತಂಡವನ್ನು ಪ್ರಕಟಿಸಲಾಗಿದೆ.


ತಂಡ: ಗೋಲ್‌ಕೀಪರ್‌ಗಳು: ಮೊಹಮ್ಮದ್ ನವಾಜ್, ನವೀನ್ ಕುಮಾರ್, ಶುಭಂ ದಾಸ್, ಧೀರಜ್ ಸಿಂಗ್; ಡಿಫೆಂಡರ್‌ಗಳು: ಸ್ಯಾನ್ಸನ್ ಪೆರೇರ, ಸೆರಿಟಾನ್ ಫರ್ನಾಂಡಿಸ್, ಲಿಯಾಂಡರ್ ಡಿ ಕುನ್ಹಾ, ಐವನ್ ಗೊಂಜಾಲೆಸ್, ಮೊಹಮ್ಮದ್ ಅಲಿ, ಜೇಮ್ಸ್ ಡೊನಾಚಿ, ಐಬಂಬ ಧೊಲಿಂಗ್, ಸೇವಿಯರ್ ಗಾಮಾ, ಆದಿಲ್ ಖಾನ್; ಮಿಡ್‌ಫೀಲ್ಡರ್‌ಗಳು: ಎಡು ಬೇಡಿಯಾ, ಗ್ಲಾನ್ ಮಾರ್ಟಿನ್ಸ್, ಪ್ರಿನ್ಸ್‌ಟನ್ ರೆಬೆಲ್ಲೊ, ಬ್ರೆಂಡನ್ ಫರ್ನಾಂಡಿಸ್, ಫ್ರಾಂಕಿ ಬುವಾಮ್, ರೆಡೀಮ್ ತ್ಲಾಂಗ್, ಮಾಕನ್ ವಿಂಕಿ, ಅಲೆಕ್ಸಾಂಡರ್ ರೊಮಾರಿಯೊ, ಅಮರ್‌ಜೀತ್ ಸಿಂಗ್, ರೋಮಿಯೊ ಫರ್ನಾಂಡಿಸ್; ಫಾರ್ವರ್ಡರ್: ಜಾರ್ಜ್ ಒರ್ಟಿಸ್, ದೇವೇಂದ್ರ ಮರ್ಗಾಂವ್ಕರ್, ಇಶಾನ್ ಪಂಡಿತ.

ಟಾಪ್ಸ್ ಯೋಜನೆಯಲ್ಲಿ ಸಾನಿಯಾ

ನವದೆಹಲಿ (ಪಿಟಿಐ): ಖ್ಯಾತ ಟೆನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ ಅವರು ನಾಲ್ಕು ವರ್ಷಗಳ ನಂತರ ಟಾಪ್ಸ್‌ನಲ್ಲಿ (ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಸ್ಕೀಮ್) ಸ್ಥಾನ ಗಳಿಸಿದ್ದಾರೆ. ಬುಧವಾರ ನಡೆದ ಮಿಷನ್ ಒಲಿಂಪಿಕ್ ಘಟಕದ ಸಭೆಯಲ್ಲಿ ಸಾನಿಯಾ ಅವರನ್ನು ಯೋಜನೆಯಲ್ಲಿ ಸೇರಿಸಲು ನಿರ್ಧರಿಸಲಾಯಿತು ಎಂದು ಭಾರತ ಕ್ರೀಡಾ ಪ್ರಾಧಿಕಾರ ತಿಳಿಸಿದೆ.

ಗ್ರ್ಯಾನ್‌ಸ್ಲಾಂ ಪ್ರಶಸ್ತಿ ವಿಜೇತೆ, 34 ವರ್ಷದ ಸಾನಿಯಾ 2017ರಲ್ಲಿ ಟಾಪ್ಸ್‌ಗೆ ಆಯ್ಕೆಯಾಗಿದ್ದರು. ಆದರೆ ಗಾಯದ ಸಮಸ್ಯೆಯಿಂದಾಗಿ ಅವರು ಯೋಜನೆಯಿಂದ ದೂರ ಉಳಿಯಲು ನಿರ್ಧರಿಸಿದ್ದರು.

ಮಗುವಿನ ತಾಯಿಯಾಗಿರುವ ಸಾನಿಯಾ ಗರ್ಭಿಣಿಯಾಗಿದ್ದಾಗ ಟೆನಿಸ್ ಅಂಗಣದಿಂದ ದೂರ ಉಳಿದಿದ್ದರು. ಆದರೆ ಡಬ್ಲ್ಯುಟಿಎಯ ವಿಶೇಷ ರ‍್ಯಾಂಕಿಂಗ್ ಮಾನದಂಡದಡಿ ರ‍್ಯಾಂಕಿಂಗ್‌ನಲ್ಲಿ ಸ್ಥಿರತೆ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಈ ಹಿನ್ನೆಲೆಯಲ್ಲಿ ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದಾರೆ.


ಸಾನಿಯಾ ಮಿರ್ಜಾ


ಐಸಿಸಿ ತಿಂಗಳ ಕ್ರಿಕೆಟಿಗರು ಪ್ರಶಸ್ತಿ: ಪಟ್ಟಿಯಲ್ಲಿ ಪೂನಂ ರಾವತ್, ರಶೀದ್

ರಾಜೇಶ್ವರಿ, ಭುವಿ ಹೆಸರು ಶಿಫಾರಸು

ದುಬೈ (ಪಿಟಿಐ): ಭಾರತದ ಅನುಭವಿ ವೇಗದ ಬೌಲರ್ ಭುವನೇಶ್ವರ್ ಕುಮಾರ್ ಮತ್ತು ಎಡಗೈ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ್ ಅವರ ಹೆಸರನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ಐಸಿಸಿ) ಮಾರ್ಚ್ ತಿಂಗಳ ಆಟಗಾರರ ಪ್ರಶಸ್ತಿಗೆ ಶಿಫಾರಸು ಮಾಡಲಾಗಿದೆ.

ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ಭುವನೇಶ್ವರ್ ಕುಮಾರ್ ಅವರು ಅಮೋಘ ಸಾಮರ್ಥ್ಯ ತೋರಿದ್ದರು. ದಕ್ಷಿಣ ಆಫ್ರಿಕಾ ಮಹಿಳಾ ತಂಡದ ವಿರುದ್ಧದ ಸರಣಿಯಲ್ಲಿ ಕರ್ನಾಟಕದ ರಾಜೇಶ್ವರಿ ಗಾಯಕವಾಡ್ ಅತಿ ಹೆಚ್ಚು ವಿಕೆಟ್ ಗಳಿಸಿದ ಬೌಲರ್ ಎನಿಸಿಕೊಂಡಿದ್ದರು.


ರಾಜೇಶ್ವರಿ ಗಾಯಕವಾಡ್ –ಎಎಫ್‌ಪಿ ಚಿತ್ರ


ಭುವನೇಶ್ವರ್ ಕುಮಾರ್ –ಎಎಫ್‌ಪಿ ಚಿತ್ರ

ಪುರುಷರ ವಿಭಾಗದಲ್ಲಿ ಅಫ್ಗಾನಿಸ್ತಾನದ ಲೆಗ್ ಸ್ಪಿನ್ನರ್ ರಶೀದ್ ಖಾನ್ ಮತ್ತು ಜಿಂಬಾಬ್ವೆಯ ಸೀನ್ ವಿಲಿಯಮ್ಸ್, ಮಹಿಳೆಯರ ವಿಭಾಗದಲ್ಲಿ ದಕ್ಷಿಣ ಆಫ್ರಿಕಾದ ಲಿಜೆಲಿ ಲೀ ಮತ್ತು ಭಾರತದ ಬ್ಯಾಟರ್ ಪೂನಂ ರಾವತ್ ಅವರ ಹೆಸರನ್ನೂ ಶಿಫಾರಸು ಮಾಡಲಾಗಿದೆ. ಇಂಗ್ಲೆಂಡ್ ಎದುರಿನ ಏಕದಿನ ಸರಣಿಯಲ್ಲಿ ಭುವನೇಶ್ವರ್ ಕುಮಾರ್ ಆರು ವಿಕೆಟ್ ಕಬಳಿಸಿದ್ದರು. ಟಿ20 ಸರಣಿಯಲ್ಲಿ ನಾಲ್ಕು ವಿಕೆಟ್ ಗಳಿಸಿದ್ದರು. ರಶೀದ್ ಖಾನ್ ಜಿಂಬಾಬ್ವೆ ಎದುರಿನ ಟೆಸ್ಟ್ ಸರಣಿಯಲ್ಲಿ 11 ವಿಕೆಟ್ ಉರುಳಿಸಿದ್ದರು. ವಿಲಿಯಮ್ಸ್ 264 ರನ್ ಗಳಿಸಿ ಎರಡು ವಿಕೆಟ್ ಕೂಡ ಕೆಡವಿದ್ದರು. ರಾಜೇಶ್ವರಿ ಗಾಯಕವಾಡ್ ಏಕದಿನ ಸರಣಿಯಲ್ಲಿ 3.56ರ ಇಕಾನಮಿಯಲ್ಲಿ ಒಟ್ಟು ಎಂಟು ವಿಕೆಟ್ ಉರುಳಿಸಿದ್ದರು. ಟಿ20 ಸರಣಿಯಲ್ಲಿ ನಾಲ್ಕು ವಿಕೆಟ್ ಉರುಳಿಸಿದ್ದರು. ಪೂನಂ ರಾವತ್ ಏಕದಿನ ಸರಣಿಯಲ್ಲಿ 263 ರನ್ ಗಳಿಸಿದ್ದರು.



ಪ್ರಶಸ್ತಿ ಗೆದ್ದ ಮಾಡರ್ನ್ ಗರ್ಲ್ಸ್ ಎಫ್‌ಸಿ ತಂಡದ ಆಟಗಾರ್ತಿಯರ ಸಂಭ್ರಮ

ಫುಟ್‌ಬಾಲ್: ಮಾಡರ್ನ್ ಗರ್ಲ್ಸ್‌ಗೆ ಪ್ರಶಸ್ತಿ

ಬೆಂಗಳೂರು: ಮಾಡರ್ನ್ ಗರ್ಲ್ಸ್ ಎಫ್‌ಸಿ ತಂಡದವರು ಇಲ್ಲಿ ನಡೆದ ರಾಜ್ಯ ಫುಟ್‌ಬಾಲ್ ಸಂಸ್ಥೆ ಆಶ್ರಯದ ಮಹಿಳೆಯರ ಸೆವೆನ್ ಎ ಸೈಡ್ ಲೀಗ್‌ನ ಪ್ರಶಸ್ತಿ ಗೆದ್ದುಕೊಂಡರು.

ಗುರುವಾರ ನಡೆದ ಫೈನಲ್ ಪಂದ್ಯದಲ್ಲಿ ಮಾಡರ್ನ್ ತಂಡ ಪಾಸ್ ಎಫ್‌ಸಿಯನ್ನು 3–1 ಗೋಲುಗಳಿಂದ ಮಣಿಸಿತು. ಮಾಡರ್ನ್ ಪರ ಮೈತ್ರೇಯಿ 23 ಮತ್ತು 33ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಶ್ರೇಯಾ 25ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರು. ಪಾಸ್ ತಂಡದ ಪರ ರಫಿಯಾ ಫಾತಿಮಾ 20ನೇ ನಿಮಿಷದಲ್ಲಿ ಗೋಲು ಗಳಿಸಿ ಸೋಲಿನ ಅಂತರ ಕಡಿಮೆ ಮಾಡಿದರು.

ಫ್ರೆಂಚ್ ಓಪನ್ ಆರಂಭ ವಿಳಂಬ

ಪ್ಯಾರಿಸ್ (ಎಎಫ್‌ಪಿ): ಕೋವಿಡ್ ನಿಯಂತ್ರಣಕ್ಕಾಗಿ ಹೇರಿರುವ ನಿರ್ಬಂಧಗಳಿಂದಾಗಿ ಈ ಬಾರಿಯ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯನ್ನು ಒಂದು ವಾರ ಮುಂದೂಡಲಾಗಿದೆ. ಮೇ 30ರಿಂದ ಜೂನ್ 13ರ ವರೆಗೆ ಟೂರ್ನಿಯನ್ನು ಏರ್ಪಡಿಸಲಾಗುವುದು ಎಂದು ಫ್ರೆಂಚ್ ಟೆನಿಸ್ ಫೆಡರೇಷನ್ (ಎಫ್‌ಎಫ್‌ಟಿ) ತಿಳಿಸಿದೆ. ಫ್ರೆಂಚ್ ಓಪನ್ ಟೂರ್ನಿ ವಿಳಂಬವಾಗುವುದರಿಂದ ವಿಂಬಲ್ಡನ್ ವೇಳಾಪಟ್ಟಿಯಲ್ಲಿ ಯಾವುದೇ ವ್ಯತ್ಯಯ ಆಗಲಾರದು ಎಂದು ತಿಳಿಸಲಾಗಿದೆ.

ಟೆನಿಸ್: ಫೈನಲ್‌ಗೆ ತನುಷ್, ತನ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರ ಶ್ರೇಯಾಂಕದ ತನುಷ್ ಜಿ ಮತ್ತು ಶ್ರೀ ತನ್ವಿ ಇಲ್ಲಿನ ಟಾಪ್ ಸ್ಪಿನ್ ಅಕಾಡೆಮಿಯಲ್ಲಿ ನಡೆಯುತ್ತಿರುವ ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಬಾಲಕರ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ತನುಷ್ 3-6, 6-3, 6-2ರಲ್ಲಿ ಪ್ರಜ್ವಲ್ ಹೆಗ್ಗೆರೆ ವಿರುದ್ಧ ಜಯ ಗಳಿಸಿದರೆ ಬಾಲಕಿಯರ ವಿಭಾಗದಲ್ಲಿ ಶ್ರೀ ತನ್ವಿ 6-1, 6-3ರಲ್ಲಿ ಉಮಾಮ್ ಅಹ ಮ್ಮದ್ ಎದುರು ಜಯ ಗಳಿಸಿದರು.


ಬಾಲಕಿಯರ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ ತನ್ವಿ ಅವರ ಆಟದ ಶೈಲಿ

ಫೈನಲ್‌ನಲ್ಲಿ ತನುಷ್ ಎರಡನೇ ಶ್ರೇಯಾಂಕದ ಆರಾಧ್ಯ ದ್ವಿವೇದಿ ಎದುರು ಸೆಣಸುವರು. ಆರಾಧ್ಯ 6-2, 6-4ರಲ್ಲಿ ಕ್ಷಿತಿಜ್ ವಿರುದ್ಧ ಗೆದ್ದರು. ತನ್ವಿ ಫೈನಲ್‌ನಲ್ಲಿ ಅಣ್ವಿ ಪುನಂಗಂಟಿ ಅವರನ್ನು ಎದುರಿಸುವರು. ಅಣ್ವಿ 6-3, 6-7 (3), 6-4ರಲ್ಲಿ ಕಾಶ್ವಿ ಸುನಿಲ್ ಎದುರು ಜಯ ಗಳಿಸಿದರು.

ಆಸ್ಪತ್ರೆಯಿಂದ ಮನೆಗೆ ಮರಳಿದ ಸಚಿನ್

ಮುಂಬೈ (ಪಿಟಿಐ): ಕೋವಿಡ್‌ನಿಂದ ಗುಣಮುಖರಾಗಿರುವ ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಗುರುವಾರ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ.

ಅವರು ಮನೆಯಲ್ಲಿ ಕೆಲವು ದಿನಗಳ ವರೆಗೆ ಪ್ರತ್ಯೇಕವಾಸದಲ್ಲಿ ಇರಲಿದ್ದಾರೆ.

‘ನಾನು ಮನೆಗೆ ಬಂದಿದ್ದೇನೆ. ಪ್ರತ್ಯೇಕವಾಸದಲ್ಲಿದ್ದು ವಿಶ್ರಾಂತಿ ಪಡೆಯಲಿದ್ದೇನೆ. ನಾನು ಗುಣಮುಖವಾಗುವಂತೆ ಶುಭ ಹಾರೈಸಿದ ಎಲ್ಲರಿಗೂ ಕೃತಜ್ಞತೆಗಳು’ ಎಂದು ಮಾಸ್ಟರ್ ಬ್ಲಾಸ್ಟರ್ ಸಚಿನ್ ಟ್ವೀಟ್ ಮಾಡಿದ್ದಾರೆ.

‘ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ನೀಡಿದ ವೈದ್ಯರು ಮತ್ತು ಸಿಬ್ಬಂದಿಗೆ ಧನ್ಯವಾದಗಳು. ಕಳೆದೊಂದು ವರ್ಷಕ್ಕೂ ಹೆಚ್ಚು ಕಾಲದಿಂದ ಕೊರೊನಾ ವಿರುದ್ಧದ ಹೋರಾಟದಲ್ಲಿ ತೊಡಗಿಕೊಂಡಿರುವ ಆರೋಗ್ಯ ಕಾರ್ಯಕರ್ತರ ಸೇವೆ ಅಭಿನಂದನೀಯ’ ಎಂದೂ ಉಲ್ಲೇಖಿಸಿದ್ದಾರೆ.

ಮಾರ್ಚ್ 27ರಂದು ಸಚಿನ್ ಗೆ ಕೋವಿಡ್ ಇರುವುದು ಖಚಿತವಾಗಿತ್ತು. ಏಪ್ರಿಲ್ 2ರಂದು ಅವರು ಆಸ್ಪತ್ರೆಗೆ ದಾಖಲಾಗಿದ್ದರು.

ಯೂತ್ ಬಾಕ್ಸಿಂಗ್: ಭಾರತ ತಂಡದಲ್ಲಿ ಬೇಬಿರೋಜಿಸನಾ

ನವದೆಹಲಿ (ಪಿಟಿಐ): ಈ ವರ್ಷದ ಎಐಬಿಎ ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ಗೆ ಭಾರತ ತಂಡಗಳನ್ನು ಪ್ರಕಟಿಸ ಲಾಗಿದೆ.

ಇದೇ 10ರಿಂದ 24ರವರೆಗೆ ಪೋಲೆಂಡ್‌ನ ಕಿಯೆಲ್ಸೆಯಲ್ಲಿ ಚಾಂಪಿಯನ್‌ಷಿಪ್ ನಡೆಯಲಿದೆ. 2019ರ ಏಷ್ಯನ್ ಯೂತ್ ಚಾಂಪಿಯನ್ ನೋರೆಮ್ ಬೇಬಿರೋಜಿಸನಾ ಚಾನು (51 ಕೆಜಿ ವಿಭಾಗ), ವಿಂಕಾ (60 ಕೆಜಿ), ಸನಾ ಮಚಾ ಚಾನು (75 ಕೆಜಿ), ಅಲ್ಫಿಯಾ ಪಠಾಣ್ (81 + ಕೆಜಿ) ಹಾಗೂ ಮೂರು ಬಾರಿ ಖೇಲೊ ಇಂಡಿಯಾ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದಿರುವ ಅರುಂಧತಿ ಚೌಧರಿ (69 ಕೆಜಿ) ಮಹಿಳಾ ತಂಡದಲ್ಲಿರುವ ಪ್ರಮುಖರು.

ಗೀತಿಕಾ (48 ಕೆಜಿ), ಆರ್ಷಿ ಖಾನಮ್ (54 ಕೆಜಿ), ಪೂನಂ (57 ಕೆಜಿ), ನಿಶಾ (64 ಕೆಜಿ) ಹಾಗೂ ಖುಷಿ (81 ಕೆಜಿ) ತಂಡದ ಇನ್ನುಳಿದ ಸದಸ್ಯರು.

ಏಷ್ಯನ್ ಯೂತ್ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಅಂಕಿತ್ ನರ್ವಾಲ್ (64 ಕೆಜಿ), ಏಷ್ಯನ್ ಜೂನಿಯರ್ ಚಾಂಪಿಯನ್ ಚೋಂಗತಮ್ ವಿಶ್ವಾಮಿತ್ರ (49 ಕೆಜಿ) ಇದ್ದಾರೆ. ವಿಕಾಸ್ (52 ಕೆಜಿ), ಸಚಿನ್ (56 ಕೆಜಿ), ಆಕಾಶ್ ಗೋರ್ಖಾ (60 ಕೆಜಿ), ಸುಮಿತ್ (69 ಕೆಜಿ), ಮನೀಷ್ (75 ಕೆಜಿ), ವಿನೀತ್ (81 ಕೆಜಿ), ವಿಶಾಲ್ ಗುಪ್ತಾ (91 ಕೆಜಿ) ಹಾಗೂ ಜುಗ್ನೂ (91 + ಕೆಜಿ) ಪುರುಷರ ತಂಡದಲ್ಲಿರುವ ಬಾಕ್ಸರ್‌ಗಳು.

ಸ್ಕೇಟಿಂಗ್: ಕುಸುಮಾಗೆ ಮೂರು ಚಿನ್ನದ ಪದಕ

ಬೆಂಗಳೂರು: ನಗರದ ಕುಸುಮಾ ಸುರೇಶ್ ಗೌಡ ಪಂಜಾಬ್‌ನ ಮೊಹಾಲಿಯ ದೇಲ್‌ಪುರದಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ನಗರದ ವಿದ್ಯಾನಿಕೇತನ ಶಾಲೆಯ 4ನೇ ತರಗತಿ ವಿದ್ಯಾರ್ಥಿನಿ ಕುಸುಮಾ, 9ರಿಂದ 11 ವರ್ಷದ ವರ್ಷದೊಳಗಿನವರ ಒನ್ ರೌಂಡ್ ಲ್ಯಾಪ್ ಹಾಗೂ 500 ಮೀಟರ್ ವಿಭಾಗದಲ್ಲಿ ಪದಕಗಳನ್ನು ಜಯಿಸಿದರು.